
ಪುಸ್ತಕ ಪ್ರಪಂಚ

ಜೂನ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೬ ಸಂಚಿಕೆ ೯

ಜೂನ್-೧೯೯೬

ಮುಖ ಚಿತ್ರ :
ಹೆಚ್. ಡಿ. ದೇವೇಗೌಡರು
ಪ್ರಧಾನ ಮಂತ್ರಿ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-570 006

ನೂತನ ಪ್ರಧಾನಿಗೆ ಜಯವಾಗಲಿ

ಮಣ್ಣಿನ ಮಗ ದೆಹಲಿಯ ಗಾದಿಯನ್ನೇರಿದಾಗ ತಮಗೆ ಸಂತೋಷವಾಗುತ್ತದೆಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹೇಳುತ್ತಿದ್ದುದುಂಟು. ಶ್ರೀ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡರು ಪ್ರಧಾನಿಯಾಗಲಾಗಿ ಸ್ವಾತಂತ್ರ್ಯ ಬಂದ ಸುಮಾರು ಅರ್ಧ ಶತಮಾನದ ನಂತರ ಗಾಂಧೀಜಿಯ ಬಯಕೆ ಪೂರೈಸಿದಂತಾಗಿದೆ.

ಒಬ್ಬರ ಮೇಲೊಬ್ಬರು ದಕ್ಷಿಣ ಭಾರತದ ನಾಯಕರು ಪ್ರಧಾನಿಯಾಗುತ್ತಾರೆಂದು ಐದು ವರ್ಷಗಳ ಹಿಂದೆ ಸಾಮಾನ್ಯರಿರಲಿ, ಯಾವ ಜೋಯಿಸನೂ ನಿರೀಕ್ಷಿಸುವಂತಿರಲಿಲ್ಲ. ಭಗವತ್ಕೃಪೆ ಎಲ್ಲಿ, ಯಾವಾಗ, ಹೇಗೆ, ಯಾವ ಮಾಧ್ಯಮದ ಮೂಲಕ ಅವತರಿಸುತ್ತದೆಂಬುದನ್ನು ಯಾವ ಭವಿಷ್ಯಜ್ಞನೂ ಕಣಿ ನುಡಿಯಲಾರ. ಮಾನವ ಜೀವನದಲ್ಲಿ ಅನೇಕ ಘಟನೆಗಳು ಪವಾಡಗಳಂತೆ ನಡೆದು ಹೋಗುತ್ತವೆ.

ದೊಡ್ಡ ಮರದ ಕೆಳಗೆ, ಸೀಗೆಯ ಕಾಡಿನಲ್ಲಿ ಎಷ್ಟೇ ಶಕ್ತಿಯುತವಾಗಿದ್ದರೂ ಬೇರೆ ಗಿಡ ಮರ ಮೆಳೆಗಳು ಪೂರ್ಣಾಕಾರದಲ್ಲಿ ಬೆಳೆಯಲಾರವು. ಕುರುಚಲು ಕಾಡಿನ ನಡುವೆ ಸಾಮಾನ್ಯ ವೃಕ್ಷವೂ ಗಗನ ಚುಂಬಿಯಾಗಿ ಬೆಳೆಯುತ್ತದೆ. ಇದು ಇಂದಿನ ದೇಶದ ಪರಿಸ್ಥಿತಿ. ನೆಹ್ರೂ ಯುಗದಲ್ಲಿ ಅನೇಕ ಮಹಾ ವ್ಯಕ್ತಿಗಳು ಕುರುಚಲಾಗಿಯೇ ಉಳಿದು ಬಿಟ್ಟರು. ರಾಜಾಜಿ ಪಟೇಲ್ ಅಂಬೇಡ್ಕರ್ ನಿಜಲಿಂಗಪ್ಪ ಹನುಮಂತಯ್ಯ ರಂಥವರು ನೆಹ್ರೂಗಿಂತ ಕಡಮೆಯೇನಲ್ಲ. ಇಂದಿರಾ ರಾಜೀವರು ಅವರಿಗೆಂದಿಗೂ ಸಮನಾಗಲಾರರು, ಇದುವೆ ವಿಧಿಲೀಲೆ!

ಭೌಗೋಳಿಕ ಸಂಪತ್ತು ಮತ್ತು ಸಾಮೂಹಿಕ ಪ್ರತಿಭೆಯನ್ನು ಗಮನದಲ್ಲಿಟ್ಟುಕೊಂಡರೆ, ನೆಹರೂವಿಂದ ಮೊದಲುಗೊಂಡು ನರಸಿಂಹರಾಯರ ತನಕ ಎಲ್ಲ ಪ್ರಧಾನಿಗಳೂ ಕರ್ನಾಟಕಕ್ಕೆ ಅನ್ಯಾಯವೆಸಗಿದ್ದಾರೆಂದೇ ಹೇಳಬೇಕು. ಈ ಅನ್ಯಾಯಕ್ಕೆ ಇಲ್ಲಿಯ ನಾಯಕರ ಕುಬ್ಜ ದೃಷ್ಟಿ ಹಾಗೂ ಪರಸ್ಪರ ವೈಷಮ್ಯಗಳೇ ಕಾರಣವೆನ್ನಲೇಬೇಕು.

ಉತ್ತರದ ಜನರಿಗೆ ಅಹಿಂದಿ ರಾಜ್ಯಗಳ ನಾಯಕರ ಪಟ್ಟಾಧಿಕಾರ ಅಸಹನೀಯ. ಹಿಂದಿ ಬರದ ನಾಯಕರು ಅವರಿಗೆ ಅಲರ್ಜಿಯೆಂದು ಹನುಮಂತಯ್ಯ ಹೇಳುತ್ತಿದ್ದರು. ಈ ತನಕ ಪ್ರಧಾನಿಯಾದವರು ಹಿಂದಿ ರಾಜ್ಯದವರಾಗಿದ್ದರು; ಇಲ್ಲವೆ ಹಿಂದಿ ಬಲ್ಲವರಾಗಿದ್ದರು. ಅವರೀಗ ದೇವೇಗೌಡರನ್ನು ಹೇಗೆ ನಡೆಯಿಸಿಕೊಳ್ಳುತ್ತಾರೆಯೋ ಕಾದು ನೋಡಬೇಕಾಗಿದೆ. ನಾಯುಡು ಬಸು ಯಾದವರು ಅವರನ್ನಾರಿಸಿಕೊಳ್ಳುವಾಗ ಬೇರಾವುದೋ ಪ್ರಬಲ ಕಾರಣವಿರಬೇಕೆಂದು ತೋರುತ್ತದೆ.

ಸಮಯ ಸಂದರ್ಭಾನುಗುಣವಾಗಿ ಎಂಥ ಶತ್ರುವಿನ ಮನಸ್ಸನ್ನಾದರೂ ತಮ್ಮ ಅನುಕೂಲಕ್ಕೆ ಪರಿವರ್ತಿಸಿಕೊಳ್ಳಬಹುದಾದ ರಾಜಕೀಯ ಚಾತುರ್ಯ ಮತ್ತು ಮೋಡಿಗಳು ಗೌಡರಿಗೆ ವಶವಾಗಿವೆ. ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಅವರು ಆಡಳಿತ ಪಕ್ಷವನ್ನು ಮೇಲೆ ಹಾಕಿಕೊಳ್ಳಲಿಲ್ಲ. ಈಚೆಗೆ ಸಂಯುಕ್ತ ಪಕ್ಷದ ನಾಯಕರು ರಾಷ್ಟ್ರಪತಿ ಹಾಗೂ ಮಾಜಿ ಪ್ರಧಾನಿಗಳ ಮೇಲೆ ಹೌಹಾರಿದಾಗ, ಅವರಿಬ್ಬರನ್ನು ಭೇಟಿಮಾಡಿ ಕ್ಷಮೆಯಾಚಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಮ್ರತಾ ಅಥವಾ ರಾಜಿ ಪ್ರವೃತ್ತಿಯೇ ಅವರ ಯಶಸ್ಸಿನ ರಹಸ್ಯ.

ಕರ್ನಾಟಕದಿಂದ ಹೊರಗೆ ಹೋಗುವುದಿಲ್ಲವೆಂದು ಹೇಳುತ್ತಿದ್ದ ಗೌಡರು ಇದ್ದಕ್ಕಿದ್ದಂತೆ ದೆಹಲಿಗೆ ಹೊರಟುಬಿಟ್ಟರಲ್ಲ ಎಂದು ಕೆಲವು ಅಸೂಯಾವಂತರು ಮೂಗು ಮುರಿಯುವುದುಂಟು. ಜೀವನದಲ್ಲಿ ಯಾವಾಗ ತಿರುವುಗಳು ಬರುತ್ತವೆಂಬ, ಭಗವತ್ಕೃಪಾ ಕಿರಣ ಯಾವಾಗ ಸ್ಪರ್ಶಿಸುತ್ತದೆಂಬ ಸಂಗತಿ ಫಲಾನುಭವಿಗಳಿಗೂ ಮೊದಲೇ ಗೊತ್ತಿರಲಾರದು. ಭಗವತ್ಕೃಪೆಗೆ ಪಾತ್ರರಾದವರನ್ನು ಮೆಚ್ಚುವುದು ಸಜ್ಜನಿಕೆ ಮಾತ್ರವಲ್ಲ, ಭಗವದ್ಧರ್ಮವೂ ಹೌದು. ಭಗವತ್ ಪ್ರೀತಿಗೆ ಪಾತ್ರರಾದದ್ದರಿಂದಲೇ ಗೌಡರು ತಮ್ಮ ರಾಜಕೀಯ ಜೀವಾಳದ ಮೂವತ್ತು-ಮೂವತ್ತೈದು ವರ್ಷಗಳಲ್ಲಿ ಸಾಮಾನ್ಯ ಕಂತ್ರಾಟುದಾರರಾಗಿ, ಶಾಸಕರಾಗಿ, ಪಕ್ಷಸಂಘಟಕರಾಗಿ, ನಾಯಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಕ್ರಮಕ್ರಮವಾಗಿ ಅಭ್ಯುದಯದ ಏಣಿಯನ್ನೇರಿ ಶಿಖರವನ್ನು ತಲುಪಿದ್ದಾರೆ.

ಸಾಮಾನ್ಯ ಗ್ರಾಮೀಣ ಕುಟುಂಬದಲ್ಲಿ ಹುಟ್ಟಿದ ಕರ್ನಾಟಕದ ನಾಯಕರೊಬ್ಬರು ಮೊತ್ತಮೊದಲಿಗೆ ಪ್ರಧಾನಿಯಾದದ್ದು ಕನ್ನಡಿಗರ ಪುಣ್ಯ. ಕನ್ನಡನಾಡಿನ ಯಾವ ರಾಜಮಹಾರಾಜ ಚಕ್ರವರ್ತಿಗೂ ಲಭ್ಯವಾಗದ ಅಖಂಡ ಭರತಖಂಡದ ಒಡೆತನದ ಪುಣ್ಯ ಈ ಹಳ್ಳಿಯ ಗೌಡರಿಗೆ ಲಭಿಸಿದ್ದು ಅಘಟಿತ ಘಟನೆಯಾದರೂ ಭಗವತ್ಸಂಕಲ್ಪವೆಂದೇ ಹೇಳಬೇಕು. ಈ ಹೊತ್ತಿನ ರಾಜಕೀಯಗೊಂದಲದಲ್ಲಿ ಅಧಿಕಾರ ಮೋಹಿನಿ ಎಂಬ ಚಪಳೆ, ಈ ವಾರಾಂಗಿನಿ ಗೌಡರನ್ನು ಎಷ್ಟು ದಿನ ಶುಶ್ರೂಷೆಮಾಡುತ್ತಾಳೋ ಕಾಣೆ. ಐದುವರ್ಷವಿರಲಿ, ಒಂದು ವರ್ಷವಿರಲಿ, ಆರು ತಿಂಗಳೇ ಇರಲಿ, ಅದೊಂದು ಅಲಭ್ಯ ಲಾಭವೆಂದೇ ಹೇಳಬೇಕು. ಆ ಪದವಿ ಎಷ್ಟು ಉನ್ನತವಾದುದೋ, ಅಷ್ಟೇ ರೌರವಮಯವಾದದ್ದು; ಗೌಡರ ಶಕ್ತಿಸಾಮರ್ಥ್ಯ ರಾಜಕೀಯ ನೈಪುಣ್ಯಗಳಿಗೆ ಚಾಣಕ್ಯತನಕ್ಕೆ ಸವಾಲೆಂಬುದಂತು ದಿಟ. ಸಮಸ್ಯೆಗಳೋ ಭೀಕರವಾಗಿವೆ, ಅಸಂಖ್ಯವಾಗಿವೆ. ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕಗಳ ಸಮಸ್ಯೆಯೊಂದು ಕಡೆಯಿಂದ ಚೀನಾ, ಪಾಕಿಸ್ತಾನ, ಶ್ರೀಲಂಕೆ, ಅಮೆರಿಕೆಗಳ ಸಮಸ್ಯೆ ಬೇರೊಂದು ಕಡೆಯಿಂದ! ಜಾತೀಯತೆ, ಮತೀಯತೆ, ಪ್ರಾಂತೀಯತೆ, ದಾರಿದ್ರ್ಯ, ನಿರುದ್ಯೋಗ ಸಮಸ್ಯೆಗಳು ಮತ್ತೊಂದು ಕಡೆಯಿಂದ, ಅವರ ಬುದ್ಧಿಕೌಶಲವನ್ನು ಪರೀಕ್ಷೆಗೀಡುಮಾಡುತ್ತವೆ.

ಕನ್ನಡಿಗರ ಹೆಮ್ಮೆಯ ಕೋಡು ಗಗನವನ್ನಿರಿಯುವಂಥ, ಕನ್ನಡದ ಹಳ್ಳಿಗನೊಬ್ಬ ಕ್ಲಿಂಟನ್ ಮೇಜರ್ ಯೆಲ್ತ್ಸಿನ್ ಮೊದಲಾದ ಜಗತ್ತಿನ ನಾಯಕರಿಗೆ ಹೆಗಲೆಣೆಯಾಗಿ ನಿಲ್ಲುವಂಥ ಐತಿಹಾಸಿಕ ಮಹದ್ಘಟನೆ ಸಂಭವಿಸಿರುವ ಈ ಶುಭಸಂದರ್ಭದಲ್ಲಿ ದೇವೇಗೌಡರಿಗೆ ಯಶಸ್ಸು ಲಭಿಸುವಂತೆ, ನಾಡಿಗೆ ಗೌರವವೊದಗುವಂತೆ ಕನ್ನಡಿಗರೆಲ್ಲರೂ ಒಕ್ಕೊರಳಿನಿಂದ ನಿರ್ಮಾತ್ಸರ್ಯದಿಂದ ಪ್ರಾರ್ಥನೆ ಸಲ್ಲಿಸಬೇಕಾಗಿದೆ.

ನೀನೊಲಿದಡೆ ಕೊರಡು ಕೊನರುವುದಯ್ಯಾ
ನೀನೊಲಿದಡೆ ಬರಡು ಹಯನಹುದಯ್ಯಾ
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ
ನೀನೊಲಿದಡೆ ಸಕಲಪಡಿಪದಾರ್ಥ
ಇದಿರಲ್ಲಿರ್ಪವು ಕೂಡಲಸಂಗಮ ದೇವಾ

ದೇಜಗೌ

ಹನ್ನೊಂದನೇ ಅತಂತ್ರ ಲೋಕಸಭೆ

ಸ್ವಾತಂತ್ರ್ಯ ಬಂದಾಗಿನಿಂದ ಈ ದೇಶಕ್ಕೆ ಶ್ರೀ ಪಿ. ವಿ. ನರಸಿಂಹರಾವ್‌ರಂಥ ಕೌಟಿಲ್ಯ–ಚಾಣಕ್ಯ ದೊರಕಿರಲಿಲ್ಲವೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಬಹುಮತ ವಿಲ್ಲದಿದ್ದರೂ ಸರ್ಕಾರ ರಚಿಸಿ ಬಹುಮತವನ್ನು ಗಳಿಸಿಕೊಂಡಿದ್ದು ಅವರ ಕೌಟಿಲ್ಯ ನೀತಿಗೆ ಸಾಕ್ಷಿಯಾಗಿದೆ. ನೆಹರೂ ಕುಟುಂಬದ ನಂತರ ಐದು ವರ್ಷ ಯಶಸ್ವಿಯಾಗಿ ಈ ದೇಶವನ್ನು ಆಳಿದ ಕೀರ್ತಿ ಇವರಿಗೆ ಸಲ್ಲಬೇಕು. ರಾಷ್ಟ್ರದ ಜನಸಂಖ್ಯೆ ಶೇಕಡ ಐದರಷ್ಟಿ ರುವ ಕೋಮಿನಿಂದ ಬಂದ ವ್ಯಕ್ತಿ ಸರ್ಕಾರದ ಚುಕ್ಕಾಣಿ ಹಿಡಿದು, ದಡ ಮುಟ್ಟಿಸಿದ್ದು ಅವರ ಚಾಣಾಕ್ಷತನವನ್ನು ಎತ್ತಿತೋರಿಸುತ್ತದೆ. ಪಂಜಾಬಿನಲ್ಲಿ ಪ್ರಜಾ ಸರ್ಕಾರವನ್ನು ಪ್ರಾರಂಭಿಸಿದ್ದು, ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ನಡಸಿದ್ದು, ಪಾಕಿಸ್ತಾನದ ಸವಾಲನ್ನೆದುರಿಸಿದ್ದು, ಚೀನಾದೊಡನೆ ಬಾಂಧವ್ಯವನ್ನು ಕುದುರಿಸಿದ್ದು, ಇಸ್ರೇಲಿ ನೊಡನೆ ರಾಜತಾಂತ್ರಿಕ ಸಂಬಂಧವನ್ನು ರೂಪಿಸಿದ್ದು, ಶ್ರೀಲಂಕೆಯೊಡನೆ ಸ್ನೇಹವನ್ನು ರೂಢಿಸಿಕೊಂಡದ್ದು, ಅಮೆರಿಕೆಯ ಸರ್ವಾಧಿಕಾರಕ್ಕೆ ಮಣಿಯದಿದ್ದುದು. ಆರ್ಥಿಕ ಸುಧಾರಣೆಗಳನ್ನು ಕಾರ್ಯಗತಗೊಳಿಸಿದ್ದು ಅವರ ಬುದ್ಧಿ ಕೌಶಲಕ್ಕೆ ನಿದರ್ಶನಗಳಾಗಿವೆ. ಜವಾಹರಲಾಲರ ನಂತರ ಇಷ್ಟೊಂದು ರಾಜನೀತಿಜ್ಞತೆಯನ್ನು ಜಗತ್ತಿಗೆ ತೋರಿಸಿ ಕೊಟ್ಟ ಪ್ರಧಾನಿಗಳೇ ಇರಲಿಲ್ಲವೆಂದು ಹೇಳಬಹುದು.

ಇವು ಅವರ ಸಕಾರಾತ್ಮಕ ಸಾಧನೆಗಳಾದರೆ, ನಕಾರಾತ್ಮಕ ಸೋಲುಗಳೂ ಸಾಕಷ್ಟಿವೆ. ಅವುಗಳಲ್ಲಿ ಮುಖ್ಯವಾದದ್ದು ಭ್ರಷ್ಟಾಚಾರ ಪ್ರಕರಣಗಳ ಪರಂಪರೆ. ಆ ಪರಂಪರೆಯ ಪ್ರವರ್ತಕಿ ಇಂದಿರಾಗಾಂಧಿಯೆಂಬುದು ಸರ್ವವೇದ್ಯ. ಅವರ ಮಗ ಆ ಪರಂಪರೆಯನ್ನು ಮುಂದುವರಿಸಿದರು. ಬೋಫೋರ್ಸ್ ಹಗರಣದ ಬಗ್ಗೆ ಸರಿ ಯಾಗಿ ತನಿಖೆ ನಡಸಿದ್ದರೆ, ಹಲವು ಕೇಡಿಗಳ ಹೆಸರು ಬೆಳಕಿಗೆ ಬರುತ್ತಿದ್ದುವು. ಬೋಫೋರ್ಸ್ ಫಲಾನುಭವಿಯಲ್ಲದಿದ್ದರೂ, ಅದನ್ನು ಮುಚ್ಚಲು ನರಸಿಂಹರಾವ್ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆಂಬ ಪ್ರತೀತಿ ಇದ್ದೇ ಇದೆ. ಮೆಹ್ತಾ ಪ್ರಕರಣ, ಸಕ್ಕರೆ ಟೆಲಿಕಾಂ ಹಗರಣ, ಕೊನೆಯದಾಗಿ ಹವಾಲ ಹಗರಣಗಳ ಭೀಕರತೆ ದೇಶವನ್ನು ನಡುಗಿಸಿದ್ದರೂ ನರಸಿಂಹರಾವ್ ದಿವ್ಯ ನಿರ್ಲಕ್ಷ್ಯದಿಂದಿರುವುದು ಅವರ ಬಗ್ಗೆ ಹುಚ್ಚರು ಮಕ್ಕಳು ಸಹ ಸಂದೇಹಪಡುವಂತಿದೆ. ಪಾಪದ ಹಣದ ವಿಷಯ ಬಂದಾಗ ಅವರ ಕೈಯನ್ನೂ ನಂಬುವಂತಿಲ್ಲ. ಈ ದೇಶದಲ್ಲಿ ಕಮ್ಯೂನಿಷ್ಟರನ್ನು ಬಿಟ್ಟರೆ, ಎಲ್ಲ ರಾಜಕೀಯ ಪಕ್ಷಗಳ, ಎಲ್ಲ ರಾಜಕಾರಣಿಗಳ ಹಸ್ತಗಳು ಅಶುದ್ಧವೆಂದೇ ಹೇಳಬೇಕಾಗಿದೆ. ವಿ. ಪಿ. ಸಿಂಗ್‌ರಂಥವರು ತೀರ ವಿರಳ. ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವವರೆಲ್ಲರೂ ಒಂದಲ್ಲ ಒಂದು ಪ್ರಮಾಣದ ಲೂಟಿಗಾರರೇ ಆಗಿದ್ದಾರೆ. ಲೂಟಿಗಾರರಲ್ಲದಿದ್ದ ಪಕ್ಷದಲ್ಲಿ ಅವರ ಓಡಾಟ ಹಾರಾಟಗಳಿಗೆ, ದೆಹಲಿಯ ತಂಗಣೆಗೆ, ಅವರ ಮತ್ತು ಅವರ ಮಕ್ಕಳ ಅದ್ದೂರಿಯ ಶೋಕಿಯ ಜೀವನಕ್ಕೆ ಎಲ್ಲಿಂದ ಹಣ

ಬಂದೀತು? ಅವರ ಬಳಿ ಮಾಯಾದಂಡವಿದೆಯೆ? ಬಾಬ್ರಿ ಮಸೀದಿಯ ವಿನಾಶಕಾರ್ಯ ದಲ್ಲಿ ರಾಯರೇನಾದರೂ ಭಾಜಪದೊಡನೆ ಸೇರಿಕೊಂಡರೆ?

ನರಸಿಂಹರಾಯರು ನಿಜಕ್ಕೂ ನಿಷ್ಕಳಂಕರಾಗಿದ್ದ ಪಕ್ಷದಲ್ಲಿ ಏಳೆಂಟು ವರ್ಷಗಳಿಂದ ನಡೆಯುತ್ತಿದ್ದ ಹವಾಲಾ ಹಗರಣದ ಬಗ್ಗೆ ಅವರೇಕೆ ಕ್ರಮ ಜರುಗಿಸಲಿಲ್ಲ? ತಮ್ಮ ಹಿಡಿತದಲ್ಲಿಯೇ ರಹಸ್ಯದಳಗಳನ್ನಿಟ್ಟುಕೊಂಡಿರುವ ಪ್ರಧಾನಿಗೆ ಈ ಮೋಸಗಾರಿಕೆ ಗೊತ್ತಿರಲಿಲ್ಲವೆಂದರೆ ಯಾರಾದರೂ ನಗಬೇಕಾದೀತು. ನಿಷ್ಪಕ್ಷಪಾತದ, ಪ್ರಾಮಾಣಿಕತೆಯ, ದೇಶಕ್ಷೇಮಕಾತರದ, ಬಲವಾದ ವರಿಷ್ಠ ನ್ಯಾಯಾಲಯವಿಲ್ಲದಿದ್ದರೆ ರಾಜಕೀಯ ನುಂಗಣ್ಣಗಳು, ರೌಡಿಗಳು, ಗೂಂಡಾಗಳು, ಭ್ರಷ್ಟರು ತಪ್ಪಿಸಿಕೊಳ್ಳುತ್ತಿದ್ದರೆಂದು ತೋರುತ್ತದೆ. ಸಿಬಿಐದಳ ಸಾಕ್ಷ್ಯಾಧಾರಗಳೊಡನೆ ಆರೋಪಿಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರೂ, ತಾವು ತಪ್ಪಿತಸ್ಥರೇ ಅಲ್ಲವೆಂದೂ, ಪ್ರತೀಕಾರ ಬುದ್ಧಿಯ ಪ್ರಧಾನಿಯ ಕಿತಾಪತಿಯಿಂದಾಗಿ ತಮ್ಮ ಮೇಲೆ ಆರೋಪಗಳನ್ನು ಸಿದ್ಧಪಡಿಸಲಾಗಿದೆಯೆಂದೂ, ಲಜ್ಜಾಹೀನ ನಾಯಕರು ದಿನಬೆಳಗಾದರೆ ಘೋಷಿಸುತ್ತಾರೆ. ಈ ಹವಾಲಾ ದರೋಡೆಯಲ್ಲಿ ನರಸಿಂಹರಾಯರ ಪಾಲೂ ಇದೆಯೆಂದು ಅವರ ವಿರೋಧಿಗಳು ಹೇಳುವುದುಂಟು. ಅದು ಇದ್ದದ್ದಾದರೆ ಪ್ರಧಾನಿಯಾಗಿ ಅವರು ಸುಮ್ಮನಿರುತ್ತಿದ್ದರೆ? ಒಂದುಪಕ್ಷ ಅದಿದ್ದೂ, ತಮಗೆ ಗೊತ್ತಿದ್ದೂ, ಹವಾಲಾ ಹಗರಣ ಕೋರ್ಟಿನೊಳಗೆ ಪ್ರವೇಶಿಸಲು ಅವಕಾಶವಾಯಿತಲ್ಲ ಎಂದರೆ, ಉಪ್ಪು ತಿಂದವರು ನೀರು ಕುಡಿಯಲಿ ಎಂದವರು ಯೋಚಿಸಿದ್ದರೆ, ಅವರ ನಿಲವನ್ನೂ ದಿಟ್ಟತನವನ್ನೂ ಮೆಚ್ಚಲೇಬೇಕು-

೧೯೯೫ರಿಂದೀಚೆಗೆ ನ್ಯಾಯಾಲಯ ಎಚ್ಚೆತ್ತುಕೊಂಡಿರುವುದು, ಕರ್ತವ್ಯಪ್ರಜ್ಞೆಯಿಂದ ದಿಟ್ಟತನದಿಂದ ವರ್ತಿಸುತ್ತಿರುವುದು, ಕ್ರಿಯಾಶೀಲವಾಗಿರುವುದು ನಾಡಿನ ಸಭ್ಯರಿಗೆ ತೃಪ್ತಿಯ ಹಾಗೂ ಸಂತೋಷದ ವಿಷಯವಾಗಿದೆ. ಕಾರ್ಯಾಂಗ ಮತ್ತು ಶಾಸನಾಂಗಗಳೆರಡೂ ಭ್ರಷ್ಟಾಚಾರ ಅನಾಚಾರ ಅತ್ಯಾಚಾರಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿದ್ದಾಗ, ನ್ಯಾಯಾಂಗ ಆ ವಿಷಯದಲ್ಲಿ ಕಾಳಜಿವಹಿಸಿ, ಸೂತ್ರಕ್ರಮ ಕೈಕೊಂಡದ್ದು, ನಿರಾಶೆಯ ಕಗ್ಗವಿಯಲ್ಲಿದ್ದವರಿಗೆ ಆಶಾಕಿರಣ ಮೂಡಿದಂತಾಗಿದೆ. ಎಲ್ಲ ಪಕ್ಷಗಳ ನಾಯಕರೂ (ಕಮ್ಯೂನಿಸ್ಟರು ಹೊರತಾಗಿ) ಹವಾಲಾದಲ್ಲಿ ಸಿಕ್ಕಿಕೊಂಡಿರುವಾಗ, ನಾಯಕತ್ವದ ಬಗ್ಗೆ ಜನರಲ್ಲಿ ನಿರಾಶೆಮೂಡಿದೆ.

ಇದೇ ಸಂದರ್ಭದಲ್ಲಿ ಚುನಾವಣಾ ಆಯೋಗವೂ ಕರ್ತವ್ಯ ಪ್ರಜ್ಞೆಯಿಂದ ತನ್ನ ನ್ಯಾಯೋಚಿತ ಅಧಿಕಾರದ ಚಲಾವಣೆಗೆ ಮುಂದಾದದ್ದರಿಂದ, ಈ ದೇಶದಲ್ಲಿ ಇನ್ನೂ ಕೆಲವು ಮಂದಿ ದೇಶ ಪ್ರೇಮಿಗಳು ಇದ್ದಾರೆಂದು ಊಹಿಸಬಹುದಾಗಿದೆ. ಹಿಂದಿನ ಚುನಾವಣಾ ಆಯೋಗಗಳು ಉಸಿರಾಡುವ ಹೆಣಗಳಾಗಿದ್ದುವೆಂದು, ಸರ್ಕಾರದ ಕೈಗೊಂಬೆಗಳಾಗಿದ್ದುವೆಂದು, ಅವುಗಳಿಗೆ ಕಾನೂನು ಪ್ರಜ್ಞೆ ಇರಲಿಲ್ಲವೆಂದು ಈಗಿನ ಆಯೋಗದೊಡನೆ ಹೋಲಿಸಿದಾಗ ಗೊತ್ತಾಗುತ್ತದೆ. ಇಂದಿನ ಆಯೋಗ ಹಳೆಯ

ಕಾನೂನು ಕೊಟ್ಟಿರುವ ಅಧಿಕಾರವನ್ನು ಮಾತ್ರ ಚಲಾಯಿಸುತ್ತಿದೆಯಲ್ಲವೆ? ಹಿಂದಿನ ಆಯೋಗಗಳು ಅವನ್ನೇಕೆ ಚಲಾಯಿಸಲಿಲ್ಲ?

ಇಂಗ್ಲೆಂಡು ಅಮೆರಿಕೆಗಳ ರಾಜಕೀಯ ಪಕ್ಷಗಳಲ್ಲಿ ಕಾಣಿಸುವ ಶಿಸ್ತು ಭರತಖಂಡದ ರಾಜಕೀಯ ಪಕ್ಷಗಳಲ್ಲಿ ಇಲ್ಲವೇ ಇಲ್ಲ. ಇಷ್ಟಕ್ಕೆಲ್ಲ ಸ್ವಾರ್ಥ, ವೈಯಕ್ತಿಕ ಪ್ರತಿಷ್ಠೆ, ಮಹತ್ವಾಕಾಂಕ್ಷೆ, ಅಧಿಕಾರದಾಹ, ಧನಸಂಗ್ರಹ ಬುದ್ಧಿ, ರಾಷ್ಟ್ರಪ್ರೇಮದ ಅಭಾವ, ಜಾತೀಯತೆ, ರಾಷ್ಟ್ರೀಯ ಚಾರಿತ್ರ್ಯದ ಗೈರು ಹಾಜರಿ—ಇವೇ ಮೊದಲಾದುವು ಕಾರಣ. ಗಾಂಧೀಜಿ ಈ ಲೋಕದಿಂದ ಕಣ್ಮರೆಯಾಗುತ್ತಿದ್ದಂತೆ, ಸಮಾಜದಲ್ಲಿ ರೂಢಿಯಲ್ಲಿದ್ದ ವಿಶ್ವಮೌಲ್ಯ ನಶಿಸಲಾರಂಭಿಸಿದುವು. ತ್ಯಾಗದ, ರಾಷ್ಟ್ರಪ್ರೇಮದ, ಐಕ್ಯದ, ಮೌಲ್ಯಗಳ ಸಂಕೇತವಾಗಿದ್ದ ಕಾಂಗ್ರೆಸ್ಸು ಅಧಿಕಾರದ, ಶೋಷಣೆಯ, ಅಶಿಸ್ತಿನ, ನೈತಿಕ ಅವನತಿಯ ಚಿಹ್ನೆಯಾಗತೊಡಗಿತು. ಇಂದಿರಾ ಗಾಂಧಿಯವರ ಕಾಲದಲ್ಲಿಯೇ, ಅವರ ನೇತೃತ್ವದಲ್ಲಿಯೇ ಕಾಂಗ್ರೆಸ್ಸು ಹೋಳಾಗಲಾರಂಭಿಸಿತೆನ್ನುವುದು ಜಗಜ್ಜಾಹೀರಾಗಿರುವ ಸಂಗತಿ. ಒಮ್ಮೆ ಪ್ರಾರಂಭವಾದ ಛಿದ್ರವಿಚ್ಛಿದ್ರ ಪ್ರವೃತ್ತಿಯನ್ನು ಮುಚ್ಚಲು ಯಾರಿಂದಲೂ ಸಾಧ್ಯವಾಗದು. ಏಕೆಂದರೆ ಆಗಿನ ಕಾಲದ ಗೋಪುರ ಸದೃಶವ್ಯಕ್ತಿಗಳು ಈಗಿಲ್ಲ. ಹಿರಿಯಕ್ಕನ ಚಾಳಿ ಮನೆಯವರಿಗೆಲ್ಲ ಎಂಬ ಗಾದೆಯಂತೆ ಆ ಸಾಂಕ್ರಾಮಿಕ ರೋಗ ಇತರ ಪಕ್ಷಗಳಿಗೂ ತಗುಲಿ, ಅಲ್ಲಿಯೂ ಪಂಥೋಪ ಪಂಥಗಳು ಹುಟ್ಟಿಕೊಂಡು, ಅನೈಕ್ಯ ಅಶಿಸ್ತು, ಅಸಹನೆಗಳೇ ರಾಷ್ಟ್ರೀಯ ಪ್ರವೃತ್ತಿಯ ವಿಶೇಷ ಲಕ್ಷಣಗಳೆನ್ನುವಂತೆ ತೋರುತ್ತವೆ. ಕಮ್ಯೂನಿಸ್ಟ್ ಪಕ್ಷಬಿಟ್ಟರೆ ಬಿಜೆಪಿ ಶಿಸ್ತಿನ ಪಕ್ಷವೆನ್ನುವ ಸತ್ಯ ಸುಳ್ಳಾಗಿದೆ; ಎಲ್ಲಪಕ್ಷಗಳ ಸಂಸ್ಕೃತಿ ಒಂದೇ ಎಂದು ಈಗ ಸಾಬೀತಾಗಿದೆ.

ನರಸಿಂಹರಾಯರು ದಕ್ಷಿಣದವರೆಂಬ ಕಾರಣದಿಂದಲೋ, ಅವರ ದೌರ್ಬಲ್ಯಗಳು ತಮಗೆ ಗೊತ್ತಿದ್ದರಿಂದಲೋ ಅಥವಾ ವೈಯಕ್ತಿಕ ದ್ವೇಷ ಅಥವಾ ಪ್ರತಿಷ್ಠೆಯ ಕಾರಣದಿಂದಲೋ ಅರ್ಜುನ್‌ಸಿಂಗ್ ತಿವಾರಿಯವರು ಹಿಂದಿನಿಂದ ಅವರ ಕಾಲುಹಿಡಿದು ಜಗ್ಗುತ್ತಿದ್ದು, ಕೊನೆಗೊಮ್ಮೆ ಪಕ್ಷದ ಶಿಸ್ತಿಗೆ ಎಳ್ಳುನೀರು ಬಿಟ್ಟು ಸಿಡಿದು ಹೋಗುತ್ತಾರೆ. ಕರುಣಾಕರನ್ ಅಂತು ರಾಯರಪಾಲಿಗೆ ಮೋಹಿನಿ ಅವತಾರವೆ ಆಗುತ್ತಾರೆ. ಹಿಂದೆ ಅವರ ಮತ್ತು ಈಚೆಗೆ ಜನಾರ್ಧನಪೂಜಾರಿಯವರ ಮಾತು ಕೇಳಿದ್ದರಿಂದ ಕರ್ನಾಟಕ ಕಾಂಗೈಗೆ ದೂರವಾಯಿತೆಂಬ ವಾದದಲ್ಲಿ ಸತ್ಯವಿಲ್ಲದಿಲ್ಲ. ಹವಾಲಾದ ಬಾಣಗಳು ತಮ್ಮ ಮೇಲೆ ಎರಗುತ್ತಿದ್ದಾಗ. ತಮ್ಮ ಕರುಣೆಯ ಕೊಡೆಯನ್ನು ಹಿಡಿಯಲಿಲ್ಲವೆಂಬ ಅನೈತಿಕ ಕಾರಣದಿಂದ ಕೆಲವು ಶಂಕಿತರು ಪಕ್ಷ ದೇಶಗಳನ್ನು ಮರೆತು, ಸ್ವಾರ್ಥೈಕ ದೃಷ್ಟಿಯಿಂದ ರಾಯರ ಮೇಲೆ ಎಗರಿದ್ದು ಚುನಾವಣಾಪೂರ್ವ ಸಮಯದಲ್ಲಿ ಮತದಾರರ ಮೇಲೆ ದುಷ್ಪರಿಣಾಮವುಂಟಾಗಿ, ತಾವೂ ಮುಳುಗಿ, ಪಕ್ಷವನ್ನೂ ಮುಳುಗಿಸಿ, ರಾಯರನ್ನೂ ಕೆಡವಿದ್ದು ಈ ದೇಶದ ದುರಂತ. ಹವಾಲಾ ಹಗರಣದಲ್ಲಿ ರಾಯರು ನಿರ್ಲಿಪ್ತತೆಯಿಂದಿದ್ದಕ್ಕೆ ಭ್ರಷ್ಟಾಚಾರದ ಬಗೆಗಿನ ಅವರ ಮನಃಪರಿವರ್ತನೆ ಕಾರಣವಿರಬಹುದೆ ಎಂಬುದು ಸ್ಪಷ್ಟವಾಗಿಲ್ಲ. ತಮ್ಮ ಅಧಿಕಾರವನ್ನು ಪ್ರಶ್ನಿಸಿದ ನಾಯಕರನ್ನು ಚಾಣಕ್ಯ

ರಾಯರು ಆ ಮೂಲಕ ಬಲಿಹಾಕಿದರೆಂಬುದು ನಿಜ. ಆದರೆ ದುರ್ಮದಾಂಧೆಯನ್ನು, ಭ್ರಷ್ಟಾಚಾರ ಪ್ರವೀಣೆಯನ್ನು ಕೂಡಿಕೊಂಡು, ಮೂಪನಾರ್ ಚಿದಂಬರಮ್‌ರನ್ನು ಕೈಬಿಟ್ಟದ್ದು ರಾಯರಿಗೆ ಮಾತ್ರವಲ್ಲ, ಪಕ್ಷಕ್ಕೇ ದೊಡ್ಡ ಪೆಟ್ಟು. ಎಐಡಿಎಮ್‌ಕೆ ಎಂಬುದು ಡಿಎಂಕೆಯ ಮರಿತಾನೆ! ಅದರ ಚರಿತ್ರೆಯೂ ಹಸನಾಗಿಲ್ಲ. ರಾಜಕೀಯವೊಂದು ಗಾಳಿದಿರುಗವಲ್ಲವೆ? ತಮಿಳುನಾಡಿನ ಗಾಳಿ ಇತರ ರಾಜ್ಯಗಳ ಮೇಲೂ ಪ್ರಭಾವ ಬೀರಿತೆಂಬುದು ದಿಟ.

ಕೊನೆಗೂ ನೆಹರೂ ಮನೆತನದ ಸೋಂಕಿಲ್ಲದ ಹನ್ನೊಂದನೆಯ ಲೋಕಸಭಾ ಚುನಾವಣೆ ನಡೆದೇ ನಡೆಯಿತು. ಚುನಾವಣಾ ಆಯೋಗದ ಕಟ್ಟುನಿಟ್ಟಿನ ವ್ಯವಸ್ಥೆಯಿಂದಾಗಿ, ಚುನಾವಣೆಗಳು ಶಾಂತರೀತಿಯಿಂದ ನಡೆದುವೆಂದೇ ಹೇಳಬೇಕು. ಧ್ವನಿವರ್ಧಕಾಸುರನ ಗಾವಳಿ ಹಾವಳಿಗಳಿಲ್ಲ, ವಾಹನಗಳ ಗದ್ದಲವಿಲ್ಲ, ಖಾಸಗಿಮನೆ ಸಾರ್ವಜನಿಕ ಕಚೇರಿಗಳ ಗೋಡೆಗಳು ವಿಕಾರಗೊಳ್ಳಲಿಲ್ಲ. ಕೆಲವು ಕಡೆಗಳಿಂದ ಮಾತ್ರ ಕೊಲೆ ಕಲಹಗಳ ವರದಿ ಬಂದುವು: ಸರ್ಕಾರದ ಸಿಬ್ಬಂದಿ ವರ್ಗವೇ ಅಭ್ಯರ್ಥಿಗಳ ಪರವಾಗಿ ಹಣ ಹೆಂಡ ಹಂಚಿದರೆಂಬ ಗುಲ್ಲು ಎಲ್ಲೆಲ್ಲೂ ಇದೆ. ಎರಡು ಮೂರು ಜಿಲ್ಲೆಗಳಲ್ಲಿ ಗುಟ್ಟಾಗಿ ಸಾಗಿಸುತ್ತಿದ್ದರೆನ್ನಲಾದ ಮೂರು ಕೋಟಿ ರೂಪಾಯಿ ಬೆಲೆಯ ಮಾದಕ ಪದಾರ್ಥಗಳು ಸಿಕ್ಕಿವೆ ಎಂಬ ಸುದ್ದಿಯೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಒಟ್ಟಿನಲ್ಲಿ ಸಾರ್ವಜನಿಕರಿಗೆ ಹೆಚ್ಚು ಹಿಂಸೆಯಾಗದೆ ಚುನಾವಣೆಗಳು ನಡೆದದ್ದಕ್ಕಾಗಿ ಚುನಾವಣಾ ಆಯೋಗ ಅಭಿನಂದನೀಯವಾಗುತ್ತದೆ.

ಚುನಾವಣೆಗೆ ಪೂರ್ವದಲ್ಲಿ ಜೋಯಿಸರು ನುಡಿದ ಭವಿಷ್ಯವೆಲ್ಲ ಸುಳ್ಳಾಗಿದೆ. ಮಾಜಿ ಸಚಿವ ಅರುಣನೆಹ್ರೂ ಅವರ ಲೆಕ್ಕಾಚಾರ ಮಾತ್ರ ಹೆಚ್ಚುಕಡಮೆ ನಿಜವಾಗಿದೆ. ಸುಮಾರು ೧೮೫ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವ ಭಾಜಪ ಮಾತ್ರ ಎಲ್ಲ ಪಕ್ಷಗಳಿಗಿಂತ ಮುಂದಿರುತ್ತದೆ ಎಂದವರು ನುಡಿದಿದ್ದರು ಪ್ರಧಾನಿಯವರ ಕೋಡಿಮಠದ ಯಾತ್ರೆಯಂತು ನಿರರ್ಥಕವಾಯಿತು. ಅವರು ತಿರುಪತಿಯ ವೆಂಕಟೇಶ್ವರನಿಗೂ ಕಾಣಿಕೆ ಕೊಟ್ಟು ಬಂದದ್ದಾಯಿತು. ಅನೇಕ ಅಭ್ಯರ್ಥಿಗಳು ಹೀಗೆಯೇ ಅನೇಕ ಮೂರ್ತಿಗಳ ಕಾಲಿಗೆ ಹಣೆ ತಾಗಿಸಿರಬೇಕು. 'ಸತ್ತ ಕಲ್ಗಳ ಮುಂದೆ ಅತ್ತುಕರೆದುದು ಸಾಕು, ನಿಜ; ಆದರೆ ಭಾರತಾಂಬೆಯನ್ನು ಪೂಜಿಸುವವರು ಯಾರು? ದೇವೇಗೌಡರೇನೋ ಮೈಸೂರಿನ ಚಾಮುಂಡೇಶ್ವರಿಯನ್ನು ನಂಬಿ ಪೂರ್ಣಯಶಸ್ಸು ಪಡೆದಿದ್ದಾರೆ. ಈ ಸಂಗತಿ ಹೊರಗಿನ ಜನಕ್ಕೆ ಗೊತ್ತಾದರೆ, ಇದೂ ಮತ್ತೊಂದು ತಿರುಪತಿಯಾದೀತು?

ಚುನಾವಣೆಯನಂತರ ಲೋಕಸಭೆ ಅತಂತ್ರ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆಂಬ ಹಲವು ಜನರ ಭವಿಷ್ಯವಾಣಿ ನಿಜವಾಗಿದೆ. ಸುಮಾರು ಇಪ್ಪತ್ತೆಂಟು ಪಕ್ಷಗಳಲ್ಲಿ ಲೋಕಸಭೆಯ ಸ್ಥಾನಗಳು ಹಂಚಿ ಹೋಗಿದ್ದರೂ, ಭಾಜಪ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಮಾತ್ರ ಮೂರು ಸಂಖ್ಯೆಯ ಅಭ್ಯರ್ಥಿಗಳು ಆಯ್ಕೆಗೊಂಡಿದ್ದಾರೆ. ಸಿಂಧ್ಯ ಅವರ ಮಧ್ಯಪ್ರದೇಶದ ವಿಕಾಸ ಕಾಂಗ್ರೆಸ್ ಪಕ್ಷ ಎರಡು ಸ್ಥಾನಗಳನ್ನು ತಿವಾರಿ ಕಾಂಗ್ರೆಸ್

ನಾಲ್ಕು ಸ್ಥಾನಗಳನ್ನು ಮಾತ್ರ ಪಡೆದಿರುವಾಗ, ಆ ಮನೆಮುರುಕರಿಗೆ ಬುದ್ಧಿ ಬರಬಾರದೆ? ಅರ್ಜುನ್‌ಸಿಂಗ್‌ರಿಗೊ? ಮೂಪನಾರ್‌ರನ್ನು ಬಿಟ್ಟದ್ದು ಅಥವಾ ಅವರು ದೂರ ಹೋಗುವಂತೆ ಮಾಡಿದ್ದು ರಾಯರ ತಪ್ಪು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ಸರಿಯಾದವರನ್ನು ಆರಿಸದೆ, ಜನನಾಡಿಯನ್ನು ಬಲ್ಲ ನಾಯಕರ ಸಲಹೆಯನ್ನು ಪುರಸ್ಕರಿಸದೆ ರಾಯರು ಕರ್ನಾಟಕದಲ್ಲಿಯೂ ಸೋಲುಂಡರು. ಪಕ್ಷ ಬಾಹುಳ್ಯ, ಸ್ವತಂತ್ರ ಅಭ್ಯರ್ಥಿಗಳ ಹೆಚ್ಚಳ, ಪಕ್ಷಗಳ ಒಳಜಗಳ, ತಮಗೆ ಸೀಟುಸಿಗಲಿಲ್ಲವೆಂಬ ಕಾರಣಕ್ಕಾಗಿ ಸ್ವಪಕ್ಷೀಯ ಅಭ್ಯರ್ಥಿ ವಿರುದ್ಧದ ಪ್ರಚಾರ ಜತೆಗೆ ತಾತ್ವಿಕ ಸಾಮರಸ್ಯ ಅಥವಾ ಕಾರಣವಿಲ್ಲದ ಪಕ್ಷಗಳ ಅಪವಿತ್ರ ಸಂಗಮದಿಂದಾಗಿ, ಮತದಾರರಲ್ಲಿ ಗೊಂದಲ ವುಂಟಾಗಿ ಮತಗಳು ಚೆಲ್ಲಾಪಿಲ್ಲಿಯಾದದ್ದುಂಟು. ಅಲ್ಪಸಂಖ್ಯಾತರ ಮತ್ತು ದಲಿತರ ವೋಟುಗಳ ಭಂಡಾರದ ಏಕಸ್ವಾಮ್ಯ ತಪ್ಪಿಹೋಗಿ, ಸಿಕ್ಕಿದವರಿಗೆ ಸೀರುಂಡೆಯಾಗಿದೆ. ಮುರಿದ ಮನೆಯಲ್ಲಿ ಹಿರಿದದ್ದೇ ಲಾಭ ಎಂಬಂತಾಗಿದೆ. ಅವರು ಪ್ರಾಯಶಃ ಪ್ರಾದೇಶಿಕ ಪಕ್ಷ ಅಥವಾ ಸರ್ಕಾರಗಳ ಕೈಸನ್ನೆ ಬಾಯ್ಸನ್ನೆಗಳಿಗೆ ವಿಧೇಯರಾಗಿದ್ದಂತೆ ತೋರುತ್ತದೆ. ಲೋಕಸಭೆಗೆ ಮತ ಚಲಾಯಿಸುವಾಗ ಸಮಗ್ರ ಭಾರತದ ಹಿತ ಮತದಾರರ ಗಮನದಲ್ಲಿರಬೇಕೆಂಬುದು ಸರಿಯೇ ಸರಿ. ಶೇಕಡ ಐವತ್ತು ಮಂದಿ ಅವಿದ್ಯಾವಂತರಿರುವ ದೇಶದಲ್ಲಿ ಅಷ್ಟೊಂದು ವಿವೇಕವನ್ನು ನಿರೀಕ್ಷಿಸುವುದು ಕಷ್ಟ. ನಿರುದ್ಯೋಗ ದಾರಿದ್ರ್ಯ ಅಸಮಾನತೆ ಭ್ರಷ್ಟಾಚಾರ ತಾಂಡವವಾಡುತ್ತಿರುವಾಗ ಸಾಮಾನ್ಯ ಜನರಿಗೆ ಯಾವ ಪಕ್ಷ ಅಧಿಕಾರ ಬಂದು ಏನಾಗಬೇಕಾಗಿದೆ? ಹಿಂದೆ ಆಡಳಿತ ನಡೆಸಿದವರ ಮತ್ತು ಮತ ಪಡೆದು ಹೋದವರ ಕೊಬ್ಬು ಹಲವರ ಕೋಪತಾಪಗಳಿಗೆ ಕಾರಣವಾಗಿದೆ. ಹೀಗಾಗಿ ಕಾಂಗ್ರೆಸ್ಸನ್ನು ನೆಲಕಚ್ಚಿಸಿದ್ದಲ್ಲದೆ, ಇತರ ಯಾವ ಪಕ್ಷದಕಡೆಗೂ ಒಲವು ತೋರದಿರುವುದು ಗಮನಿಸಬೇಕಾದ ಅಂಶ. ಆದರೆ ಡಿಎಂಕೆ, ಸಿಪಿಎಂ, ಅಕಾಲಿ, ಭಾಜಪಗಳ ವಿಜಯ ಸಾಧನೆ ಅಂತರರಾಷ್ಟ್ರೀಯ ನೀತಿಯ ಮೇಲೆ, ಪಾಕಿಸ್ತಾನ ಶ್ರೀಲಂಕೆಗಳಿಗೆ ಸಂಬಂಧಿಸಿದಂತೆ ಏನು ಪರಿಣಾಮವುಂಟಾಗುತ್ತದೆಯೊ ಕಾದುನೋಡಬೇಕಾಗಿದೆ.

ನಲವತ್ತು ವರ್ಷಕ್ಕೂ ಮಿಕ್ಕು ಕಾಂಗ್ರೆಸ್ ಈ ದೇಶವನ್ನಾಳಿದೆ. ಅವರ ಆಳ್ವಿಕೆಯಿಂದ ಜನರಿಗೆ ಬೇಸರವಾಗಿದೆ. ಕಾಂಗ್ರೆಸ್ಸಿಗರು ಸಾಕಷ್ಟು ಅನುಕೂಲ ಮಾಡಿಕೊಂಡಿದ್ದಾರೆ. ಅಷ್ಟೇ ಅನುಕೂಲಗಳು ಬೇರೆ ಪಕ್ಷಗಳಿಗೂ ಹಂಚಿಕೆಯಾಗಬಾರದೆ? ಆದ್ದರಿಂದ ಕಾಂಗ್ರೆಸ್ ಹೋದದ್ದಕ್ಕಾಗಿ ವ್ಯಥೆಪಡಬೇಕಾಗಿಲ್ಲ; ನುರಿತ ಅನುಭವಿ ನರಸಿಂಹರಾವ್ ಇರಬೇಕಿತ್ತೆನ್ನಿಸುತ್ತದೆ. ಈಗ ಸಂಖ್ಯಾದೃಷ್ಟಿಯಿಂದ ಕಾಂಗ್ರೆಸ್‌ಗಿಂತ ಭಾಜಪವೇ ದೊಡ್ಡ ಪಕ್ಷ. ಅದಕ್ಕೆ ಒಂದು ಸಲವಾದರೂ ಅವಕಾಶ ಕೊಟ್ಟು ನೋಡಬೇಕಾದ್ದು ಲೇಸೆಂದು ಹಲವರ ಯೋಚನೆಯಲ್ಲಿದೆ. ಅದೊಂದು ಜಾತೀಯ ಪಕ್ಷವೆಂದು ಅದರ ತಲೆ ಮೇಲೆ ಗುಬ್ಬಿ ಕೂರಿಸುವವರುಂಟು. ಅದು ಮಸೀದಿಗಳ ತಂಟೆಗೆ ಹೋಗಬಾರದು, ನಿಜ. ತೋಳ ಕುರಿಮರಿಗಳ ಕತೆಯಂತೆ, ಎಂದೋ ಆಗಿ ಹೋದದ್ದನ್ನು ಈಗ

ಸರಿಪಡಿಸುತ್ತೇವೆಂದು ಸೇಡು ತೀರಿಸಿಕೊಳ್ಳದೆ, ಎಲ್ಲ ಕೋಮುಗಳನ್ನೂ ಸೌಹಾರ್ದ ದಿಂದ ನಡೆಸಿಕೊಂಡು ಹೋಗಬೇಕಾದ್ದು, ದಕ್ಷಿಣದ ರಾಜ್ಯಗಳ ಮೇಲೆ ಹಿಂದಿ ಹೇರದಿರು ವುದು ಅದರ ಧರ್ಮವಾಗಬೇಕು. ಯಾವ ಪಕ್ಷವೂ ಜಾತೀಯತೆಯಿಂದ ಮುಕ್ತ ಗೊಂಡಿಲ್ಲವೆಂಬುದಕ್ಕೆ ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಕೋಮಿನ ಜನರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸುತ್ತವೆಂಬುದನ್ನು ಲೆಕ್ಕ ತೆಗೆದು ನೋಡ ಬೇಕಾಗಿದೆ. ಮಂಡ್ಯ ಜಿಲ್ಲೆಯಿಂದ ಒಕ್ಕಲಿಗರನ್ನು, ಬಿಜಾಪುರ ಜಿಲ್ಲೆಯಿಂದ ಲಿಂಗಾಯಿತ ರನ್ನು ಮಾತ್ರವೇ ಏಕೆ ನಿಲ್ಲಿಸಬೇಕು?

ನಮ್ಮ ದೇಶಕೆ ಏನು ಬಂದರೇನಂತೆ?
ಕೊನೆಗೆ
ಕಮ್ಯೂನಿಸಂ ಏ ಬಂದರೂ;
ಹಾಕುವೆವು ಅದಕ್ಕೂ ಮೂರು ನಾಮ!
ಅವರ ಹೆಗಲಿಗೂ ಬೀಳುವುದು ಜನಿವಾರ!
ಅದಕ್ಕೂ ಕಟ್ಟುವೆವು ಲಿಂಗ!
ಕ್ರಾಸು ತಗುಲಿಸಿದರೂ ಆಶ್ಚರ್ಯವಿಲ್ಲ!
ಇಲ್ಲಿ ಕಮ್ಯೂನಿಸಂ ಊ ಕಿರಿಸ್ತಾನ!
ಕೊನೆಗೆ,
ಹಿಂದೂಸ್ಥಾನದಲ್ಲಿಯೂ ಅದು ಮುಸಲ್ಮಾನ!
ನಮ್ಮ ರಾಜ್ಯಾಂಗದಲ್ಲಿ ಮಾತ್ರ
ನಾವು ಧರಿಸಿಹುದು ಸೆಕ್ಯುಲರ್ ಯಜ್ಞ ಸೂತ್ರ

—ಅಲ್ಲಿ ಇಲ್ಲಿ (ಪ್ರೇತಕ್ಕೂ)

ಈ ದೇಶದಲ್ಲಿ ಜಾತಿ ಬಿಟ್ಟು ಏನನ್ನೂ ಸಾಧಿಸಲಾಗದೆಂದು ಸುಮಾರು ಅರ್ಧ ಶತಮಾನದ ಸ್ವಾತಂತ್ರ್ಯಾನಂತರದ ಇತಿಹಾಸ ಸ್ಪಷ್ಟಪಡಿಸುತ್ತದೆ. ಪ್ರತಿಯೊಬ್ಬ ನಾಯಕನೂ ಮೊದಲು ತನ್ನ ಕುಟುಂಬದ, ಅನಂತರ ತನ್ನ ಬಳಗದ, ಕೊನೆಗೆ ತನ್ನ ಜಾತಿಯ ಕ್ಷೇಮಪಾಲನೆಯ ಕಡೆಗೆ ಗಮನ ಹರಿಸುತ್ತಾನೆ. ಆಮೇಲೇನಾದರೂ ಒಂದೆರಡು ಚೂರು ಉಳಿದಿದ್ದರೆ ಇತರರ ಕಡೆಗೆ ಎಸೆದಾನು. ನೆಹ್ರೂ ಮಾಡಿದ್ದೂ ಇದೇ ಕೆಲಸ. ಗಾಂಧಿಯಂತೆ, ಲಾಲ್‌ಬಹದ್ದೂರ್‌ಶಾಸ್ತ್ರಿಯಂತೆ, ನಿಜಲಿಂಗಪ್ಪನವರಂತೆ ಪುತ್ರ ವ್ಯಾಮೋಹ ಅಂಟಿಸಿಕೊಳ್ಳದವರು ಯಾರಿದ್ದಾರೆ? ಜಾತಿ ವ್ಯಾಮೋಹವು ಅಷ್ಟೇ ಪ್ರಬಲವಾಗಿದೆಯೆಂಬುದನ್ನು ಕವಿಯೇ ಸ್ಪಷ್ಟಪಡಿಸಿದ್ದಾರೆ. ಈ ಒಂದು ಕಾರಣ ಕ್ಕಾಗಿ ಯಾವ ಪಕ್ಷವನ್ನೂ ಪ್ರತ್ಯೇಕವಾಗಿ ದೂರಬೇಕಾಗಿಲ್ಲ. ಆದರೆ ಆ ರೋಗ ಅಪಾಯಕಾರಿಯೆಂಬುದರಲ್ಲಿ ಅನುಮಾನವಿಲ್ಲ.

ಆರ್ಥಿಕ ಸುಧಾರಣೆ ದೇಶಕ್ಕೆ ಹಿತವೋ ಅಹಿತವೋ ಕಣಿ ನುಡಿಯುವವರಿಲ್ಲ. ಪಶ್ಚಿಮ ಬಂಗಾಳವೇ ಅದನ್ನೊಪ್ಪಿಕೊಂಡಾಗಿದೆ. ಅದು ಚುನಾವಣೆಯ ವಿಷಯವಾಗಲಿಲ್ಲ. ಹವಾಲಾ ಯಾವ ಪಕ್ಷದ ಪ್ರಣಾಳಿಕೆಯಲ್ಲಿಯೂ ತಲೆಯೆತ್ತದಿದ್ದುದೇ ಸೋಜಿಗ. ಆದರೆ ಅದರ ಹವಾ ಮಾತ್ರ ಎಲ್ಲೆಲ್ಲಿಯೂ ಬೀಸುತ್ತಿತ್ತೆಂಬುದು ನಿಜ. ಅದಕ್ಕೆ ನಮ್ಮ ಜನ ಒಗ್ಗಿಕೊಂಡಿದ್ದಾರೇನೋ ಎಂದೆನಿಸುತ್ತಿದೆ. ಅಭಿವೃದ್ಧಿಗಾಗಿ ಭದ್ರತೆಬೇಕೆಂದು ಪ್ರಧಾನಿ ಹೋದಲ್ಲೆಲ್ಲಾ ಸಾರಿದರು. ಭದ್ರತೆಯಿದ್ದಾಗ ಏನಾಯಿತೆಂಬುದನ್ನು ಜನ ಮರೆತಿಲ್ಲ. ಗರೀಬಿ ಹಟಾವೊ ಘೋಷಣೆ ಏನಾಯಿತು? ಮುಗ್ಧರ ಮತ್ತು ಅವಿದ್ಯಾವಂತರ ನಾಡಿನಲ್ಲಿ ನಮ್ಮ ನಾಯಕರು ಸುಳ್ಳನ್ನೂ ಘೋಷಣೆಗಳನ್ನೂ ಬಂಡವಾಳ ಮಾಡಿಕೊಂಡಿರುವಂತೆ, ಆ ಮೂಲಕ ಯಶಸ್ಸು ಸಾಧಿಸುತ್ತಿರುವಂತೆ ತೋರುತ್ತದೆ. ಮಾಜಿ ರಾಜರ ಮೇಲೆ ರಾಯರು ತಮ್ಮ ಪ್ರಚಾರ ಭಾಷಣದಲ್ಲಿ ಖಂಡನೆಯ ಖಡ್ಗವೆತ್ತಿದ್ದು ಸರಿಯಾಗಿದೆ, ಶಕುನ ಪೂರ್ವಕವಾಗಿದೆ.

ಅಸಹ್ಯ ಪ್ರಮಾಣದ ಕೇಂದ್ರೀಕರಣದಿಂದ, ಶಾಸಕರ ಸರ್ವಾಧಿಕಾರದಿಂದ ಈ ದೇಶದಲ್ಲಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯೂ ಕಣ್ಣೊರಸುವ ಉಪಾಯವಿದ್ದಂತೆ ತೋರುತ್ತದೆ. ಉಗ್ರ ಕೇಂದ್ರೀಕರಣ ಕಾರಣವಾಗಿ ಎಲ್ಲ ಕಡೆಯೂ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ದಿನೇ ದಿನೇ ಅಧಿಕವಾಗುತ್ತಿರುವುದು ಸಹಜವಾಗಿದೆ. ನೆಹರೂ ಅವರಿಂದ ಹಿಡಿದು ಈ ಹೊತ್ತಿನ ತನಕದ ಕೇಂದ್ರ ನಾಯಕರು ಗೋಡೆಯ ಮೇಲಣ ಬರಹವನ್ನು ಓದಲಶಕ್ತರಾಗಿದ್ದಾರೆ. ಭದ್ರತೆ ಮತ್ತು ಏಕತೆಯ ಹೆಸರಿನಲ್ಲಿ ಕೇಂದ್ರೀಕರಣ ಸರಪಳಿಯನ್ನು ಬಿಗಿಗೊಳಿಸಲಾಗಿದೆ- ಇಂಥ ಬಿಗಿ ಹಿಡಿತದಿಂದ ಸೋವಿಯೆತ್ ಯೂನಿಯನ್ ಏನಾಗಿದೆ, ರಾಜ್ಯಗಳ ಸ್ವಾಯತ್ತತೆಯಿಂದ ಅಮೆರಿಕಾ ಹೇಗೆ ನಾಗಾಲೋಟದಿಂದ ಮುಂದುವರೆಯುತ್ತಿದೆ ಎಂಬ ಸಂಗತಿ ನಮ್ಮ ನಾಯಕರಿಗೆ ಕಣ್ಗಾಣುವುದೇ ಇಲ್ಲ. ನೆಹರೂ ನಂತರ ಕಾಂಗ್ರೆಸ್ ಪಕ್ಷ ಸಹ ಜಾತೀಯ ಪಕ್ಷಗಳ ಅಥವಾ ಪ್ರಾದೇಶಿಕ ಪಕ್ಷಗಳ ಜತೆಗೂಡಿಕೊಂಡೇ ಚುನಾವಣೆಗಳನ್ನು ಗೆಲ್ಲುತ್ತಿತ್ತೆಂಬುದನ್ನು ಧೀಮಂತರು ಮರೆತಿದ್ದಾರೆ. ರಾಜ್ಯಗಳಿಗೆ ಸ್ವಾಯತ್ತತೆ ಕೊಡದಿದ್ದರೆ ಸ್ವತಂತ್ರವಾದಾವು ಎಂಬ ಭಯ ಪ್ರಾದೇಶಿಕ ಪಕ್ಷಗಳ ಅರ್ಭಟದಿಂದ ವ್ಯಕ್ತವಾಗುತ್ತಿದೆ. ತತ್ತ್ವ ಭಾಷೆ ಜಾತಿ ಪಕ್ಷ ಬಾಹುಳ್ಯದಿಂದ ಕೂಡಿರುವ ದೇಶದ ಭದ್ರತೆ, ಏಕತೆ ಮತ್ತು ಪ್ರಗತಿ ಸ್ವಾಯತ್ತತೆಯಿಂದ ಮಾತ್ರ ಸಾಧ್ಯವೆಂಬುದನ್ನು ಜನರಾದರೂ ಮರೆಯಬಾರದು. ಇದು ವ್ಯಕ್ತಿ ಪ್ರಧಾನತೆಯ ಯುಗ, ವಿಭಕ್ತ ಕುಟುಂಬದ ಯುಗ. ಅವಿಭಕ್ತ ಕುಟುಂಬ ಪದ್ಧತಿಯಿಂದ ಈಗ ಪ್ರಗತಿ ಸಾಧ್ಯವಿಲ್ಲವಾಗಿದೆ. ಈ ತತ್ತ್ವ ರಾಜಕೀಯ ಕ್ಷೇತ್ರಕ್ಕೂ ಸಮುಚಿತವಾಗಿ ಅನ್ವಯಿಸುತ್ತದೆ. ಅಮೆರಿಕೆಯಂತೆ ಕೇಂದ್ರ ಸರ್ಕಾರದ ಭದ್ರತೆ ಹಾಗೂ ರಾಜ್ಯಗಳ ಸ್ವಾಯತ್ತತೆ ಎರಡನ್ನೂ ಕಾಯ್ದುಕೊಳ್ಳಬೇಕಾಗಿದೆ.

ಹನ್ನೊಂದನೆಯ ಲೋಕಸಭೆ ಅತಂತ್ರವಾಗಿರುವ ಸಮಯದಲ್ಲಿ ಕೇಂದ್ರದಲ್ಲಿ ಗಟ್ಟಿ ಸರ್ಕಾರ ಬರುತ್ತದೆಯೆ ಎಂಬ ಚಿಂತೆಯಲ್ಲಿದ್ದಾರೆ ಬುದ್ಧಿ ಜೀವಿಗಳು. ರಾಜ್ಯಗಳಲ್ಲಿ ಸಂಯುಕ್ತ ಅಥವಾ ಮಿತ್ರ ಸರ್ಕಾರ ಸಾಧ್ಯವಾದರೂ ಕೇಂದ್ರದಲ್ಲಿ ಸಾಧ್ಯವೆ ಎಂಬ ಅನುಮಾನವಂತು ಇದ್ದೇ ಇದೆ. ಕೆಲವರು ರಾಷ್ಟ್ರೀಯ ಸರ್ಕಾರದ ಬಗ್ಗೆಯೂ ಯೋಚನಾಲಹರಿ ಹರಿಸಿದ್ದಾರೆ. ದೇಶ ಹಿತಾಕಾಂಕ್ಷೆ ತ್ಯಾಗ ಬುದ್ಧಿ ಸಹನೆಗಳಿಲ್ಲದಿದ್ದಾಗ ಕಿಚಡಿ ಪಕ್ಷಗಳ ಒಂದುಗೂಡಿಕೆ ಕಷ್ಟವಾಗಬಹುದು. ಹೆಚ್ಚು ಸಂಖ್ಯಾಬಲವುಳ್ಳ ಭಾಜಪಕ್ಕೆ ಸರ್ಕಾರ ರಚಿಸಲು ರಾಷ್ಟ್ರಪತಿ ಆಹ್ವಾನವಿತ್ತಿರುವುದು ಯೋಗ್ಯವಾಗಿದೆ. ಆದರೆ ಹದಿನೈದು ದಿನಗಳಲ್ಲಿ ಆ ಪಕ್ಷ ಬಹುಮತ ಸಾಧಿಸಲು ಸಾಧ್ಯವೆ? ಸಾಧ್ಯವಾದರೆ ಸಂತೋಷ. ಕುದುರೆ ಅಥವಾ ದನದ ವ್ಯಾಪಾರ ಎಷ್ಟರ ಮಟ್ಟಿಗೆ ಕುದುರುತ್ತದೆಯೊ ಗೊತ್ತಿಲ್ಲ. ಅದು ಸೋತದ್ದಾದರೆ ರಾಷ್ಟ್ರೀಯ ರಂಗವನ್ನು ರಾಷ್ಟ್ರಪತಿಗಳು ಆಹ್ವಾನಿಸ ಬೇಕಾಗುತ್ತದೆ. ಶ್ರೀ ದೇವೇಗೌಡರು ರಂಗನಾಯಕರಾಗಿ ಆಯ್ಕೆಯಾಗಿರುವುದು ಕನ್ನಡಿಗರು ಹೆಮ್ಮೆ ಪಡಬೇಕಾದ ಸಂಗತಿ. ಉತ್ತರ ಭಾರತಕ್ಕೆ ಮೀಸಲಾಗಿದ್ದ ಪ್ರಧಾನಿ ಹುದ್ದೆ ಆಂಧ್ರದ ನಂತರ ಎಂದೋ ಒಮ್ಮೆ ಆಕಸ್ಮಿಕವೆನ್ನುವಂತೆ ಕರ್ನಾಟಕಕ್ಕೆ ದಕ್ಕುವುದಾದರೆ ಕನ್ನಡಿಗರ ಪುಣ್ಯಕ್ಕೆಣೆಯೇ ಇಲ್ಲವಾಗುತ್ತದೆ. ರಾಷ್ಟ್ರಪತಿ ಹುದ್ದೆಯಂತು ಕರ್ನಾಟಕಕ್ಕೆ ಬರಿಯ ಸ್ವಪ್ನವಾಗಿಯೇ ಉಳಿದಿದೆ. ರಾಜ್ಯಪಾಲ ರಾಯಭಾರಿ ಹುದ್ದೆಗಳೂ ಅಷ್ಟೇ. ಸದ್ಯಕ್ಕೆ ಪ್ರಧಾನಿ ಪದವಿಯಾದರೂ ದಕ್ಕಲಿ! ಚಾಣಕ್ಯತಂತ್ರ ಕುಶಲರಾದ, ಆದರೆ ಕೆಲವರ ಒಡನಾಟದಿಂದ ಬೇಸ್ತುಬಿದ್ದ, ತಮ್ಮ ಗುಟ್ಟನ್ನೆಂದೂ ಇತರರಿಗೆ ಬಿಟ್ಟುಕೊಡದ ನರಸಿಂಹರಾಯರ ಯುಕ್ತಿಯುಕ್ತ ಬುದ್ಧಿಯ ಯಂತ್ರಾಗಾರದಲ್ಲಿ ಏನು ತಂತ್ರ ಸಂಚು ಹೂಡಿ ಹೊಂಚು ಹಾಕುತ್ತಿದೆಯೊ ಬಲ್ಲವರು ಯಾರು? ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಮಣ್ಣು ಮುಕ್ಕಿದರೂ ಅವರೇ ಪಕ್ಷದ ನಾಯಕರಾದದ್ದು ಮೆಚ್ಚಬೇಕಾದದ್ದೇ. ಪ್ರಸಕ್ತ ಲೋಕಸಭೆ ಐದು ವರ್ಷ ಉಳಿದದ್ದಾದರೆ ಅದೊಂದು ಪವಾಡವಾದೀತು; ಒಂದೆರಡು ವರ್ಷ ನಡೆದರೂ ಭಾರತೀಯರು ಬೆನ್ನುತಟ್ಟಿಕೊಳ್ಳಬಹುದಾದ ಸಂಭ್ರಮದ ಸಂಗತಿಯೆಂದೇ ಹೇಳಬಹುದು. ಜೈ ಹಿಂದ್!

ದೇಜಗೌ

ತಮ್ಮ ತಮ್ಮಲ್ಲಿ ಜನರು ಹೋರಾಡುವುದರಿಂದ ಏನೂ ಸಾಧಿಸದು. ಆದರೆ ಎಲ್ಲರೂ ಕೇಡುಕಿನ ವಿರುದ್ಧ ಹೋರಾಡಬೇಕು.

—ಕಾರ್ಲೈಲ್

ಜಾನಪದ ಶ್ರೀ : ಕಂಸಾಳೆ ಮಹಾದೇವಯ್ಯ

ಡಾ|| ಹಾ. ತಿ. ಕೃಷ್ಣೇಗೌಡ

ಕರ್ನಾಟಕದ ಜನಪದ ಕಲೆಯೊಂದನ್ನು ಅಂತರರಾಷ್ಟ್ರೀಯಮಟ್ಟದಲ್ಲಿಅಭೂತಪೂರ್ವ ರೀತಿಯಲ್ಲಿ ಪರಿಚಯಿಸಿ ಕರ್ನಾಟಕಕ್ಕೂ ಭಾರತಕ್ಕೂ ಕೀರ್ತಿಯನ್ನು ತಂದ ಶ್ರೀ ಕಂಸಾಳೆ ಮಹಾದೇವಯ್ಯನವರು ಹುಟ್ಟಿದ್ದು ಕಂಸಾಳೆ ಪರಂಪರೆಯ ಅತ್ಯಂತ ಬಡಕುಟುಂಬವೊಂದರಲ್ಲಿ. ಆ ಕಾಲಕ್ಕೆ ಪ್ರಸಿದ್ಧ ಕಲಾವಿದರೆಂದು ಹೆಸರು ಪಡೆದಿದ್ದ ತಂದೆ ಮರಕೋಡು ನಂಜಯ್ಯನವರಿಂದ ಬಾಲ್ಯದಿಂದಲೇ ಕಂಸಾಳೆಯ ದೀಕ್ಷೆಪಡೆದು, ದೇವರಗುಡ್ಡರಾಗಿ ಕಂಸಾಳೆಯ ಜೋಳಿಗೆ ಹಿಡಿದು ತಮ್ಮ ಬದುಕಿನುದ್ದಕ್ಕೆ ಮಲೆಯ ಮಾದೇಶ್ವರನ ಕಾವ್ಯವನ್ನು ಹಾಡಿ, ಕಂಸಾಳೆ ಬೀಸುತ್ತ ಕುಣಿದು ಇಡೀ ಬದುಕನ್ನು ಕಲೆಯ ಕಾಯಕಕ್ಕೆ ಸಮರ್ಪಿಸಿಕೊಂಡವರು. ಕೊರಳಿಗೆ ರುದ್ರಾಕ್ಷಿ ಮಾಲೆ ಹಾಕಿ, ಹಣೆಗೆ ವಿಭೂತಿಧರಿಸಿ, ಸಾಧಾರಣ ರೀತಿಯ ಅಂಗಿಯೊಡನೆ ಕಸೆಪಂಚೆಯುಟ್ಟು ಕೈಯಲ್ಲಿ ಕಂಸಾಳೆ ಹಿಡಿದು ಮಹಾದೇವಯ್ಯನವರು ಕುಣಿಯಲು ನಿಂತರೆ, ಆ ನಿಲುವು ಮತ್ತು ಕುಣಿತಕ್ಕೆ ನೋಡುಗರು ಮಂತ್ರಮುಗ್ಧರಾಗಿಬಿಡುತ್ತಾರೆ. ಮಲೆಯ ಮಾದೇಶ್ವರನ ಭಕ್ತರಾದ ದೇವರಗುಡ್ಡರ ಬೀಸುಕಂಸಾಳೆ ಒಂದು ಗಂಡುನೃತ್ಯ; ರಭಸ, ಆವೇಶ, ಏಕಾಗ್ರತೆ, ಕಲಾತ್ಮಕತೆ, ಧಾರ್ಮಿಕತೆ ಮುಪ್ಪುರಿಗೊಂಡ ಒಂದು ಕಲಾಪ್ರಕಾರ. ಕಲಾವಿದನ ಗತ್ತಿನನಡೆ, ಕಂಸಾಳೆಯನ್ನು ಬೀಸುವ ಚಟುಕು, ಕುಳಿತುನಿಂತು, ಬಾಗಿಬಳುಕಿ, ಹೊರಳಿ, ಚಿಮ್ಮಿನೆಗೆದು ಕರಾರುವಾಕ್ಕಾಗಿ ತಾಳಕ್ಕೆ ತಾಳ ಉಯ್ಯುವ ಪರಿ ಅಮೋಘವಾದದ್ದು, ನೋಡುಗರಲ್ಲಿ ರೋಮಾಂಚನವುಂಟು ಮಾಡುವಂತದ್ದು.

ಕೂಗೊ ಕೂಗೊ ಮಾದೇವನ
ಕೂಗಯ್ಯ ಮುದ್ದು ಮಾದೇವನ
ಕೂಗಿದರೆ ಕುಣಿಯುತ್ತ ಬರುವನು ಮಾದೇವ
ಕೂಗಯ್ಯ ಮುದ್ದು ಮಾದೇವನ

ಎಂದು ಹಾಡುತ್ತ, ಮಹಾದೇವಯ್ಯ ಕುಣಿಯುತ್ತಿದ್ದರೆ ಅಲ್ಲೊಂದು ಅಲೌಕಿಕ ಪರಿಸರ ನಿರ್ಮಾಣಗೊಂಡು 'ಕಾಲ' ಚಲಿಸದೆ ನಿಂತುಬಿಡುತ್ತದೆ. ಮಹಾದೇವಯ್ಯನವರ ಕುಣಿತದಲ್ಲಿ ಅಂತಹ ಮಾಂತ್ರಿಕ ಶಕ್ತಿಯಿದ್ದು ಕಲಾರಸಿಕರನ್ನು ವಶೀಕರಿಸಿಕೊಂಡುಬಿಡುತ್ತದೆ.

ಕರ್ನಾಟಕದಲ್ಲಿ ಸ್ಥಳೀಯವಾಗಿ ಪ್ರಚಾರದಲ್ಲಿದ್ದ ಈ ಕಂಸಾಳೆ ಕಲೆಯನ್ನು ಭಾರತದಾದ್ಯಂತ ಪರಿಚಯಿಸುವ ಅವಕಾಶ

ಮಹಾದೇವಯ್ಯನವರಿಗೆ ಅರವತ್ತರ ದಶಕದಲ್ಲಿ ದೊರಕಿತು. ಮೈಸೂರು ರಾಜ್ಯ ಸಂಗೀತನಾಟಕ ಅಕಾಡೆಮಿಯ ಆಶ್ರಯದಲ್ಲಿ ಅಂತರರಾಜ್ಯ ಸಾಂಸ್ಕೃತಿಕ ವಿನಿಮಯ ತಂಡದ ಸದಸ್ಯರಾಗಿ ಈ ಕಲೆಯನ್ನು ಗುಜರಾತ್, ರಾಜಸ್ಥಾನ, ಕಾಶ್ಮೀರ, ಪಂಜಾಬ್, ಅಸ್ಸಾಂ, ಒರಿಸ್ಸಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಮಣಿಪುರ–ಹೀಗೆ ಭಾರತದಾದ್ಯಂತ ಕೊಂಡೊಯ್ದು ಜನಮನ್ನಣೆಗಳಿಸಿದರು. ಕಂಸಾಳೆ ಮಹಾದೇವಯ್ಯನವರ ಕಲೆಗೊಂದು ಶೈಕ್ಷಣಿಕ ಅಧಿಕೃತತೆ ದೊರಕೊಂಡದ್ದು ಇವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪರ್ಕಕ್ಕೆ ಬಂದಾಗ. ಇವರಲ್ಲಿದ್ದ ಪ್ರತಿಭೆ ಮತ್ತು ಅದ್ಭುತ ಕಲೆಗಾರಿಕೆಯನ್ನು ಗುರುತಿಸಿದ ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಕಂಸಾಳೆ ಕಲೆಯ ಸಂದರ್ಶಕ ಕಲಾವಿದರಾಗಿ ನೇಮಿಸಿತು. (೧೯೭೬-೮೦) ಈ ಅವಧಿಯಲ್ಲಿ ಮಹಾದೇವಯ್ಯನವರು ಅನೇಕ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಬೀಸು ಕಂಸಾಳೆ ನೃತ್ಯದಲ್ಲಿ ತರಬೇತಿ ನೀಡಿದರು. ಜನಪದ ಕಲಾವಿದನೊಬ್ಬ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸಂದರ್ಶಕ ಕಲಾವಿದನಾಗಿ ನೇಮಕಗೊಂಡದ್ದು ಬಹುಶಃ ಭಾರತೀಯ ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲಿಯೇ ಒಂದು ಅಪರೂಪದ ಸಂದರ್ಭ ಎನ್ನಬಹುದು. ಶೈಕ್ಷಣಿಕ ರಂಗಕ್ಕೆ ಮಹಾದೇವಯ್ಯನವರ ಪ್ರವೇಶ ಸಾಧ್ಯವಾಗುವಂತಹ ಒಂದು ಅವಕಾಶವನ್ನು ರೂಪಿಸುವಲ್ಲಿ ಡಾ|| ಹಾ. ಮಾ. ನಾಯಕ, ಡಾ|| ಜೀ. ಶಂ. ಪರಮಶಿವಯ್ಯ, ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರ ಸಹಾಯ ಮತ್ತು ಸಹಕಾರ ಇಲ್ಲಿ ಸ್ಮರಣೀಯ.

ಕಂಸಾಳೆಯ ಕಂಚಿನ ದನಿಯನ್ನು ರಾಷ್ಟ್ರೀಯ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಅವಕಾಶ ಮಹಾದೇವಯ್ಯನವರಿಗೆ ೧೯೮೯ರಲ್ಲಿ ಪ್ರಾಪ್ತವಾಯಿತು. ಜಾನಪದ ವಿದ್ವಾಂಸರಾಗಿದ್ದ ಜೀ.ಶಂ. ಪರಮಶಿವಯ್ಯನವರ ಮಾರ್ಗದರ್ಶನದಲ್ಲಿ ಕಂಸಾಳೆ ಮಹಾದೇವಯ್ಯನವರ ಕಲಾತಂಡ ಮಧ್ಯಪೂರ್ವದೇಶಗಳಾದ ಟರ್ಕಿ, ಟ್ಯೂನೀಷಿಯ, ಸೈಪ್ರಸ್, ಮಾಲ್ಟ ಮೊದಲಾದ ದೇಶಗಳಲ್ಲಿ ಪ್ರವಾಸಮಾಡಿ ಅನೇಕ ಪ್ರದರ್ಶನಗಳನ್ನು ನೀಡಿತು. ಕಂಸಾಳೆ ಮಹಾದೇವಯ್ಯನವರು ಬೀಸುಕಂಸಾಳೆ ನೃತ್ಯದ ಅದ್ಭುತ ಕಲೆಗಾರಿಕೆಯನ್ನು ಕಂಡ ವಿದೇಶಿಗರು ಬೆಕ್ಕಸಬೆರಗಾದರಂತೆ. ಇಂಥದೊಂದು ಕಲೆ ಭಾರತದ್ದು, ಅದರಲ್ಲಿಯೂ ಕರ್ನಾಟಕದ್ದು ಎಂಬ ಸಂಗತಿ ಯಾರೂಕೂಡ ಹೆಮ್ಮೆಪಡುವಂತದ್ದು. ಕಲಾವಿದರೇ ಒಂದು ದೇಶದ ನಿಜವಾದ ಸಂಪತ್ತು. ಕಲಾವಿದರೇ ಒಂದು ದೇಶದ ನಿಜವಾದ ಸಾಂಸ್ಕೃತಿಕ ರಾಯಭಾರಿಗಳು. ಮಹಾದೇವಯ್ಯನವರು ಇಂಥ ಸಾಂಸ್ಕೃತಿಕ ರಾಯಭಾರಿಯಾಗಿ ಯಶಸ್ಸು ಪಡೆಯುವುದರ ಜೊತೆಗೆ ಕರ್ನಾಟಕಕ್ಕೂ ಕೀರ್ತಿತಂದುಕೊಟ್ಟರು. ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ; ಆದರೆ ಕೆಲವರನ್ನು ಮಾತ್ರ ಆಯ್ಕೆಮಾಡಿಕೊಳ್ಳುತ್ತದೆ ಎಂಬ ಮಾತಿನಂತೆ ಮಹಾದೇವಯ್ಯನವರಲ್ಲಿ ಕಂಸಾಳೆ ಕಲೆ ತನ್ನ ಪರಿಪೂರ್ಣತೆಯನ್ನು ಕಂಡುಕೊಂಡಿತೆನ್ನಬಹುದು.

ಮಹಾದೇವಯ್ಯ ವ್ಯಕ್ತಿಯಾಗಿ, ಕಲಾವಿದರಾಗಿ ತುಂಬ ಅಪರೂಪದ ಬಾಳು ಬಾಳಿದವರು. ಸರಳತೆ, ಸಜ್ಜನಿಕೆಗಳು ಮೇಳವಿಸಿದ್ದ ವ್ಯಕ್ತಿತ್ವ ಇವರದ್ದು. ಕಿರಿಯರಿರಲಿ, ಹಿರಿಯರಿರಲಿ ಅವರೊಡನೆ ಮುಗ್ಧವಾಗಿ ಉಲ್ಲಾಸಕರವಾಗಿ ಬೆರೆಯುವ ಗುಣ ಇವರಲ್ಲಿತ್ತು. ಶಿಷ್ಯರ ಬಗ್ಗೆ ಇವರಿಗೆ ಅಪಾರ ಮಮತೆ ಪ್ರೀತಿವಾತ್ಸಲ್ಯಗಳಿದ್ದವು. ತಮ್ಮಲ್ಲಿದ್ದ ಕಲಾನಿಪುಣತೆಯನ್ನು ಇವರು ನಿರ್ಮತ್ಸರ, ನಿಸ್ವಾರ್ಥಮನೋಭಾವದಿಂದ ಇತರರಿಗೆ ಧಾರೆಎರೆದಿದ್ದಾರೆ. ಕಂಸಾಳೆಯನ್ನು ಆದಷ್ಟು ಹೆಚ್ಚು ಜನ ಕಲಿಯಬೇಕು, ಮಾದೇಶ್ವರನ ಕಾಯಕ ಪೂರೈಸಬೇಕು ಎಂದು ಮಹಾದೇವಯ್ಯ ಬಯಸುತ್ತಿದ್ದರು. ಇವರಿಂದ ಈ ಕಲೆಯ ದೀಕ್ಷೆ ಪಡೆದ ಅನೇಕ ಶಿಷ್ಯರು ಇವರ ಅಭೀಪ್ಸೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬಹುಪಾಲು ಜನಪದ ಕಲಾವಿದರಲ್ಲಿ ಕಂಡುಬರುವ ಗುಣವೆಂದರೆ ಪಡೆದಷ್ಟರಲ್ಲೇ ತೃಪ್ತಿ ಕಾಣುವ ಮನೋಭಾವ. ಮಹಾದೇವಯ್ಯ ಯಾವತ್ತೂ ಯಾವುದಕ್ಕೂ ಆಸೆ ಪಟ್ಟವರಲ್ಲ. ಕಂಸಾಳೆ ಕಾಯಕವೇ ಮಲೆಯ ಮದೇಶ್ವರನಿಗೆ ತಾನು ಅರ್ಪಿಸುವ 'ಎಡೆ' ಎಂದು ತಿಳಿದಿದ್ದ ಕಲಾಪ್ರೇಮಿ.

ತಮ್ಮ ಜೀವನದುದ್ದಕ್ಕೆ ಕಂಸಾಳೆಯನ್ನು ಉಸಿರಾಡುತ್ತ ಬಂದ ಮಹಾದೇವಯ್ಯನವರಿಗೆ ಅನೇಕ ಬಹುಮಾನ, ಪ್ರಶಸ್ತಿ, ಸನ್ಮಾನಗಳು ಲಭಿಸಿವೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಜನಪದ ಕಾವ್ಯಗಳನ್ನು ಬಿಡುವಿಲ್ಲದೆ ನಿರಂತರವಾಗಿ ದಿನಗಟ್ಟಲೆ ಹಾಡಬಲ್ಲಂತಹ ಪ್ರತಿಭೆ ಹಾಗೂ ನೆನಪಿನ ಶಕ್ತಿಯನ್ನು ಪಡೆದಿದ್ದ ಮಹಾದೇವಯ್ಯನವರು ಸುಮಾರು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಆಕಾಶವಾಣಿಗೆ ನಿರಂತರ ಕಾರ್ಯಕ್ರಮಗಳನ್ನು ನೀಡುತ್ತ ಬಂದವರು. ಅನೇಕ ರಾಷ್ಟ್ರೀಯ ಮೇಳ, ಉತ್ಸವಗಳಲ್ಲಿ ಭಾಗವಹಿಸಿದವರು. ದಸರಾ ನಾಡಹಬ್ಬದ ಸಂದರ್ಭದಲ್ಲಿ ಮಹಾದೇವಯ್ಯನವರ ಕಂಸಾಳೆ ತಂಡಕ್ಕೆ ನಿರಂತರ ಆಹ್ವಾನವಿರುತ್ತಿತ್ತು. ಮೈಸೂರು ಅರಮನೆಯ ಆದರಕ್ಕೂ ಮಹಾದೇವಯ್ಯನವರು ಪಾತ್ರರಾಗಿದ್ದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರು ಇವರ ಕಲೆಯನ್ನು ಮೆಚ್ಚಿಕೊಂಡು ಚಿನ್ನದ ಪದಕ ನೀಡಿ ಗೌರವಿಸಿದ್ದರು. ಇವರ ಕಂಸಾಳೆ ನೃತ್ಯವನ್ನು ನೋಡಿ ಮೆಚ್ಚಿಕೊಂಡ ಗಣ್ಯರಲ್ಲಿ ಶ್ರೀಮತಿ ಇಂದಿರಾಗಾಂಧಿ, ಜಾಕೀರ್ ಹುಸೇನ್, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ಗೋವಿಂದ ನಾರಾಯಣ್, ಡಾ|| ರಾಜಕುಮಾರ್ ಮುಂತಾದವರಿದ್ದಾರೆ. ೧೯೬೭ ರಲ್ಲಿ ಮೈಸೂರು ಸಂಗೀತ ಮತ್ತು ನೃತ್ಯ ಅಕಾಡೆಮಿಯು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೬೭ ರಲ್ಲಿ ನಡೆದ ಕರ್ನಾಟಕ ಉಣ್ಣೆ ನೇಕಾರರ ಸಂಘದ ಪ್ರಥಮ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಲಾಯಿತು. ೧೯೮೩ ರಲ್ಲಿ ಮೈಸೂರಿನ ನಾಗರಿಕರು ಇವರಿಗೆ 'ಕಂಸಾಳೆ ಭಾಸ್ಕರ' ಎಂಬ ಬಿರುದನ್ನು ನೀಡಿ ಸನ್ಮಾನಿಸಿದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕೂಡ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೯೦ರಲ್ಲಿ ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ೧೯೮೮ ರಲ್ಲಿ ನವದೆಹಲಿಯ

ಇಂದಿರಾಗಾಂಧಿ ಸ್ಮಾರಕ ಟ್ರಸ್ಟ್ ಇವರಿಗೆ ಫೆಲೋಶಿಪ್ ನೀಡಿ ಗೌರವಿಸಿದ್ದು, ಮಹಾದೇವಯ್ಯ ಈ ಗೌರವಕ್ಕೆ ಪಾತ್ರರಾದ ದಕ್ಷಿಣ ಭಾರತದ ಮೊಟ್ಟ ಮೊದಲ 'ಜನಪದ ಕಲಾವಿದ'ರಾಗಿದ್ದಾರೆ. ೧೯೮೯ರ ದಸರಾ ಉತ್ಸವದಲ್ಲಿ ಮಹಾದೇವಯ್ಯನವರ ನೇತೃತ್ವದ ಬೀಸು ಕಂಸಾಳೆ ತಂಡ ಮೊದಲ ಬಹುಮಾನ ಪಡೆದಿದೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವ (ಬೆಂಗಳೂರು) ಹಾಗೂ ದೆಹಲಿ ಮತ್ತು ಮುಂಬಯಿನಲ್ಲಿ ನಡೆದ ಅಪ್ನಾ ಉತ್ಸವಗಳಲ್ಲಿ ಮಹಾದೇವಯ್ಯನವರು ಕರ್ನಾಟಕವನ್ನು ಪ್ರತಿನಿಧಿಸಿ ಜನಮನ್ನಣೆ ಗಳಿಸಿದ್ದಾರೆ. ಬೆಂಗಳೂರು ದೂರದರ್ಶನ ಬೀಸು ಕಂಸಾಳೆಯ ಸಾಕ್ಷ್ಯಚಿತ್ರವನ್ನು ಮಹಾದೇವಯ್ಯನವರ ನೇತೃತ್ವದಲ್ಲಿ ತಯಾರಿಸಿ ಪ್ರಸಾರಮಾಡಿದೆ (೧೯೯೩). ಮಹಾದೇವಯ್ಯನವರ ಕಂಠಸಿರಿಯಲ್ಲಿ ಮಲೆಯ ಮಾದೇಶ್ವರ ಕಾವ್ಯದ ಪ್ರಸಂಗಗಳು ಅನೇಕ ಧ್ವನಿಸುರುಳಿಗಳಾಗಿ ಬಿಡುಗಡೆಗೊಂಡಿದ್ದು ಅಪಾರ ಜನ ಮೆಚ್ಚುಗೆಗೆ ಪಾತ್ರವಾಗಿವೆ.

ಕಂಸಾಳೆ ಪರಂಪರೆಯ ಮುಂದುವರಿಕೆಯಲ್ಲಿಯೂ ಮಹಾದೇವಯ್ಯನವರು ವಹಿಸಿದ ಪಾತ್ರ ಅತ್ಯಂತ ಪ್ರಮುಖವಾದದ್ದು. ಇವರು ಅನೇಕ ಕಂಸಾಳೆ ತರಬೇತಿ ಶಿಬಿರಗಳನ್ನು ಕೂಡ ನಡೆಸಿಕೊಟ್ಟಿದ್ದಾರೆ. ಮೈಸೂರಿನ 'ರಂಗಾಯಣ' ಕೂಡ ಇವರ ಕಲಾ ಮಾರ್ಗದರ್ಶನವನ್ನು ಬಳಸಿಕೊಂಡಿದೆ. ತಂದೆಯ ಕಲೆಯನ್ನು ಮೈಗೂಡಿಸಿಕೊಂಡಿರುವ ಇವರ ಮಗ ಕುಮಾರಸ್ವಾಮಿ (ಕನ್ನಡ ಅಧ್ಯಯನ ಸಂಸ್ಥೆಯ ಉದ್ಯೋಗಿ) ಕೂಡ ಕಂಸಾಳೆ ಕಲಾವಿದ. ತಂದೆಯ ಮಾರ್ಗದರ್ಶನದಲ್ಲಿ ಸಮರ್ಥ ಕಲಾವಿದರಾಗಿ ರೂಪುಗೊಂಡವರು. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಯದ ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ ಕೇರಳದ ಕಲಾವಿದರಿಗೆ ಕಂಸಾಳೆ ಕಲಿಕೆ ಶಿಬಿರವನ್ನು ತಂದೆ ಮಕ್ಕಳಿಬ್ಬರೂ ಒಗ್ಗೂಡಿ ನಡೆಸಿಕೊಟ್ಟಿದ್ದು ಸ್ಮರಣೀಯ. ಮಹಾದೇವಯ್ಯನವರ ಮೊಮ್ಮಕ್ಕಳಾದ ರವಿ ಚಂದ್ರ (೧೬) ಹಾಗೂ ಮಹದೇವ (೧೩) ಕೂಡ ಈ ಕಲೆಯಲ್ಲಿ ಅರಳುತ್ತಿರುವ ಕುಸುಮಗಳು. ತಂದೆ, ಮಗ, ಮೊಮ್ಮಕ್ಕಳು—ಹೀಗೆ ಮೂರು ತಲೆಮಾರುಗಳ ವೈಶಿಷ್ಟ್ಯದ ಕಂಸಾಳೆ ಕುಟುಂಬ ಮಹಾದೇವಯ್ಯನವರದು.

ಸುಮಾರು ೯೦ ವರ್ಷಗಳ ತುಂಬಿದ ಬಾಳನ್ನು ಬಾಳಿದ, ಕಂಸಾಳೆ ಕಲೆಗೆ ವಿಶ್ವಮಾನ್ಯತೆ ತಂದುಕೊಟ್ಟ, ಕಂಸಾಳೆ ಎಂದರೆ ಮಹಾದೇವಯ್ಯ ಮಹಾದೇವಯ್ಯ ಎಂದರೆ ಕಂಸಾಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಮಹಾದೇವಯ್ಯನವರು ದಿನಾಂಕ ೩೧-೪-೯೬ ರಂದು ಮೈಸೂರಿನಲ್ಲಿ ನಿಧನ ಹೊಂದಿದರು.

ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಅದ್ವಿತೀಯ ಸೇವೆಗಾಗಿ ನೀಡುವ 'ಜಾನಪದ ಶ್ರೀ' ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ಇವರಿಗೆ ಕೊಡಮಾಡಿತ್ತಾದರೂ ಕಾರಣಾಂತರಗಳಿಂದ ತಡವಾಗಿ ಇತ್ತೀಚೆಗೆ ಮರಣೋತ್ತರವಾಗಿ ಪ್ರಶಸ್ತಿಯನ್ನು ಘೋಷಿಸಲಾಗಿದೆ.



ಬೀಸು ಕಂಸಾಳೆ ನೃತ್ಯದ ವೀರ ಭಂಗಿಯಲ್ಲಿ ಶ್ರೀ ಮಹಾದೇವಯ್ಯನವರು
(ಬಲದಿಂದ ಎರಡನೆಯವರು)

ಅಮಾಯಕ ಆನಂದಗಳು

ಡಾ|| ಮ. ಸು. ಕೃಷ್ಣಮೂರ್ತಿ

ನಾನು ಹಳ್ಳಿಯಲ್ಲಿ ಹುಟ್ಟಿದವನು; ಅದರಲ್ಲೂ ಬಡಕುಟುಂಬದಲ್ಲಿ ಜನಿಸಿದ ನಾನು ಹಕ್ಕಿಯಂತೆ ಹಾರಾಡಿ, ಮೀನಿನಂತೆ ನಮ್ಮೂರ ಹೊಳೆ ಹೇಮಾವತೀ ನದಿಯಲ್ಲಿ ಈಜಾಡಿ ಸ್ವಚ್ಛಂದವಾಗಿ ಬಾಲ್ಯವನ್ನು ಕಳೆದವನು. ಹೀಗಾಗಿ ಇಂಗ್ಲೀಷಿನಲ್ಲಿ ಯಾವುದನ್ನು "Innocent Pleasures" ಎನ್ನುತ್ತಾರೋ ಅವನ್ನು ಸಾಕಷ್ಟು ಕಂಡುಂಡವನು. ಭೌತಿಕವಾಗಿ ಸ್ಥಾನಮಾನವನ್ನೆಲ್ಲ ಪಡೆದರು ಆ ಸುಖದ ಮುಂದೆ ಇವನ್ನು ನೀವಾಳಿಸಬೇಕೆನ್ನಿಸುತ್ತದೆ. ಈ ಇಳಿವಯಸ್ಸಿನಲ್ಲಿ ನನ್ನ ಬಾಲ್ಯ ಜೀವನದ ಆ ಸ್ಮೃತಿ ಅನುರಕ್ತಿಯಾಗಿ ನನ್ನನ್ನು ರೋಮಾಂಚನಗೊಳಿಸುತ್ತದೆ; ಮೈಮರೆಸುತ್ತದೆ, 'ತೇಹಿನೋ ದಿವಸಾಃ ಗತಾಃ' ಎಂದು ಹಳಹಳಿಸುವಂತೆ ಮಾಡುತ್ತದೆ.

ಆಗ ಈಗಿನಂತೆ ಟೂಕ್‌ಪೇಸ್ಟ್, ಟೂತ್ ಬ್ರಷ್ ನಮ್ಮ ಊರಿಗೆ ಪಾದಾರ್ಪಣೆ ಮಾಡಿರಲಿಲ್ಲ. ಹೀಗಾಗಿ ನಾವು ಬೆಳಗೆದ್ದ ಕೂಡಲೆ ಬೇವಿನಕಡ್ಡಿಯನ್ನು ಅಗಿದು ಅಗಿದು ಹಲ್ಲು ತಿಕ್ಕುತ್ತಿದ್ದೆವು. ಆ ಬೇವಿನ ಕಡ್ಡಿಗಾಗಿ ಅಣ್ಣ ತಮ್ಮಂದಿರು ಬಡಿದಾಡುತ್ತಿದ್ದುದುಂಟು. ಬಾಯಿ ಸ್ವಚ್ಛ, ಮನ ಸ್ವಚ್ಛ! ಅದೂ ನದೀ ನೀರಿನಲ್ಲಿ ಬಾಯಿ ತೊಳೆಯುವುದು, ಮುಕ್ಕಳಿಸುವುದೆಂದರೆ ಗಂಡೂಷಕ್ರಿಯೆ ನಮಗೆ ನಿಜಕ್ಕೂ ಒಂದು ಕ್ರೀಡೆ, ಲೀಲೆ. ಇನ್ನು ಸ್ನಾನ! ಚಳಿ ಮಳೆಗಾಲದಲ್ಲಿ ಬಿಟ್ಟು ಉಳಿದೆಲ್ಲ ವೇಳೆಯಲ್ಲೂ ಸಾಧ್ಯವಾದಷ್ಟೂ ನಮಗೆ ನದಿಯ ಸ್ನಾನ. ಅದೂ ಒಂದು ಮೋಜು. ನಮ್ಮ ಊರಿನ ಹಳೆಯ ಅಣೆಕಟ್ಟಿನ ಬಳಿ ವಿಸ್ತೃತವಾದ ಒಂದು ಮರಳಿನ ತಾಣ. ನೀರಲ್ಲಿ ಮುಳುಗುವುದು, ಮರಳಿನಲ್ಲಿ ಹೊರಳಿ ಮತ್ತೆ ನೀರಿಗೆ ಧುಮುಕುವುದು, ಇದು ನಮ್ಮ ಬೇಸಿಗೆಯ ಕ್ರೀಡೆ, ಅದೆಷ್ಟು ಹೊತ್ತು ಆ ಸ್ಥಳದಲ್ಲಿರುತ್ತಿದ್ದೆವೋ ಕಾಣೆ ಕೊನೆಗೆ ಎಷ್ಟೋ ಸಾರಿ ಹಿರಿಯರಿಂದ ಬೈಗುಳ ಏಟು ತಿಂದೇ ಮನೆಗೆ ಮರಳುತ್ತಿದ್ದುದು.

ನಾನು ಅಕ್ಷರ ಕಲಿತುದುದು ಮರಳಿನ ಮೇಲೆ. ಮರಳಿನ ಹಾಸಿನ ಮೇಲೆ ಬೆರಳಿನಲ್ಲಿ ಅ ಆ ಇ ಈ ಬರೆದುದೇ ಅಲ್ಲಿ. ಕೊಂಚ ದೊಡ್ಡವನಾದ ಮೇಲೆ ನಮಗಿಂತಲೂ ದೊಡ್ಡ ಆಕಾರದಲ್ಲಿ 'ಈರ' ಎಂದು ಬರೆದು ನಮ್ಮ ಗೆಳೆಯ ಈರಣ್ಣ ಅದರಲ್ಲಿ ಹೊರಳಾಡಿ ತನ್ನ ವೀರತ್ವವನ್ನು ಮೆರೆಯುತ್ತಿದ್ದ. ಆದರೆ ನನ್ನ ಹೆಸರು ಬರೆಯುವುದು 'ಈರ'ದಷ್ಟು ಸುಲಭವಲ್ಲ, ಹೀಗಾಗಿ ಆ 'ಈರನ ವೀರದಲ್ಲಿ ನಾನು ಸೇರಿಕೊಳ್ಳು

ತ್ತಿದ್ದೆ. ಸ್ಲೇಟಿನ ಮೇಲೆ ಬರೆದು ಅಳಿಸಿದರೆ ಕೈ ಕೊಳೆಯಾಗುತ್ತದೆ. ಆದರೆ ಮರಳ ಮೇಲೆ? ಅದೆಷ್ಟು ಬರೆದರೂ ಕೈ ಕೆಸರಾಗದು; ಮಿಗಿಲಾಗಿ ಮೂರು ಕಾಸೂ ಖರ್ಚಿಲ್ಲ. ಈ ರೀತಿ ನಾವು ಪುಕ್ಕಟೆ ಜ್ಞಾನಾರ್ಜನೆ ಮಾಡುತ್ತಿದ್ದೆವು. ಹೀಗೆ ಅಕ್ಷರ ಕಲಿತ ಮೇಲೆ 'books in the running brooks' ಎಂಬಂತೆ ನೂರಾರು ಹೊತ್ತಿಗೆ ಗಳಲ್ಲಿ ದೊರೆಯದ ರಸಾನುಭವವನ್ನು ನಮ್ಮೂರ ಹೊಳೆ ಹಾಗೂ ಅಣೆಕಟ್ಟೆಯಿಂದ ಧುಮುಕುವ ನೀರಿನಲ್ಲಿ ಪಡೆದುದುಂಟು.

ನಮ್ಮ ಊರಿಗೆ ಇನ್ನೂ ಕಾಫೀ ಬಂದಿರಲಿಲ್ಲ ಎಂದ ಮೇಲೆ ಕಾಫೀ ಕ್ಲಬ್ ಹೋಟೆಲುಗಳ ಮಾತೇಕೆ? ಬೆಳಗೆದ್ದು ಪ್ರಾತರ್ವಿಧಿಗಳನ್ನು ಮುಗಿಸಿ ನಮ್ಮೂರ ಹೊಲಗದ್ದೆಗಳ ಬಳಿಗೆ ಒಂದು ಸುತ್ತು ಹೋಗಿ ಬರುವುದು ನಮ್ಮ ದಿನಚರಿ! ಅಲ್ಲಿಂದ ದೇವರ ಪೂಜೆಗೆ ಹೂ ತುಳಸಿ ಕೊಯ್ದು ತರಬೇಕು. ಹೂ ತುಳಸಿಯನ್ನು ಕೀಳುವಾಗಲೇ ಹಾದಿಯಲ್ಲಿ ನಮ್ಮ ಗಮನ ಅಲ್ಲಿದ್ದ ಗಣಕೆ, ಗುಬ್ಬಟ್ಟೆ, ಕಾರೆ, ಬೋರೆ ಹಣ್ಣು ಪೆಟಲುಕಾಯಿ, ಸೀಬೆಕಾಯಿ, ಹುಣಸೆಕಾಯಿ ಬೇಸಿಗೆಯಾದರೆ ಮಾವಿನ ಮಿಡಿಯ ಮೇಲೆ ನಮಗೆ ಕಣ್ಣು. ಕಾರೆ ಗಿಡದ ಕಾಯಿಗಳನ್ನು ಕಿತ್ತು ತಂದು ಒಂದು ಡಬ್ಬಿಗೆ ತುಂಬಿಸಿ ಅದರ ಜೊತೆಗೆ ಕಲ್ಲು ಹರಳುಗಳನ್ನು ತುಂಬಬೇಕು. ಅಷ್ಟು ಮಾಡಿದರೆ ಸಾಕು, ಮಾರನೆಯ ದಿನಕ್ಕೆ ಅದು ಹಣ್ಣಾಗಿರುತ್ತದೆ. ಗಣಕೆ ಅದರಲ್ಲೂ ಕರಿಯ ಗಣಕೆ ಹಣ್ಣೆಂದರೆ ಇಂದೂ ನನ್ನ ಬಾಯಲ್ಲಿ ನೀರೂರುತ್ತದೆ. ಗಣಕೆ, ಗುಬ್ಬಟ್ಟೆ, ಕಾರೆ, ಬೋರೆಹಣ್ಣುಗಳು ಕಾಡುಹಣ್ಣು ಎಂದುಕೊಂಡಿದ್ದೆ. ಆದರೆ ಅವು ಪೇಟೆಯ ದಾರಿಯಲ್ಲಿ ಮಾರಾಟವಾಗುತ್ತಿದ್ದುದನ್ನು ಕಂಡು ನಾನು ಅಚ್ಚರಿಪಟ್ಟುದುಂಟು. ನಮ್ಮ ಹಳ್ಳಿಯ ಹಣ್ಣಿನ ಬಗೆಗೆ ಹೆಮ್ಮೆ ಪಟ್ಟುದುಂಟು.

ಮನೆಗೆ ಮರಳಿದರೆ ಬಿಸಿಬಿಸಿ ಹುಯ್ಗಡುಬು, ದೋಸೆ, ರಾಗಿರೊಟ್ಟಿ ಅದಕ್ಕೆ ಕಾಯಿಹಾಲು, ಚಟ್ನಿಪುಡಿ, ಬೆಣ್ಣೆ ಮತ್ತು ಮೊಸರು ನಮ್ಮ ದಾರಿ ಕಾಯುತ್ತಿರುತ್ತಿದ್ದವು. ಅಲ್ಲಿ ಗಡದ್ದಾಗಿ ತಿಂಡಿ ತಿಂದು ಮನಸ್ಸಿದ್ದರೆ ಇನ್ನು ಊಟ ಮಧ್ಯಾಹ್ನ ಮೂರಕ್ಕೋ, ನಾಲ್ಕಕ್ಕೋ! ಮನೆಯಲ್ಲಿ ಏನಾದರೂ ವಿಶೇಷವಿದ್ದರೆ ಅಂದು ನಮಗೆ ಕೆಂಡರೊಟ್ಟಿ ಎಂದರೆ ನಾವು ಹುಡುಗರೇ ಅಕ್ಕಿ ಇಲ್ಲವೆ ರಾಗಿ ಹಿಟ್ಟನ್ನು ಕಲಸಿ ಉಪ್ಪು, ತೆಂಗಿನಕಾಯಿ ತುರಿ ಹಾಕಿ ಒಂದು ಮುತ್ತುಗ ಇಲ್ಲವೆ ಆಲದೆಲೆಯ ಮೇಲೆ ಅದನ್ನು ತಟ್ಟಿ ಅದರ ಮೇಲೆ ಮತ್ತೊಂದು ಎಲೆಯನ್ನು ಅಂಟಿಸಿ ನೀರೊಲೆಗೆ ಹಾಕಿದರೆ ಕಾಲುಗಂಟೆಯಲ್ಲಿ ರೊಟ್ಟಿ ಸಿದ್ಧ! ಆ ರೊಟ್ಟಿಗೆ ಕಾಕಂಬಿಯಿದ್ದರೆ ಬಲುಚೆನ್ನ. ತಿಂಡಿ ತಿಂದಾದ ಮೇಲೆ ಹಾಲು ಇಲ್ಲವೆ ತಿಳಿ ಮಜ್ಜಿಗೆ ಕುಡಿಯಬೇಕು. ಆಗಲೇ ಅದರ ಗಮ್ಮತ್ತು ಗೊತ್ತಾಗುವುದು.

ಅನಂತರ ಹೊಲಗದ್ದೆ ಇಲ್ಲವೆ ತೋಟದ ಮೇಲ್ವಿಚಾರಣೆ! ಹಾದಿಯಲ್ಲಿ ಯಾರಲ್ಲಾದರೂ ಆಲೆಕಟ್ಟಿದ್ದರೆ ಆ ಆಲೆಮನೆಯಲ್ಲಿ ನಮಗೆ ಔತಣ! ನಮ್ಮ ಹೊಟ್ಟೆ ಹಿಡಿಯುವಷ್ಟು ಕಬ್ಬಿನ ಹಾಲು ಕುಡಿಯಬಹುದು. ಯಾವ ಆಲೆಮನೆಗೆ ಹೋದರೂ ರೈತರಿಂದ ನಮಗೆ ಸ್ವಾಗತ! ನಾವು ಕುಡಿದದ್ದೂ ಅಲ್ಲದೆ ಮನೆಗೆ ಕಬ್ಬಿನ ಹಾಲನ್ನು,

ಕಾಕಂಬಿಯನ್ನು ಕೊಟ್ಟು ಕಳಿಸುತ್ತಿದ್ದರು. ಇಲ್ಲೆಲ್ಲ ಹಣದ ಮಾತೇ ಇಲ್ಲ. ಒಲವೆ ನಮ್ಮ ಬದುಕು. ಅದನೆ ಬಳಸುವುವು ಅದಕು ಇದಕು ಏದುಕು ಎಂಬ ಕವಿವಾಣಿ ಇಂದಿಗೂ ನಮ್ಮ ಆಲೆ ಮನೆಗಳಲ್ಲಿ ಸಾರ್ಥಕ್ಯವನ್ನು ಕಂಡು ಕೊಳ್ಳುತ್ತದೆ.

ಆಲೆ ಕಟ್ಟಿಲ್ಲದಿದ್ದರೆ ನಮಗೆ ಹೋದಲ್ಲೆಲ್ಲ ಕಬ್ಬಿನ ಸೇವಾರ್ಥ. ಕಬ್ಬನ್ನು ಇಂದಿಗೂ ಸಿಗಿದು ತಿನ್ನುವುದೆಂದರೆ ನನಗೆ ಎಲ್ಲಿಲ್ಲದ ಆಸೆ! ಆಗ ಹಾಗೆ ತಿಂದುದರಿಂದಲೋ ಏನೋ ಈಗಲೂ ನಿವೃತ್ತನಾದ ಮೇಲೂ ನನ್ನ ಒಂದು ಹಲ್ಲೂ ಹಲ್ಲಾಡಿಲ್ಲ, ಈಗಲೂ ನಾನು ಕಬ್ಬನ್ನು ಸಿಗಿದೇ ತಿನ್ನುತ್ತೇನೆ.

ನನ್ನ ಗೆಳೆಯ ತಿಂಗ್ರಿಗೆ ಕಬ್ಬಿನ ಹಾಲು, ಕಾಕಂಬಿಗಿಂತ ಬೆಲ್ಲ ಮಾಡಿ ಮುಗಿಸಿದ ಮೇಲೆ ಉಳಿದ ಪಾಕದಲ್ಲಿ ಎಲ್ಲಿಲ್ಲದ ಆಸಕ್ತಿ! ಆ ಪಾಕಕ್ಕೆ ಕಡಲೇಕಾಯಿ, ಹುರಿಗಡಲೆ, ಕೊಬ್ಬರಿ, ಎಳ್ಳು ಮೊದಲಾದವನ್ನು ಹಾಕಿಸಿ ಅದರ ಉಂಡೆಯನ್ನು ತಯಾರಿಸಿ ತಾನೂ ತಿಂದು ಗೆಳೆಯರಿಗೂ ಹಂಚುವುದರಲ್ಲಿ ಅವನಿಗೆ ವಿಶೇಷ ಆಸಕ್ತಿ! ಅದಕ್ಕೆ ಪ್ರತಿಯಾಗಿ ಅವನು ಬ್ರಾಹ್ಮಣನಾದ ನನ್ನಿಂದ ನಿರೀಕ್ಷಿಸುತ್ತಿದ್ದುದು ಮಿಡಿಮಾವಿನಕಾಯಿಯ ಉಪ್ಪಿನಕಾಯಿ.

ತಿಂಗ್ರಿಯ ಮತ್ತೊಂದು ಸಾಹಸವೆಂದರೆ ಜೇನು ಹಿಡಿಯುವುದು. ಅವನ ಕೈಯಲ್ಲಿ ಗರುಡಮಚ್ಚೆ ಇತ್ತಂತೆ. 'ಗರುಡಮಚ್ಚೆ' ಇದ್ದವರನ್ನು ಹಾವು ಕಡಿಯದೆಂದು ಕೇಳಿದ್ದೇನೆ. ಅದಕ್ಕೂ ಜೇನಿಗೂ ಏನು ಸಂಬಂಧ?' ಎಂದು ಅವನನ್ನು ಕೇಳಿದೆ. 'ಮಂಕೆ, ಹಾವೇ ಕಡಿಯದಿದ್ದ ಮೇಲೆ ಜೇನು ಎಲ್ಲಿ ಕಡಿಯುವುದೋ?' ಅಂತೂ ಅವನು ಜೇನುಹುಟ್ಟಿಗೆ ಕೈಹಾಕಿ ಜೇನು ತಂದು 'ಆ' ಎನ್ನೋ ಎಂದು ಹೇಳಿ ನನ್ನ ಬಾಯಿ ಬಿಡಿಸುತ್ತಿದ್ದ. ನನ್ನ ಬಾಯಿಗೆ ಜೇನುತುಪ್ಪ ಸುರಿಸುತ್ತಿದ್ದ; ಅದರ ಜೊತೆಗೆ ಅವನು ಹುಟ್ಟಿಯನ್ನು ಹಿಂಡಿದಾಗ ಮೊಟ್ಟೆಯ ರಸ, ಮೇಣವೂ ಬೀಳುತ್ತಿದ್ದಿರಬೇಕು. ಒಟ್ಟಿನಲ್ಲಿ ಅವೆಲ್ಲ ಸಿಹಿ, ಅದು ಮುಖ್ಯ.

ತಿಂಗ್ರಿಯ ಜೊತೆ ಯಾವಾಗಲೂ ಬಾಲಕರ ಒಂದು ತಂಡವೇ ಇರುತ್ತಿತ್ತು. ಕಾರಣ ಅವನು ಒಂದಲ್ಲ ಒಂದು ಪದಾರ್ಥವನ್ನು ತಿನ್ನಿಸಿ ಅವರನ್ನು ತವಕಿಸುತ್ತಿದ್ದ. ರಾಗಿಯ ತೆನೆ ಬಂದಾಗ ಆ ತೆನೆಗಳನ್ನು ಕಿತ್ತು ಅವುಗಳಿಗೆ ತರಗೆಲೆಯ ಬೆಂಕಿಯಿಂದ ಶಾಖ ಕೊಟ್ಟು ಅವುಗಳನ್ನು ಕೈಯಿಂದ ಉಜ್ಜುತ್ತಿದ್ದ. ಅರಳಾಗಿರುತ್ತಿದ್ದ ಆ ರಾಗಿ ತಿನ್ನಲು ಬಲು ರುಚಿ. ನಂಗೆ, ನಂಗೆ ಎಂದು ಹುಡುಗರು ಹುರುಡುಗಟ್ಟುತ್ತಿದ್ದರು.

ತಿಂಗ್ರಿ ತಿಂಡಿಯ ಪ್ರಿಯನಾದರೆ ಗುಂಡ ಕೌತುಕ ಪ್ರಿಯ. ಅವನಿಗೆ ಹೊಟ್ಟೆಗಿಂತ ಮಲ್ಲಿಗೆ ಹೂ ಪ್ರಿಯ. ನಾವೆಲ್ಲ ಜೊತೆಯಲ್ಲಿ ಜಾತ್ರೆಗಳಲ್ಲಿ ಭಾಗವಹಿಸಲು, ರಥೋತ್ಸವ ನೋಡಲು ನಮ್ಮೂರಿನ ಸುತ್ತಮುತ್ತಣ ಊರುಗಳಿಗೆ ನಡೆದೇ ಹೋಗುತ್ತಿದ್ದೆವು. ಆಗ ಈಗಿನಂತೆ ಬಸ್ ಇರಲಿಲ್ಲ. ಹೇಮಗಿರಿಯ ರಂಗನಾಥ, ಅಕ್ಕಿಹೆಬ್ಬಾಳಿನ ನರಸಿಂಹ, ಕಿಕ್ಕೇರಿಯ ಕಿಕ್ಕೇರಮ್ಮನ ತೇರಿಗೆ ನಾವು ತಪ್ಪದೇ ಹೋಗುತ್ತಿದ್ದೆವು. ಅನುಕೂಲವಾದರೆ ಜೋಡೆತ್ತಿನ ಗಾಡಿಯಲ್ಲಿ ಕುಳಿತು ಬೆಳದಿಂಗಳ ರಾತ್ರಿಯಲ್ಲಿ ಪಯಣ, ಎತ್ತಿನ ಘಂಟೆಗಳ ಕಿಣಿಕಿಣಿನಾದ ಹಿನ್ನೆಲೆಯಲ್ಲಿ ಜನಪದಗೀತೆ ಹಾಡುವುದೆಂದರೆ ನಮ್ಮ ಬಸವನಿಗೆ ಪ್ರಾಣ! ಅವನ ಜೊತೆಗೆ ನಾವೂ

ದನಿಗೂಡಿಸಿ ಅದೊಂದು ಕೋರಸ್ ಆಗುವಂತೆ ಮಾಡುತ್ತಿದ್ದೆವು.

ಹೇಮಗಿರಿ ಬೆಟ್ಟ ಏರುವಾಗ ಹಾದಿಯಲ್ಲಿ ಅರವಟ್ಟಿಗೆ ಕಟ್ಟಿಕೊಂಡು ಕೆಲವರು ಮಜ್ಜಿಗೆ ಕೊಟ್ಟರೆ, ಕೆಲವರು ಪಾನಕ ಕೊಡುತ್ತಿದ್ದರು. ಇನ್ನೂ ಕೆಲವು ಮಹಾನುಭಾವರು ಕೆಂಪು ಕಲ್ಲುಸಕ್ಕರೆ ಕೊಟ್ಟು ಪುಣ್ಯ ಕಟ್ಟಿಕೊಳ್ಳುತ್ತಿದ್ದರು. ಯಾರೋ ಪುಣ್ಯಾತ್ಮರು ಜಾತ್ರೆಗೆ ಬಂದವರಿಗೆಲ್ಲ ಸಮಾರಾಧನೆಯ ಊಟ ಏರ್ಪಡಿಸುತ್ತಿದ್ದರು. ಆ ಊಟದಲ್ಲಿ ಬ್ರಾಹ್ಮಣ ತರುಣರಿಗೆ ಊಟ ಬಡಿಸುವ ಸ್ವಯಂಸೇವೆ. ಅವರ ಜೊತೆ ಸೇರಿಕೊಂಡು ನಾನು ನೀರು ಬಡಿಸಿದುದುಂಟು. ನೀರಿಗೆ ಈಗಿನಂತೆ ಪಾತ್ರೆಯಿರುತ್ತಿರಲಿಲ್ಲ. ಒಂದು ಮಡಕೆಗೆ ತೂತು ಕೊರೆದಿರುತ್ತಿತ್ತು. ಆ ತೂತನ್ನು ಬೆರಳಿನಿಂದ ಮುಚ್ಚಿಕೊಂಡಿರಬೇಕು. ನೀರು ಕೇಳಿದವರ ಲೋಟದ ಮೇಲೆ ಆ ತೂತಿನ ಮೇಲಿನ ಬೆರಳು ತೆರೆದಾಗ ನೀರು ಬೀಳುತ್ತಿತ್ತು. ಇದೇ ರೀತಿ ಸಾರು, ಹುಳಿ, ಪಾಯಸ ಬಡಿಸಲು ಸೌಲಭ್ಯ ಇರುತ್ತಿರಲಿಲ್ಲ. ಒಂದು ಕರಟದ ತುದಿಗೆ ಎರಡು ತೂತು ಕೊರೆದು ಬಿದಿರಿನ ದಬ್ಬೆ ಸಿಕ್ಕಿಸಿದರೆ ಸೌಟಾಯಿತು. ಆ ಕರಟದ ಸೌಟಿನಿಂದ ಬಂದ ಕಡಲೆಬೇಳೆಯ ಪಾಯಸವನ್ನು ಎಷ್ಟು ತಿಂದರೂ ಸಾಲದು. ಈ ರೀತಿ ತಿನ್ನುವುದೇ ಅಲ್ಲ. ಸ್ವಯಂಸೇವಕರಾಗಿ ದುಡಿಯುವುದರಲ್ಲೂ ವಿಶೇಷ ಆನಂದ.

ಅಂದು ರಾತ್ರಿ ಜಾತ್ರೆಯಲ್ಲಿ ಯಕ್ಷಗಾನ, ಬಯಲಾಟ, ಚಕ್ಕಳ ಗೊಂಬೆಯಾಟ ಇವು ಮೂರನ್ನೂ ಕಂಡು ಆನಂದಿಸಿದ ನಮಗೆ ನಿದ್ದೆಯ ಪರಿವೆಯೇ ಇರುತ್ತಿರಲಿಲ್ಲ. ಜಾತ್ರೆಯ ದಿನ ಅಲ್ಲೇ ಯಾರ ಮನೆಯ ಜಗುಲಿಯ ಮೇಲೋ ಮಲಗಿದ್ದು ಬೆಳಗೆದ್ದ ಕೂಡಲೆ ಹೇಮಾವತಿ ನದಿಯಲ್ಲಿ ಸ್ನಾನ ಮಾಡಿ ಊರಿಗೆ ಮರಳುತ್ತಿದ್ದೆವು. ಬೆಳಗ್ಗೆ ಹೊಟ್ಟೆ ತಾಳ ಹಾಕುತ್ತಿತ್ತು. ಪುಣ್ಯಕ್ಕೆ ನನ್ನ ಗೆಳೆಯ ಮೂರ್ತಿ ತನ್ನ ಮನೆಯಿಂದ ಕಾಯಿಹುರಿಟ್ಟು ತಂದಿದ್ದ. ಅಕ್ಕಿಹಿಟ್ಟು, ತೆಂಗಿನಕಾಯಿ ಮತ್ತು ಬೆಲ್ಲ ಹಾಕಿ ತಯಾರಿಸಿದ ಆ ಹುರಿಟ್ಟು ಅರಳು ಹುರಿಟ್ಟು, ರಾಗಿ ಹುರಿಟ್ಟಿಗಿಂತ ಹೆಚ್ಚು ರುಚಿ.

ಅದನ್ನು ತಿಂದು ನಮ್ಮಲ್ಲಿ ಯಾರೋ ಕೊಂಚ ಬೆಲ್ಲ ಹೆಚ್ಚಾಯಿತು ಎಂದರೆ ರುಚಿಯಾಗಿರುತ್ತದೆ. ಆಗ ಗುಂಡ ಅವರಿಗೆ ಹೇಳಿದ. 'ಸುಮ್ಮನಿರಿ' ನಿಮ್ಮ ಬಾಯಿ ಬೆಲ್ಲಕ್ಕೆ ಬೇಸರಗೊಂಡರೆ ಉಪ್ಪು ತಿನ್ನಿಸುತ್ತೇನೆ.' ಹೀಗೆ ಹೇಳಿ ಅವನು ಕೊಂಚ ದೂರ ಹೋಗಿ ಅಲ್ಲೇ ಹೊಲದ ಬದುವಿನ ಮೇಲಿದ್ದ ಸಣ್ಣ ಹುಚ್ಚೆಳ್ಳು ಹೂವಿನಂಥ ಒಂದು ಒಣಗಿದ ಹೂವನ್ನು ಕಿತ್ತು ತಂದು, ನಮಗೆಲ್ಲ ಕೊಟ್ಟು ಹೇಳಿದ 'ತಿನ್ರೋ ಇದನ್ನ'.

'ಅದೇನು ?'

'ಅದು 'ಹೊಮ್ಮಗಳು' ಅದನ್ನು ತಿಂದು ನೋಡಿ ಆಮೇಲೆ ಮಾತನಾಡಿ ?'

ಅದನ್ನು ತಿಂದರೆ ಬಾಯಲ್ಲಿ ಉಪ್ಪುಪ್ಪು! ನಾಲಿಗೆಯೇ ಕರಗಿ ಹೋದಂತೆ ನೀರು ಎಷ್ಟು ತಡೆದರೂ ಏನು ಮಾಡಿದರೂ ನೀರು ತಪ್ಪದು. 'ಅಯ್ಯಯ್ಯೋ ಹೋಯಿತು, ಬಾಯೆಲ್ಲ ಉಪ್ಪಾಯಿತು!' ಕೆಲವರು ಕೂಗಿಕೊಳ್ಳತೊಡಗಿದರು. ಆಗ ಅವನು ಬೇವಿನ ಹಳ್ಳಿಗೆ ಹೋಗಿ ಯಾರನ್ನೋ ಕಾಡಿಬೇಡಿ ಒಂದು ಹಲಸಿನ ಹಣ್ಣನ್ನು ತಂದ. ಆ ಹಲಸಿನ ಹಣ್ಣಿಗೆ ನಾವೇನೂ ದುಡ್ಡು ಕೊಡಬೇಕಾಗಿರಲಿಲ್ಲ. ಇಂದಿನಂತೆ ಆಗ ರೈತರ-

ಹಣ್ಣು, ಹೂ, ತರಕಾರಿಗಳನ್ನು ಮಾರುತ್ತಿರಲಿಲ್ಲ. ಅಲ್ಲೇ ಯಾರಿಂದಲೋ ಕುಡಗೋಲು ತೆಗೆದುಕೊಂಡು ಹಲಸಿನ ಹಣ್ಣನ್ನು ಕೊಯ್ದು ತೊಳೆಗಳನ್ನು ತಿಂದದ್ದಾಯಿತು.

'ಹೊಮ್ಮಗಳು' ಎಂದ ಕೂಡಲೆ ನನಗೆ ಅಂಥದೇ ಒಂದು ಸಸ್ಯದ ನೆನಪಾಗುತ್ತದೆ. ನಾನು ದೊಡ್ಡವನಾದ ಮೇಲೆ ಕಾಶೀ ವಿಶ್ವವಿದ್ಯಾನಿಲಯಕ್ಕೆ ಹೋದಾಗ ಅಲ್ಲಿಯ ನನ್ನಂಥ ಹಳ್ಳಿಯ ಗೆಳೆಯರೊಬ್ಬರು ತಮ್ಮ ಹಳ್ಳಿಗೆ ಕರೆದೊಯ್ದಿದ್ದರು. ಅಲ್ಲಿ ನಾನು ಹೊಮ್ಮಗಳನ್ನು ಉಲ್ಲೇಖಿಸಿದಾಗ ಅವರು ಅಂಥದೇ ಒಂದು ಸಸ್ಯವನ್ನು ನನಗೆ ತಿನ್ನಲು ಕೊಟ್ಟರು. ಅದರ ಹೆಸರು 'ಗುಡಮಾರ್' ಎಂದು. ಅದು ನಮ್ಮ ನಾಲಿಗೆಯ ಸಿಹಿ ಗ್ರಹಣ ಶಕ್ತಿಯನ್ನು ಕೊಂದುಬಿಡುತ್ತದಂತೆ. ಅದನ್ನು ತಿಂದ ಮೇಲೆ ಎಷ್ಟು ಬೆಲ್ಲ, ಸಕ್ಕರೆ ತಿಂದರೂ ಎಲ್ಲ ಸಪ್ಪೆ! ಸಕ್ಕರೆರೋಗ ನಿವಾರಕ ಶಕ್ತಿ ಅದರಲ್ಲಿದೆಯೋ ಏನೋ ಕಾಣೆ? ಅಂತೂ ಅದನ್ನು ತಿನ್ನುವುದೊಂದು ಮೋಜು.

ಬನಾರಸ್‌ನಲ್ಲೇ ನಾನು ಮೊದಲಬಾರಿಗೆ ದೊಡ್ಡವರು ಗಾಳಿಪಟ ಹಾರಿಸುವುದನ್ನು ನೋಡಿದ್ದು. ನಮ್ಮ ಊರಿನಲ್ಲಿ ಗಾಳಿಪಟ ಕಟ್ಟುವುದರಲ್ಲಿ ನಮ್ಮ ಗೆಳೆಯ ಮೂರ್ತಿ ಎತ್ತಿದ ಕೈ. ಲಿಂಡೇರಾ, ಎಂಟುಮೂಲೆ ಜಂಟಿ ಮೊದಲಾದ ವಿಧವಿಧ ಪಟಗಳಲ್ಲದೆ ಹಾವಿನಂಥ, ಚೇಳಿನಂಥ ಪಟ ಕಟ್ಟುವುದರಲ್ಲಿ ಅವನು ಪಟು. ಅವನು ಪಟದ ದಾರಕ್ಕೆ ಕಾಗೆಯ ಮೊಟ್ಟೆಯ ಲೋಳೆಯನ್ನು ಸವರುತ್ತಿದ್ದನಂತೆ. ಆ ದಾರ ತಗುಲಿದರೆ ಸಾಕು ಎಂಥೆಂಥ ಟ್ವೈನ್ ದಾರವೂ ಕತ್ತರಿಸಿ ಹೋಗುತ್ತಿತ್ತು. ಎದುರಾಳಿಯ ಗಾಳಿಪಟಗಳನ್ನು ನೆಲಕ್ಕುರುಳಿಸಿ ತಾನೇ ಸವ್ಯಸಾಚಿ ಎಂದು ಮೆರೆಯುತ್ತಿದ್ದ ಅವನನ್ನು ನಾವೆಲ್ಲರೂ ಗುರುವೆಂದು ಸ್ವೀಕರಿಸಿ ಅವನನ್ನು ಹಿಂಬಾಲಿಸುತ್ತಿದ್ದೆವು.

ಗುಂಡನ ವೈಶಿಷ್ಟ್ಯವೆಂದರೆ ಹೊಸ ಹೊಸ ವಸ್ತುಗಳ ಅನ್ವೇಷಣೆ ಎಂಬುದನ್ನು ಮೇಲೆ ನೋಡಿದೆವು. ಒಮ್ಮೆ ಶಿವರಾತ್ರಿಯ ದಿನ ಅವನು ನಮ್ಮನ್ನೆಲ್ಲ ಈಶ್ವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತಾನು ಒಂದು ಜಾದು ಮಾಡುವುದಾಗಿ ಹೇಳಿ ಲಕ್ಕಿಯ ಸೊಪ್ಪಿನಂಥ ಒಂದು ಸೊಪ್ಪನ್ನು ತೋರಿಸಿದ. ಅದರ ಎಲೆಯನ್ನು ಹಣತೆಗಳಿಗೆ ಹಾಕಿ ಎಣ್ಣೆ ತುಂಬಿ ಹಚ್ಚಿದರೆ ಅವು ಆ ಹಸಿಯ ಎಲೆಗಳು ಬತ್ತಿಯಂತೆ ಉರಿಯತೊಡಗಿದವು. ಅದನ್ನು ಕಂಡು ನಾವೆಲ್ಲ ಚಕಿತರಾದೆವು, ಅಮೇರಿಕಾವನ್ನು ಕಂಡ ಕೊಲಂಬಸ್‌ನಂತೆ. ಆ ಸೊಪ್ಪಿನ ಹೆಸರು 'ಪಾಂಡವರ ಬತ್ತಿ' ಎಂದು ಹೇಳಿದ. ಪಾಂಡವರು ವನವಾಸದಲ್ಲಿ ಬತ್ತಿ ಎಲ್ಲಿ ತಂದಾರು? ಆದ್ದರಿಂದ ಈ ಎಲೆಗಳನ್ನೇ ಬತ್ತಿಯಂತೆ ಉರಿಸುತ್ತಿದ್ದರಂತೆ. ಆ ಗಿಡವನ್ನು ಇಂದಿಗೂ ನಾನು ನೆನಪಿಟ್ಟುಕೊಂಡಿದ್ದೇನೆ. ಅದನ್ನು ನಮ್ಮ ಬಾಟನೀ ಪ್ರೊಫೆಸರ್‌ಗೆ ತೋರಿಸಿದಾಗ ಅವರು ಆ ಎಲೆಯ ಹಿಂದೆ ಬೆಳ್ಳಗಿರುವುದನ್ನು ತೋರಿಸಿ ಅದಕ್ಕೆ ಕಾರಣ ಅದರಲ್ಲಿ ಹತ್ತಿ ಇರುತ್ತದೆಂದು ಹೇಳಿದರು. ಅದೇನಾದರೂ ಆಗಲಿ ಶಾಲೆಗೆ ಆಗತಾನೆ ನಾನು ಸೇರಿದ್ದೆ. ಆ ವಯಸ್ಸಿನಲ್ಲಿ ಹೊಮ್ಮಗಳು! ಪಾಂಡವರ ಬತ್ತಿ ಮೊದಲಾದ ಸಸ್ಯಗಳ ಪರಿಚಯ ಇನ್ನೂ ನನ್ನಲ್ಲಿ ಕುತೂಹಲ ಮಿಶ್ರಿತ ಆನಂದವನ್ನುಂಟು ಮಾಡಿತು. ನಮ್ಮ ಊರಿನಲ್ಲಿ ಯಾರದೇ ಮನೆಯಲ್ಲಿ

ಮದುವೆ, ಮುಂಜಿಗಳಾದರೆ ಊರ ಜನರೆಲ್ಲ ದುಡಿದು ಸಹಕಾರ ನೀಡುತ್ತಿದ್ದರು. ಈಗಿನಂತೆ ಅಡಿಗೆಯವರನ್ನು ಕರೆಸುತ್ತಿರಲಿಲ್ಲ. ಊರ ಜನರೆಲ್ಲ ಸೇರಿಕೊಂಡು ಕೆಲಸ ಹಂಚಿಕೊಳ್ಳುತ್ತಿದ್ದರು. ಕೆಲವರು ಹೊಳೆಯಿಂದ ನೀರು ತಂದರೆ ಕೆಲವರು ಚಪ್ಪರ ಹಾಕುವರು ಮತ್ತೆ ಕೆಲವರು ಅಡಿಗೆಗೆ ನೆರವಾಗುವರು. ನಮ್ಮಂಥ ಸಣ್ಣ ಹುಡುಗರು ಊಟದಲ್ಲಿ ನೀರು ಬಡಿಸುತ್ತಿದ್ದರು. 'ಪಾತಾಳ ಪಚ್ಚ ಪರಿಮಳ ಗಂಗೋದಕ' ಎಂದು ಕೂಗಿ ಬಡಿಸುವುದರಲ್ಲಿ ಎಲ್ಲಿಲ್ಲದ ಸಂಭ್ರಮ. ಊಟಕ್ಕೆ ಕುಳಿತಾಗ ಶ್ಲೋಕ ಹೇಳುವ ಸ್ಪರ್ಧೆ. ಪ್ರತಿಯೊಬ್ಬರೂ ಒಂದು ಶ್ಲೋಕ ಹೇಳಬೇಕು. ಅದು ಮುಗಿದಾಗ 'ಸೀತಾಕಾಂತ ಸ್ಮರಣೆ' ಎಂದು ಹೇಳಿದರೆ ಉಳಿದವರು 'ಜಯಜಯ ರಾಮ' ಎನ್ನಬೇಕು. 'ಹರ ನಮಃ ಪಾರ್ವತೀ ಪತಯೇ' ಎಂದರೆ 'ಹರ ಹರ ಮಹಾದೇವ' ಎನ್ನಬೇಕು. ಎಷ್ಟೋ ಸಾರಿ ಊಟ ಮುಗಿದರೂ ಶ್ಲೋಕ ಮುಗಿಯುತ್ತಿರಲಿಲ್ಲ.

ಭಿಕ್ಷಾಟನೆ ಒಂದು ಹೀನವೃತ್ತಿ ಆದರೆ ಅದಕ್ಕೂ ಒಂದು ಗೌರವ ತಂದು ಕೊಡುವ ಪದ್ಧತಿ ಪಡಿಬೇಡುವುದು. ಶ್ರಾವಣ ಶನಿವಾರದ ದಿನ ಹುಡುಗರು ಮಿಂದು ರೇಷ್ಮೆ ಮಗುಟವುಟ್ಟು ಅವರು ಯಾವುದೇ ಸಂಪ್ರದಾಯದವರಾಗಲೀ ಹಣೆಗೆ ತಿಲಕವಿಟ್ಟು ಬೆಳ್ಳಿಬಟ್ಟಲನ್ನು ಹಿಡಿದು ಕೊರಳಿಗೆ ಚಿನ್ನದ ಸರ ಬೀದಿಯಲ್ಲಿ ಮನೆ ಮನೆಗೂ ಹೋಗಿ 'ವೆಂಕಟೇಶಾಯ ಮಂಗಳಂ' 'ನರಸಿಂಹಾಯ ಮಂಗಳಂ' ಎಂದು ಬೇಡಬೇಕು. ಅವರಿಗೆ ಭಿಕ್ಷೆ ನೀಡಲು ಮಹಿಳೆಯರು ತವಕಿಸುತ್ತಿದ್ದರು. ಹಾಗೆ ಯಾರಾದರೂ ಬರದಿದ್ದರೆ ಆಕ್ಷೇಪಣೆ. ಅದೇನು ವಿಚಿತ್ರವೋ ಕಾಣೆ. ವಿಷ್ಣುವಿನ ಒಕ್ಕಲಿನವರು ಮಾತ್ರ ಭಿಕ್ಷೆ ಬೇಡಬೇಕಂತೆ. ಶಿವನ ಒಕ್ಕಲಿನವರು ಬೇಡಬಾರದಂತೆ. 'ನಂಜುಂಡೇಶ್ವರನ ಒಕ್ಕಲಿನವರಾದ ನಾವು ಈ ಭಾಗ್ಯ ನಮಗೆ ದೊರೆಯಲಿಲ್ಲವಲ್ಲ ಎಂದು ಕರುಬಿದ್ದೂ ಉಂಟು.

ನಮ್ಮ ಊರಿನ ಹೊಳೆಯಿಂದ ದೇವಸ್ಥಾನಕ್ಕೆ ಮಡಿಯಲ್ಲಿ ಅಭಿಷೇಕಕ್ಕೆ ನೀರು ತೆಗೆದುಕೊಂಡು ಹೋಗುವುದು ಅತ್ಯಂತ ಪುಣ್ಯದಾಯಕ ಕಾಯಕ ಎಂದು ಭಾವಿಸಲಾಗಿತ್ತು. ಅದಲ್ಲದೆ ನಮ್ಮ ಊರ ಜೋಯಿಸರ ಮನೆಗೂ ಒಂದು ಬಿಂದಿಗೆ ಮಡಿ ನೀರನ್ನು ತೆಗೆದುಕೊಂಡು ಹೋಗಿ ಕೊಡಬೇಕಿತ್ತು. ಏಕೆಂದರೆ ಜೋಯಿಸರು ವೃದ್ಧರು ಅವರ ಹೆಂಡತಿಗೆ ಕಾಯಿಲೆ. ಇಂಥ ಶುಭ ದಿನಕ್ಕೆ 'ಉದಕುಂಭ' ದಾನವೆನ್ನುತ್ತಾರೆ. ನನ್ನ ತಾಯಿಯ ಪ್ರೇರಣೆಯಿಂದ ನಾನು ಇಂಥ ಪುಣ್ಯ ಕಾರ್ಯದಲ್ಲಿ ಭಾಗಿಯಾಗಿದ್ದೇವೆ. ಅದು ನಮಗೆ ಶ್ರಮ ಎನ್ನಿಸುತ್ತಲೇ ಇರಲಿಲ್ಲ.

ಹೀಗೆಯೇ ಒಮ್ಮೆ ನಂಜನಗೂಡಿಗೆ ಹೋಗಿ ಹರಕೆ ತೀರಿಸಲು ನಾನು ಮತ್ತು ನಮ್ಮ ಅಣ್ಣ ಸ್ನಾನ ಮಾಡಿ ಒದ್ದೆ ಬಟ್ಟೆ ಉಟ್ಟು ದೇವಸ್ಥಾನದ ಸುತ್ತ ಮೂರು ಸುತ್ತು ಉರುಳು ಸೇವೆ ಮಾಡಿದ್ದುಂಟು. ಆ ವಯಸ್ಸಿನಲ್ಲಿ ನಮಗೆ ಇದು ಮೇಲು ಇದು ಕೀಳು ಎಂಬ ಭಾವನೆಯಿರಲಿಲ್ಲ. ಅದು ಶ್ರಮ ಎನಿಸುತ್ತಲೂ ಇರಲಿಲ್ಲ. ನನ್ನ ಬಾಲ್ಯದಲ್ಲಿ ಚೌಕಾಬಾರ, ಹುಲಿಘಟ್ಟ, ಕೊಕೋ ಮತ್ತು ಕಬಡ್ಡಿ ಆಟ ಆಡುತ್ತಿದ್ದೆವು. ಫುಟ್‌ಬಾಲ್, ಬ್ಯಾಡ್

ಮೆಂಟನ್, ಕ್ರಿಕೆಟ್ ಮೊದಲಾದವನ್ನು ನಾವು ಕಂಡವರೇ ಅಲ್ಲ.

ಈ ಆಟಗಳಲ್ಲೆಲ್ಲ ಎರಡು ನನಗೆ ಅತ್ಯಂತ ಪ್ರಿಯ. ಒಂದು ತೀರ ಚಿಕ್ಕಂದಿನಲ್ಲಿ ಮಕ್ಕಳೆಲ್ಲ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಆಡುತ್ತಿದ್ದ 'ಮಳ್ಳಮಂದು ಗಿಳ್ಳಿಪ್ಪೋ' ಎಂಬ ಆಟ. ಇದರಲ್ಲಿ ಮಕ್ಕಳೆಲ್ಲ ಸಾಲಿಗೆ ಕಣ್ಣು ಮುಚ್ಚಿ ಕುಳಿತುಕೊಂಡಿರಬೇಕು. ಯಾವುದೋ ಮಗು ಅದಕ್ಕೆ ಒಂದು ಹೆಸರು ಕೊಟ್ಟಿರುತ್ತದೆ. ಉದಾಹರಣೆಗೆ 'ಮಲ್ಲಿಗೆ ಮೊಗ್ಗು, ಮಲ್ಲಿಗೆ ಮೊಗ್ಗ ಮಳ್ಳಮಂದು ಗಿಳ್ಳಿಪ್ಪೋ' ಎಂದಾಗ ಒಂದು ಮಗು ಬಂದು ಎಲ್ಲರ ಮುಖಗನ್ನು ಗಿಳ್ಳಿ ಹೋಗಬೇಕು. ಆ ಗಿಳ್ಳಿ ಹೋದ ವ್ಯಕ್ತಿಯ ಹೆಸರನ್ನು ಗಿಳ್ಳಿಸಿ ಕೊಂಡವರು ಹೇಳಬೇಕು. ಹೆಸರು ಸರಿಯಾದರೆ ಅವರು ಗೆದ್ದಂತೆ. 'ಗಂಧದ ಕೊರಡು' ಎಂಬ ಹೆಸರು ನನಗೆ ಲಭ್ಯವಾಗಿತ್ತು. ಆ ಗಿಳ್ಳಿಸಿಕೊಳ್ಳುವುದರಲ್ಲೂ ಏನೋ ಒಂದು ಆನಂದ.

ಇನ್ನೊಂದು 'ಅಟುಗೂಳಿ' ಆಟ. ಅಂದು ಮಕ್ಕಳೇ ಸೇರಿಕೊಂಡು ಯಾರ ಮನೆಯ ಜಗುಲಿಯ ಮೇಲೋ ಅಡಿಗೆ ಮಾಡಿ ಊಟ ಬಡಿಸಿ, ಉಂಡು ತಿಂದು ನಲಿಯಬೇಕು. ಅದರಲ್ಲಿ ಒಬ್ಬಳು. ಅಮ್ಮ, ಇನ್ನೊಬ್ಬ ಅಪ್ಪ ಉಳಿದವರು ಅಣ್ಣತಮ್ಮಂದಿರು, ಅಣ್ಣ ತಂಗಿಯರು. ಅವರೆಲ್ಲ ಇದರಲ್ಲಿ ಸಹಕರಿಸಬೇಕು. ಉಳಿದವರು ಅತಿಥಿಗಳು. ಅವರನ್ನೂ ಸ್ವಾಗತಿಸಿ ಸತ್ಕರಿಸಬೇಕು. ಪಾಯಸ, ಪಲ್ಯ, ಕೋಸುಂಬರಿ, ಚಿತ್ರಾನ್ನವೆಲ್ಲವನ್ನು ಈ ನುರಿತ ಮಕ್ಕಳು ಮಾಡುತ್ತಿದ್ದರು. ಈ ಆಟದಲ್ಲಿ ದೊಡ್ಡವನಾದ ನಮ್ಮ ಗೋಪಾಲ ಅಪ್ಪನಾಗುತ್ತಿದ್ದ, ಸೀತೆ ಅಮ್ಮನಾಗುತ್ತಿದ್ದಳು. ನಾನು ತಮ್ಮನಾದುದೇ ಹೆಚ್ಚು. ಆದರೆ ಕೊನೆಯ ಸಲ ಎಂದರೆ ನಾನು ಮೈಸೂರಿಗೆ ಬರುವ ಮುನ್ನ ಅಪ್ಪನಾಗಿದ್ದೆ. ಲಲಿತೆ ಎಂಬ ಹುಡುಗಿ ಅಮ್ಮನಾಗಿದ್ದಳು. ಈ ಆಟ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ನಮ್ಮ ಊರಿನ ಸ್ಮರಣೀಯ ಘಟನೆಗಳಲ್ಲಿ ನಮ್ಮ ಬೆಳದಿಂಗಳೂಟವೂ ಒಂದು. ಬೆಳದಿಂಗಳಲ್ಲಿ ಹೇಮಾವತೀ ನದಿಯ ತೀರದಲ್ಲಿ ಊರವರೆಲ್ಲ ಕಲೆಯುತ್ತಿದ್ದೆವು. ಊರ ಮನೆಯವರೆಲ್ಲ ಮಾತಾಡಿಕೊಂಡು ಒಬ್ಬೊಬ್ಬರು ಒಂದೊಂದು ಬಗೆಯ ಪಕ್ವಾನ್ನ, ಭಕ್ಷ್ಯಗಳನ್ನು ಮಾಡಿ ತರುತ್ತಿದ್ದರು. ಎಲ್ಲರಿಗೂ ಹಂಚಬೇಕು. ಬಿಸೀಬೇಳೆ ಬಾತ್ ಒಂದು ಮನೆಯದಾದರೆ ಕಾಯನ್ನ (ಕೇಸರಿಭಾತ್) ಇನ್ನೊಂದು ಮನೆಯದು. ಹೀಗೆ ಒಟ್ಟಿಗೆ ನಮಗೆಲ್ಲ 'ಪಂಚಭಕ್ಷ್ಯ' ಪರಮಾನ್ನ. ನಾವೆಲ್ಲ ಊಟ ಮಾಡುತ್ತಿದ್ದಾಗ ನಮ್ಮೂರ ಗಾಯಕ ನಾಣಿಯ ಹಿನ್ನೆಲೆ ಗಾಯನ. ನಮ್ಮ ಊಟ ಮುಗಿದರೂ ಅವನ ಗಾಯನ ಮುಗಿಯುತ್ತಿರಲಿಲ್ಲ. ಹೀಗೆ ಕಾಸೂ ಖರ್ಚಿಲ್ಲದೆ, ವನಭೋಜನ, ಚಂದ್ರಿಕಾ ವಿಹಾರ ನಡೆಯುತ್ತಿತ್ತು.

ಪ್ರಾಥಮಿಕ ಶಾಲೆಯನ್ನು ಮುಗಿಸಿ ಮಾಧ್ಯಮಿಕ ಶಾಲೆಗಾಗಿ ನಾನು ಮೈಸೂರಿಗೆ ಬಂದೆ. ಆಗ ನಮ್ಮ ತರಗತಿಯಲ್ಲಿ ನಾಗರಾಜು ಎಂಬ ವಿದ್ಯಾರ್ಥಿಯಿದ್ದ. ಅವನು ಚಾಮುಂಡಿಬೆಟ್ಟದವನು. ನಿತ್ಯವೂ ಅವನು ಬೆಟ್ಟ ಇಳಿದು ಕ್ಲಾಸು ಮುಗಿಸಿಕೊಂಡು ಬೆಟ್ಟ ಹತ್ತಿ ಹೋಗುತ್ತಿದ್ದ. ಆಗ ಈಗಿನ ಹಾಗೆ ಬಸ್ ಇರಲಿಲ್ಲ. ಅವನ

ಸಾಹಸವನ್ನೂ ಕಂಡು ನಮಗೆಲ್ಲ ಅಚ್ಚರಿ. ಆದರೆ ಅವನಿಗೆ ಅದೊಂದು ಲೀಲೆ! ಅವನಿಗೂ ನನಗೂ ಗಂಟು ಬಿತ್ತು. ಅವನ ಅತಿಥಿಯಾಗಿ ಎಷ್ಟೋ ಸಲ ಬೆಟ್ಟ ಹತ್ತಿ ಇಳಿದಿದ್ದೇನೆ. 'ಇದೇನು ಮಹಾ' ಮೆಟ್ಟಿಲು ಹತ್ತಿ ಮೆಟ್ಟಿಲು ಇಳಿಯುವುದರಲ್ಲೇನಿದೆ ಅತಿಶಯ ಹಾಗೆಯೇ ಬೆಟ್ಟ ಹತ್ತೋಣ ಬಾ' ಎಂದು ಹೇಳಿ ಅವನು ಮೆಟ್ಟಿಲು ಬಿಟ್ಟು ಬೇರೆ ಕಡೆಯಿಂದ ಬೆಟ್ಟ ಹತ್ತಿಸಿಕೊಂಡು ಹೋದ. ಅಂದು ನಾನು ತುಂಬ ಬಳಲಿದೆ. ಮೈಯೆಲ್ಲ ತರಚಿತು, ಬಟ್ಟೆಯೂ ಹರಿಯಿತು. ಆದರೆ ಬೆಟ್ಟವೇರಿದ ಆನಂದ ಯಾರಿಗುಂಟು? ಯಾರಿಗಿಲ್ಲ?

ನಮ್ಮ ಊರಿನಲ್ಲಿ ನಾನು ಕಂಡು ಉಂಡ ಸ್ಮರಣೀಯ ಆನಂದಗಳಲ್ಲಿ ಮಳೆಯಲ್ಲಿ ನೆನೆಯುವುದೂ ಒಂದು. ಒಂದು ದೊಡ್ಡ ಮಳೆಯಲ್ಲಿ ನಮ್ಮ ಊರಾದ ಮಂದಗೆರೆಯಿಂದ ಮೂರು ಮೈಲಿ ದೂರವಿರುವ ಬೇವಿನಹಳ್ಳಿಗೆ ಮಳೆಯಲ್ಲೇ ಹೋಗಬೇಕು. ಮಧ್ಯೆ ಯಾವ ಮರದಡಿಯಲ್ಲೂ ನಿಲ್ಲಬಾರದು. ಹಾಗೆ ನಿಂತರೆ ಸೋತಂತೆ! ಇಂಥ ಸಾಹಸಕ್ರೀಡೆ ಯಾವ ದೇಶದಲ್ಲಿದೆಯೋ ಕಾಣೆ! ಇದ್ದರೆ ನಮಗೇ ವಿಶ್ವಪ್ರಶಸ್ತಿ ದೊರಕುತ್ತಿತ್ತೋ ಏನೋ? ಹೀಗೆ ನಾವು ಮಳೆಯಲ್ಲಿ ನೆನೆದು ತೊಪ್ಪೆಯಾಗಿ ಹೋಗುತ್ತಿದ್ದೆವು. ನಡುವೆ ಬಾಯಾರಿಕೆಯಾದರೆ ಚಾತಕ ಪಕ್ಷಿಯಂತೆ ಮಳೆಯ ನೀರಿನದೇ ಪಾನ! ಅಂತೂ ನಾವು ಗುರಿಮುಟ್ಟುತ್ತಿದ್ದೆವು! ಅಚ್ಚರಿಯೆಂದರೆ ಇಷ್ಟೆಲ್ಲ ಒದ್ದೆಯಾದರೂ ನಮ್ಮಲ್ಲಿ ಯಾರಿಗೂ ನೆಗಡಿ ಶೀತವಾಗುತ್ತಿರಲಿಲ್ಲ, ಜ್ವರ ಬರುತ್ತಿರಲಿಲ್ಲ. ಆ ವಯಸ್ಸೇ ಹಾಗೆಂದು ಕಾಣುತ್ತದೆ. ಎಲ್ಲವನ್ನೂ ಸ್ವಾಗತಿಸುವ ಮುಗ್ಧ ಮನಸ್ಸು. ಸಮುದ್ರವನ್ನೇ ಕುಡಿಯುವಂತಹ ಹುಮ್ಮಸ್ಸು! ಮತ್ತೆ ಈ ಸ್ಪರ್ಧೆ, ಕ್ರೀಡೆಗಳಿಗೆ ಯಾವ ಪುರಸ್ಕಾರದ ಆಮಿಷವೂ ಇಲ್ಲ. ಉತ್ಸಾಹಕ್ಕೆ ಉತ್ಸಾಹವೇ ಪುರಸ್ಕಾರ! ಇಂಥ ಉತ್ಸಾಹವಿದ್ದವರ ಜೀವನೋಲ್ಲಾಸ ನಿಜಕ್ಕೂ ಒಂದು ದೊಡ್ಡ ಆನಂದದ ಊಟೆ.



ನಮ್ಮ ಹೊರಗೆ ಇರುವಷ್ಟು ಜಗತ್ತು ನಮ್ಮ ಒಳಗಡೆಯೂ ಇದೆ. ಅದನ್ನು ನೋಡಲು, ಅರಿಯಲು, ನಮ್ಮ ಆತ್ಮದ ಕಣ್ಣು ತೆರೆಯಬೇಕು.

—ವಿನೋಬಾ

ಎವರೆಸ್ಟ್ ಪಥದಲ್ಲಿ

ಗೋಪಾಲ ಆಶ್ರಿತ

ಪರ್ವತಾರೋಹಿಗಳಲ್ಲಿ ಎಲ್ಲೋ ಕೆಲವರು ಮಾತ್ರ ಈ ಪರ್ವತದ ಹಿಮ ಹಾಗೂ ತಣ್ಣನೆಯ ಗಾಳಿಯ ಹೊಡೆತ ತಾಳಿಕೊಂಡು ಶಿಖರ ತಲುಪುತ್ತಾರೆ. ಯಾವ ಅಮೆರಿಕನ್ ಮಹಿಳೆಯೂ ಇಂಥ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ ಇಂಥ ಅಸಾಧ್ಯವನ್ನು ಸಾಧಿಸಿದ ಸ್ಟ್ಯಾನಿ ಅಲಿಸನ್ ಪ್ರಥಮ ಅಮೆರಿಕನ್ ಮಹಿಳೆಯಾಗಿದ್ದಾಳೆ.

ನಾವು ಶಿಖರಕ್ಕೆ ಬಹಳ ಸಮೀಪದಲ್ಲಿದ್ದೆವು. ವಿಶ್ವದ ಅತ್ಯುನ್ನತ ಶಿಖರ ಬಿಂದು ಕೇವಲ ೯೦೦ ಮೀಟರ್‌ಗಳಷ್ಟು ದೂರದಲ್ಲಿತ್ತು. ಆದರೆ ೧೯೮೭ರ ಆ ರಾತ್ರಿಯಂದು ಅತಿ ಚಳಿ ಇದ್ದುದರಿಂದ ನಾವು ಏರಲಿಲ್ಲ. ಹಿಮದ ಗುಹೆಯೊಂದರಲ್ಲಿ ಸಿಕ್ಕಿಬಿದ್ದ ನಾವು ನಾಲ್ವರಿಗೆ ಹಿಮದ ಮಳೆ ಬಹಳ ರಭಸ (೧೬೦ ಕಿ. ಮೀ. ವೇಗ) ದಿಂದ ಬೀಸುತ್ತಿದ್ದುದು ಕೇಳಿಸುತ್ತಿತ್ತು. ಶಿಖರ ತಲುಪಲು ಇನ್ನೂ ಎರಡು ದಿನಗಳು ಬೇಕಾಗಿತ್ತು. ಆದರೆ ಈ ಹಿಮಪಾತ ಹಾಗೂ ಚಳಿಯಿಂದಾಗಿ ನಮ್ಮ ಸಮಯ ವ್ಯರ್ಥವಾಗುತ್ತಿತ್ತು. ೭೮೦೦ ಮೀಟರ್ ಎತ್ತರದಲ್ಲಿ ಭೂಮಿಯ ವಾತಾವರಣ ಬಹಳ ಕಡಿಮೆ ಇರುತ್ತದೆ. ಅಲ್ಲಿ ಯಾವುದೇ ತೆರನಾದ ಜನಜೀವನಕ್ಕೆ ಬೆಂಬಲ ಸಿಗುವುದಿಲ್ಲ. ನೀವು ಎಷ್ಟೇ ಉಂಡರೂ ಆಹಾರ ಜೀರ್ಣವಾಗಿ, ನೀವು ಜೀವಂತವಾಗಿರುವಷ್ಟು ಪೋಷಣೆ ನೀಡುವುದಿಲ್ಲ. ಇದರಿಂದಾಗಿ ಸ್ನಾಯುಗಳು ನಿರುಪಯುಕ್ತವಾಗ ತೊಡಗುತ್ತವೆ. ಅನೇಕ ಪರ್ವತಾರೋಹಿಗಳು ಒಂದು ವಾರದೊಳಗೆ ಕಣ್ಮರೆಯಾಗಿಬಿಡುತ್ತಾರೆ. ಆ ಎತ್ತರದಲ್ಲಿ ಅಂದು ನಮ್ಮದು ಕೂಡಾ ಏಳನೆಯ ರಾತ್ರಿ. ಈ ಹಿಮದ ಘೋರ್ಗರೆತ ಬೆಳಗಾಗುವವರೆಗೆ ನಿಲ್ಲದಿದ್ದರೆ, ನಾವು ಮರಳಿ ಕೆಳಗಿಳಿಯ ಬೇಕಾಗುವಂತಿತ್ತು.

ಬೆಳಗಾಗುತ್ತಿದ್ದಂತೆ ನಾವು ಉಡುಪು ಧರಿಸಿ ಶಿಖರದೆಡೆಗೆ ಹೊರಡಲು, ಹಿಮದ ಕಣಿವೆಯ ಹೊರಗೆ ತೆವಳುತ್ತ ಹೊರ ಬಂದೆವು. ನನ್ನ ಹಳೆಯ ಗೆಳೆಯ ಹಾಗೂ ನಮ್ಮ ತಂಡದ ನಾಯಕನಾಗಿದ್ದ ಸ್ಕಾಟ್ ಫಿಶರ್ "ಆಯ್ತು....ಇದೇ ಕೊನೆ...." ಎಂದು ತಲೆಯಾಡಿಸುತ್ತ ಗುಡುಗುತ್ತಿದ್ದ ಗಾಳಿಯ ಮಧ್ಯ ಕೂಗಿದನು. ಎವರೆಸ್ಟಿನಿಂದ

೧೯೯೫ರ ಮೇ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಸ್ಟ್ಯಾನಿ ಅಲಿಸನ್ ವಿತ್ ಪೀಟರ್ ಕಾರ್ಲಿನ್‌ರವರ "ಆನ್ ದಿ ಪಾಥ್ ಟು ಎವರೆಸ್ಟ್" ಎಂಬ ಲೇಖನದ ಅನುವಾದ.

ಪದರಪದರಾಗಿ ಹಾರುತ್ತಿದ್ದ ಹಿಮದ ತುಣುಕುಗಳು, ಜ್ವಾಲಾಮುಖಿಯಿಂದ ಹೊರಬೀಳುತ್ತಿದ್ದ ಕಿಡಿಗಳಂತೆ ಕಂಡವು. "ಎರಡು ವರ್ಷದ ಶ್ರಮ, ಒಂದು ದಶಕದ ತರಬೇತಿ, ಜೀವನದ ಒಂದು ಮಹದಾಶೆ ಯೆಲ್ಲಾ ನುಚ್ಚುನೂರಾಯಿತು" ಎಂದು ನನಗನಿಸಿತು.

ನಮ್ಮ ಸಾಮಾನುಗಳನ್ನೆಲ್ಲ ಕಟ್ಟಿಕೊಂಡು ಒಂದು ಕ್ಷಣ ಅಲ್ಲಿಯೇ ನಿಂತೆವು. ಸ್ಕಾಟನ ಕಣ್ಣಿನಲ್ಲಿ ನೀರಾಡುತ್ತಿತ್ತು. ನನಗಾದ ನಿರಾಶೆಯನ್ನು ಹೇಳಲಸಾಧ್ಯ. ಎವರೆಸ್ಟ್ ಏರಿದ ಪ್ರಥಮ ಅಮೆರಿಕನ್ನಳಾಗಬೇಕೆಂಬ ನನ್ನ ಕನಸು ಭಗ್ನಗೊಂಡಿತ್ತು. ಆದರೂ ಮರಳಿ ಹೊರಡಲಿಕ್ಕೆ ನಾನು ಸಿದ್ಧಳಾದೆ. ದಿನ ಮುಗಿಯುವ ಮೊದಲು ಬಹಳಷ್ಟು ದಾರಿ ಕ್ರಮಿಸಬೇಕಾಗಿತ್ತು.

ಅಮೆರಿಕೆಗೆ ಮರಳಿದ ಕೆಲವೇ ದಿನಗಳಲ್ಲಿ, ಇನ್ನೊಂದು ಎವರೆಸ್ಟ್ ಸಾಹಸಿ ತಂಡಕ್ಕೆ ನಮ್ಮ ಅನುಭವಗಳನ್ನು ಬರೆದು ಕಳಿಸಿದ್ದಾಗಿ ಸ್ಕಾಟ್ ಹೇಳಿದನು. ಈ ಎರಡನೆಯ ಗುಂಪಿನವರು ನನ್ನನ್ನು ಆಯ್ಕೆ ಮಾಡಿದರು ; ಆದರೆ ಸ್ಕಾಟನನ್ನು ಆಯ್ಕೆ ಮಾಡಲಿಲ್ಲ. ಅಪರಿಚಿತರನ್ನು ನಂಬಿ ಅವರ ಜೊತೆ ಸೇರಿಕೊಳ್ಳುವ ಬಗ್ಗೆ ನನಗೆ ಇಷ್ಟವಿರಲಿಲ್ಲ. ಆದರೆ ಎವರೆಸ್ಟಿನ ಆಕರ್ಷಣೆ ಇನ್ನೂ ಬಲವಾಗಿತ್ತು. ಮುರಿದ ಸಂಸಾರ ಮತ್ತು ನಿಂತು ಹೋಗಿದ್ದ ಜೀವನ ವೃತ್ತಿ ನನ್ನ ಬದುಕಿನ ಸಾಕಷ್ಟು ಕಹಿಯನ್ನು ತಂದಿತ್ತು. ಭೂಮಿಯ ಈ ಶಿಖರದ ಮೇಲೆ ನನ್ನ ಹೆಜ್ಜೆ ಇಡುವುದರಿಂದಲಾದರೂ ನನ್ನ ಗಾಯಗಳು ಮಾಯಬಹುದೆಂದು ತಿಳಿದು, ಹತ್ತು ಜನ ಪರ್ವತಾರೋಹಿಗಳ ಆ ತಂಡವನ್ನು ಸೇರಲು ನಿರ್ಧರಿಸಿ ಎವರೆಸ್ಟ್ ಪಥದೆಡೆಗೆ ಹೊರಟೆ.

ಸಾವಿನ ದವಡೆ

೧೯೮೮ರ ಆಗಸ್ಟ್ ೧೮ರಂದು ಪರ್ವತದ ತಳಭಾಗದಲ್ಲಿ ಒಂದು ವಿಶಾಲ ನೀರ್ಗಲ್ಲಿನ ರಾಶಿಯ ಮೇಲೆ ಬಿಡಾರ ಹೂಡಿದೆವು. ನೀರ್ಗಲ್ಲಿನಲ್ಲಿ ಬಿರುಕು ಬೀಳುವುದು, ಕಿರ್ ಕಿರ್ ಶಬ್ದವಾಗುವುದು, ದೂರದಲ್ಲಿನ ಹಿಮಪ್ರಪಾತಗಳ ಅರ್ಭಟ ನಮಗೆ ರಾತ್ರಿ ಕೇಳಿಸುತ್ತಿತ್ತು. ಎವರೆಸ್ಟ್‌ನಿಂದ ಸೀಳಿ ಜಾರಿದ ಹಿಮದ ದೊಡ್ಡ ಬಂಡೆ ಕತ್ತಲಲ್ಲಿ ಅಪ್ಪಳಿಸಿದಾಗ ಅದು ಸ್ಫೋಟಕದಂತೆ ಸದ್ದು ಮಾಡುತ್ತಿತ್ತು.

ನಮ್ಮ ನೀರ್ಗಲ್ಲು ದಾಟಿದ ಮೇಲೆ ಖುಂಬು ಹಿಮಪಾತ ಕಾಣುತ್ತಿತ್ತು. ಸುಮಾರು ೬೦೦ ಮೀಟರಿನಷ್ಟು ಏರುತಗ್ಗುಗಳುಳ್ಳ ಹಿಮದ ರಾಶಿ, ನಮ್ಮ ಪಥದಲ್ಲಿನ ಅತ್ಯಂತ ಅಪಾಯಕಾರಿ ಭಾಗವಾಗಿತ್ತು. ಕೆಲವೇ ದಿನಗಳಲ್ಲಿ ನೀರ್ಗಲ್ಲಿನಲ್ಲಿ ಆಳವಾದ ಹಾಗೂ ಅಗಲವಾದ ಬಿರುಕುಗಳಾಗುತ್ತಿದ್ದವು ; ಮುಚ್ಚಿಕೊಳ್ಳುತ್ತಿದ್ದವು. ಮತ್ತೆ ಕೆಲವೊಮ್ಮೆ ಒಂದೊಂದು ಕಟ್ಟಡದಲ್ಲಿ ಎತ್ತರದ ಗೋಪುರಗಳಾಗಿ, ಯಾವ ಮುನ್ಸೂಚನೆ ಇಲ್ಲವೆ ಕಳಚಿ ಬೀಳುತ್ತಿದ್ದವು.

ವೈದ್ಯ ಸ್ಟೀವ್ ರಾಸನ್ ಜೊತೆಗೆ ಇದನ್ನು ನೋಡಲು ಹೋದೆ. ಅಲ್ಲೊಂದು ಕಾಡು ಎತ್ತಿನ ಹೆಣ ಬಿದ್ದಿದ್ದಂತೆ ಕಾಣಿಸಿತು. ಆದರೆ ಸ್ಟೀವ್ ನನಗಿಂತಲೂ ಚೆನ್ನಾಗಿ ಗುರುತಿಸಿದ್ದನು—ಕಾಡು ಎತ್ತುಗಳು

ಉಣ್ಣೆ ಬಟ್ಟೆ ಹಾಕಿಕೊಂಡಿರುವದಿಲ್ಲ. ಅದೊಂದು ಮಾನವ ಅಸ್ಥಿಪಂಜರವಾಗಿತ್ತು. "ಇದು ಶೇರ್ಪಾನ ಶವವೆಂದು ಪ್ರಮಾಣ ಮಾಡಿ ಹೇಳುವೆ" ಎಂದು ಸ್ಟೀವ್ ಹೇಳಿದ. ಟಿಬೆಟ್ಟಿನ ಆ ಮಾರ್ಗದರ್ಶಿಯು ದೇಹ ನೋಡುತ್ತಿದ್ದಂತೆ, ಪರ್ವತಾರೋಹಿಗಳ ಆ ಸ್ಥಳವನ್ನು 'ಸಾವಿನ ದವಡೆ' ಎಂದು ಏಕೆ ಕರೆಯುತ್ತಾರೆಂಬುದು ನೆನಪಿಗೆ ಬಂತು. ಆಗಸ್ಟ್ ೨೯ರಂದು ಈ ಹಿಮಪಾತದ ಮೂಲಕ ಹೋಗಲು ಆದಷ್ಟು ಸುರಕ್ಷಿತ ದಾರಿಯನ್ನು ಹುಡುಕಲು ಪ್ರಾರಂಭಿಸಿದೆವು. ನೀರ್ಗಲ್ಲಿನ ಬಿರುಕುಗಳನ್ನು ದಾಟಿ ಹೋಗಲಸಾಧ್ಯವಾದ ಆ ಹಿಮದ ಗೋಪುರಗಳನ್ನು ಸುತ್ತುದಾರಿ ಮಾಡಿಕೊಂಡು ಹೋಗುವುದಕ್ಕೆ ಸುಮಾರು ಎರಡು ವಾರಗಳು ಬೇಕಾಗಬಹುದು ಎನಿಸಿತು. ಅಲ್ಯುಮಿನಿಯಂ ಏಣಿ, ಹಗ್ಗ ಮತ್ತು ಲೋಹದ ಹಿಡಿಕಟ್ಟುಗಳ ಸಹಾಯದಿಂದ ನೀರ್ಗಲ್ಲು ಬಿರುಕುಗಳನ್ನು ದಾಟಿ ಮುಂದೆ ಸಾಗಹತ್ತಿದೆವು. ಹಿಮಪಾತಗಳ ಸಪ್ಪಳವಂತೂ ನಮಗೆ ರೂಢಿಯಾಗಿಬಿಟ್ಟಿತ್ತು. ಒಂದು ಬೆಳಿಗ್ಗೆ ಬಿರುಕಿನ ಶಬ್ದ ಕೇಳಿದಾಗ, ನಾವು ನಮ್ಮ ಕೊಡಲಿಯಿಂದ ಹಿಮದಲ್ಲಿ ಹೊಡೆದು ಹಗ್ಗ ಕಟ್ಟುತ್ತಲಿದ್ದೆವು. ಆದೇಕೋ ಅಂದು ಹಿಮಪಾತ ಬಹಳ ಕ್ಷೀಣವಾಗಿ ಗುರುಗುಟ್ಟುತ್ತ ಪ್ರಾರಂಭವಾದದ್ದು ಅನಂತರ ಗುಡುಗಾಗಿ ಗರ್ಜಿಸಿತು. ನಾನು ಮೇಲೆ ಕಣ್ಣು ಹಾಯಿಸುತ್ತಿದ್ದಂತೆ, ಒಂದು ಬಿಳಿಯ ಹಿಮದ ಗಡ್ಡೆ ಮುರಿದುಕೊಂಡು ಜಾರುತ್ತ ನಾವಿದ್ದ ಕಡೆ ಬೀಳುವಂತೆ ಕಾಣಿಸಿತು!

"ಇದು ನಮ್ಮ ಮೇಲೆ ಅಪ್ಪಳಿಸುತ್ತೇನು?" ಎಂದು ನಮ್ಮ ತಂಡದ ನಾಯಕ ಜಿಮ್ ಫ್ರೆಶನಿಗೆ ಕೇಳಿದೆ.

ಆತನೂ ಆ ಕಡೆ ಕಣ್ಣು ಹಾಯಿಸಿ "ಏನೂ ಹೇಳಲಾರೆ...." ಎಂದ.

ಹಿಮದ ಪುಡಿಯನ್ನು ಉಸಿರಾಡಿಸುವುದು ಕೂಡಾ ನಮ್ಮ ಪುಪ್ಪುಸಗಳಿಗೆ ಅಪಾಯಕಾರಿಯಾಗಿತ್ತು. "ನಿಮ್ಮ ಬಾಯಿ ಮುಚ್ಚಿಕೊಳ್ಳಿರಿ" ಎಂದು ಹೇಳಿ ನಾನು ನನ್ನ ಕೊರಳಿಗೆ ಸುತ್ತಿದ್ದ ಬಟ್ಟೆಯನ್ನು ಮುಖಕ್ಕೆ ಎಳೆದುಕೊಂಡೆ. ಗುಡುಗಿನ ಶಬ್ದ ಹೆಚ್ಚಾಗುತ್ತಲಿತ್ತು. ನನ್ನ ಕಾಲ್ಕೆಳಗಿದ್ದ ವಿಶಾಲ ಹಿಮದ ಬಂಡೆ ಕೂಡಾ ಅಲುಗಾಡುವಂತೆನಿಸಿತು. ಜಾರುವ ಹಿಮಕ್ಕೆ ದಾರಿ ಬಿಟ್ಟುಕೊಡುವುದೇ ಲೇಸೆನಿಸಿತು.

ಹತ್ತಿರದಲ್ಲಿದ್ದ ಎದೆಯೆತ್ತರದ ಹಿಮದ ಜೋಡಣೆಯ ಹಿಂದಿನ ಕಡೆಗೆ ನಾನು ಮತ್ತು ಜಿಮ್ ನುಗ್ಗಿ ಶೇರ್ಪಾಗಳ ಜೊತೆಗೆ ಮುದುಡಿಕೊಂಡು ಕುಳಿತೆವು. ನನ್ನ ಗದ್ದವನ್ನು ಎದೆಗವಚಿಕೊಂಡು ಮುದ್ದೆಯಾಗಿ– ಹಿಮದಲ್ಲಿ ಹೂತುಹೋಗಲು ಸಿದ್ಧಳಾಗಿ– ಕುಳಿತುಕೊಂಡೆ.

ಕೆಲವು ಕ್ಷಣಗಳವರೆಗೆ ಮೌನ ಆವರಿಸಿತ್ತು. ಸ್ವಲ್ಪ ಹೊತ್ತಿನವರೆಗೆ ತಲೆಬಾಗಿಸಿಕೊಂಡೇ ಕುಳಿತಿದ್ದೆ. ಅನಂತರ ತಲೆ ಎತ್ತಿದೆ. ಹಿಮದ ಕಣಗಳು ಚದುರುತ್ತಿದ್ದಂತೆ, ಹೊಳೆಯುತ್ತಿದ್ದುದು ಕಾಣಿಸಿತು. ಸುಮಾರು ೩೦ ಮೀಟರ್ ದೂರದಲ್ಲಿ, ಅಡ್ಡವಾಗಿದ್ದ ಗೋಡೆಯೊಂದು ಹಿಮವನ್ನು ತಡೆದಿತ್ತು.

ಖಾಲಿಯಾದ ಅಂಚು

ಸೆಪ್ಟೆಂಬರಿನ ಕೊನೆಯ ದಿನಗಳು ಬರುತ್ತಿದ್ದಂತೆ, ಒಂದು ಸಣ್ಣ ತಂಡವನ್ನು ಶಿಖರದೆಡೆಗೆ ಕಳಿಸಬೇಕೆನಿಸಿತು. ನಾನು ಮತ್ತು

ಸ್ಟೀವ್ ನಮ್ಮ ಬಿಡಾರದಲ್ಲಿ ವಿಶ್ರಮಿಸಿದ ನಂತರ, ಒಂದು ದಿನ ಬೆಳಗಾಗುವ ಮೊದಲೇ ಮೂರು ಶೇರ್ಪಾ ಮಾರ್ಗದರ್ಶಿಗಳೊಂದಿಗೆ ಪರ್ವತವೇರಲು ಹೊರಟೆವು. ಬಿಸಿಲು ಹೆಚ್ಚಾಗಿ ಹಿಮಕರಗುವಷ್ಟರಲ್ಲಿ ಆದಷ್ಟು ತೀವ್ರ ಚಲಿಸಬೇಕಾಗಿತ್ತು.

ಹಿಮಪಾತದಡಿಯಲ್ಲಿ ಹಗ್ಗವನ್ನು ಬಹಳ ಪ್ರಯಾಸಪಟ್ಟು ಬಿಗಿಯಾಗಿ ಕಟ್ಟಿದೆವು. ನಮ್ಮ ಏಣಿಯು ಪಟ್ಟಿಗಳ ಮೇಲೆ ನಮ್ಮ ಬಡಿತದಿಂದಾಗುತ್ತಿದ್ದ ಶಬ್ದವೊಂದೇ ಕೇಳಿಸುತ್ತಿತ್ತು. ಸುಮಾರು ಮೂರೂವರೆ ಗಂಟೆಗಳ ಅಗ್ನಿ ಪರೀಕ್ಷೆಯ ಅನಂತರ, ನಾವು ಸಾವಿನ ದವಡೆ ಭಾಗ ದಾಟಿ ಮುಂದುವರೆದಿದ್ದೆವು.

ನಾವು ಎರಡನೆಯ ಬಿಡಾರ ತಲುಪಿದಾಗ ಹೊದ್ದಿದ್ದ ಬಟ್ಟೆಗಳಲ್ಲಿ ಕೆಲವನ್ನು ಕಳಚುವಷ್ಟು ಬಿಸಿಲಿನ ಝಳ ಹೆಚ್ಚಾಗಿತ್ತು. ಆದರ ಮರುದಿನ ಮೂರನೆಯ ಬಿಡಾರದಲ್ಲಿ, ಅಷ್ಟು ಝಳವಿರಲಿಲ್ಲ. ೭೨೦೦ ಮೀಟರ ಎತ್ತರದಲ್ಲಿನ ಈ ಬಿಡಾರದಲ್ಲಿ, ನಾವು ನಮ್ಮ ನಿದ್ರಾ ಚೀಲ (ಸ್ಲೀಪಿಂಗ್ ಬ್ಯಾಗ್ಸ್) ಗಳಲ್ಲಿ ಹೊಕ್ಕು ಮುದುರಿಕೊಂಡು ಮಲಗಿದೆವು. ರಾತ್ರಿಯೆಲ್ಲ ಭೀಕರ ಚಳಿ ನಮ್ಮ ಬಿಡಾರವನ್ನೇ ಅಲುಗಾಡಿಸಿತಲ್ಲದೆ ಹಿಮದ ಚೂರುಗಳು ಇಳಿಜಾರಿನ ಮೇಲೆ ಬಿದ್ದು ನಮ್ಮ ಬಿಡಾರದ ನೈಲಾನ್ ಬಾಗಿಲಿಗೆ ಬಡಿದವು.

ಮರು ದಿನ ಬೆಳಿಗ್ಗೆ ವಾತಾವರಣದ ಆ ಖಾಲಿ ಅಂಚುಭಾಗವನ್ನು ಪ್ರವೇಶಿಸಲು ಸಿದ್ಧರಾದೆವು. ಪ್ರತಿಯೊಬ್ಬರೂ ೮ ಕಿಲೋ ಭಾರದ ಆಮ್ಲಜನಕದ ಸಿಲೆಂಡರ್‌ಗಳನ್ನು ಪಟ್ಟಿಯಿಂದ ಕಟ್ಟಿಕೊಂಡೆವು. ಇಳಿಜಾರು ಹಿಮದ ಮೇಲೆ ಎಳೆದಾಡುತ್ತ ೪ ನೆಯ ಬಿಡಾರಕ್ಕೆ ತಲುಪುವದು ಅತಿ ಪ್ರಯಾಸಕರವಾಗಿತ್ತು. ಆದರೆ ೭೯೦೦ ಮೀಟರ್ ಎತ್ತರದಲ್ಲಿ ಆ ಆಮ್ಲಜನಕದಿಂದಾಗಿ ನಾವು ಸ್ಥಿಮಿತ ಕಳೆದುಕೊಂಡಿರಲಿಲ್ಲವಲ್ಲದೆ ಅಂಥ ವಿಷಮ ಸ್ಥಿತಿಯಲ್ಲೂ ದೇಹದಲ್ಲಿ ಸಾಕಷ್ಟು ಉಷ್ಣತೆ ಇತ್ತು. ರಾತ್ರಿ ಮಲಗುವಾಗ ಮೊಗವಾಡಗಳನ್ನು ಧರಿಸಿಕೊಂಡೇ ಮಲಗಿದೆವು.

ನಾವು ಮಲಗಿದ್ದು ಕೆಲವು ಗಂಟೆಗಳು ಮಾತ್ರ. ಮರು ದಿನ ನಮ್ಮ ಪಾಲಿಗೆ "ಶಿಖರಾರೋಹಣ ದಿನ" ವಾಗಲಿತ್ತು. ಬೆಳಕಿರುವಾಗಲೇ ಏರಲು ಪ್ರಾರಂಭಿಸಬೇಕಾಗಿತ್ತು. ಹೊರಗಡೆ –೨೮°C ಉಷ್ಣಾಂಶವಿತ್ತು. ಆಕಾಶದಲ್ಲೆಲ್ಲ ನಕ್ಷತ್ರಗಳು ಹರಡಿಕೊಂಡಿದ್ದವು. ಸ್ಥೂಲವಾದ ಆರೋಹಣ ಉಡುಪುಗಳು ಮತ್ತು ಅಷ್ಟೇ ಭಾರವಾದ ಆಮ್ಲಜನಕದ ಸಿಲೆಂಡರ್‌ನ್ನು ಕಟ್ಟಿಕೊಂಡಿದ್ದ ನಾವು, ಅಂತರಿಕ್ಷದಲ್ಲಿನ ಗಗನಯಾತ್ರಿಗಳಂತೆ ಕಂಡೆವು.

ಆ ಎತ್ತರದಲ್ಲಿ ಪ್ರತಿ ಹೆಜ್ಜೆಯೂ ಭಾರವೆನಿಸಿತು. ಎರಡು ಗಂಟೆಗಳ ಅನಂತರ ಶೇರ್ಪಾಗಳು ನಮಗಿಂತಲೂ ೯೦ ಮೀಟರ ನಷ್ಟು ಹಿಂದೆ ಉಳಿದಿದ್ದರು. ಏನಾದರೂ ದೋಷ ಅಥವಾ ತಪ್ಪಾಗಿರಬೇಕೆಂದು ತಿಳಿದುಕೊಳ್ಳಲು ನಾನು ಕಾದು ನಿಂತೆ. ಶೇರ್ಪಾಗಳು ನನ್ನ ಹತ್ತಿರ ಬಂದಾಗ "ಏನಾದರೂ ಸಮಸ್ಯೆಯಾಗಿದೆಯೆ ?" ಎಂದು ಮೊಗವಾಡ ಧರಿಸಿಯೇ ಕೂಗಿ ಕೇಳಿದೆ. ಅವರಲ್ಲಿ ಒಬ್ಬನು ತನ್ನ ಆಮ್ಲಜನಕದ ಸಿಲಿಂಡರ್ ಕಡೆ ಕೈ ಮಾಡಿ "ಗಾಳಿ ಇಲ್ಲ" ಎಂದನು. ಅದರ ಅಳತೆ ಕಡ್ಡಿಯಲ್ಲಿ ಸಮಸ್ಯೆಯುಂಟಾಗಿತ್ತು. ಅದರ ಕವಾಟವನ್ನು ತಿರುಗಿಸುತ್ತ "ಇದನ್ನು ತಿರುಗಿಸಿಲ್ಲವಲ್ಲ !" ಎಂದು ಕೂಗಿದೆ.

ಒಂದರ್ಧ ಗಂಟೆಯಲ್ಲಿ ಜಿಮ್, ಸ್ಟೀವ್ ಮತ್ತು ಇನ್ನೊಬ್ಬ ಶೇರ್ಪಾ ಪಾಸಾಂಗರನ್ನು ಸೇರಿಕೊಂಡೆ. ಆದರೆ ಇನ್ನಿಬ್ಬರು ಶೇರ್ಪಾಗಳು ಮಾತ್ರ ಮತ್ತೆ ಹಿಂದೆ ಬಿದ್ದರು. ಬೆಳಗಿನ ಜಾವದ ೫ ಗಂಟೆಗೆ ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ, ಮೊಳಕಾಲು ಎತ್ತರದ ಹಿಮದಲ್ಲಿ ಎಳೆದಾಡುತ್ತ ಪ್ರಯಾಣ ಮುಂದುವರಿಸಿದೆವು. ಅಷ್ಟು ಶ್ರಮಪಟ್ಟರೂ ಒಂದು ಗಂಟೆಯಲ್ಲಿ ಹೆಚ್ಚು ಪ್ರಗತಿ ಸಾಧಿಸಿರಲಿಲ್ಲ. ಅನಂತರ ಮಸುಕಿನ ಆ ಬೆಳಕಿನಲ್ಲಿ "ಶೇರ್ಪಾಗಳೇನಾದರೂ ಕಾಣುತ್ತಾರೇನೆಂದು ಜಿಮ್ ಕೆಳಗೆ ನೋಡಿದ. "ಅವರು ಮರಳಿ ಹೋಗಿದ್ದಾರೆ....!" ಎಂದು ಜಿಮ್ ಕೂಗಿದ. ನನ್ನ ಉಸಿರು ನಿಂತು ಹೋದಂತೆನಿಸಿತು. ಅವರು ನಮ್ಮ ಎರಡು ಆಮ್ಲಜನಕದ ಸಿಲಿಂಡರ್‌ಗಳ ಸಮೇತ ಮರಳಿ ಹೊರಟಿದ್ದರು! ಶಿಖರ ತಲುಪಲು ನಮಗೆ ಆ ಆಮ್ಲಜನಕ ಬೇಕಾಗಿತ್ತು. ಆ ಇಳಿಜಾರು ದಾರಿಯ ಮೇಲೆ ಜಿಮ್ ಕಣ್ಣು ಹಾಯಿಸಿದ. ಅನಾರೋಗ್ಯ ಅಥವಾ ಗಾಯವಾಗಿದ್ದರೆ, ಅವರು ಮೆಲ್ಲ ಮೆಲ್ಲಗೆ ಬರುತ್ತಿದ್ದರು. ದಣಿವು, ಅಂಜಿಕೆ, ಮಾನಸಿಕ ಕುಸಿತದಂಥ ಕಾರಣಗಳೇ ಇರಬೇಕೆಂದು ನಾವು ಊಹಿಸಿದೆವು.

"ನಾವು ತಲುಪಲು ಸಾಧ್ಯವೆನಿಸುತ್ತಿದೆಯೇ?" ಎಂದು ಕೇಳಿದೆ. ನಾವು ನಮ್ಮ ಆಮ್ಲಜನಕದ ಅಳತೆ ಕಡ್ಡಿ (ಆಕ್ಸಿಜನ್ ಗೇಜ್) ಕಡೆಗೆ ನೋಡಿದೆವು. ನಮ್ಮಲ್ಲಿದ್ದ ಆಮ್ಲಜನಕದ ಪ್ರಮಾಣ, ಶಿಖರವನ್ನೇರಿ ಮರಳಿ ಬರುವಷ್ಟಿರಲಿಲ್ಲ. ಆದರೆ ಮರಳಿ ಹೋಗೋಣವೆಂದು ಯಾರೂ ಸೂಚಿಸಲಿಲ್ಲ. ಕತ್ತಲನ್ನು ಭೇದಿಸಿ ಸೂರ್ಯಕಿರಣ ಕಾಣಿಸಿಕೊಳ್ಳುತ್ತಿದ್ದಂತೆ ಹಿಮದ ವಿನ್ಯಾಸದಲ್ಲಿ ಬದಲಾವಣೆಯಾಗ ಹತ್ತಿತು. ಹಿಮದ ಗಡ್ಡೆ ಮೃದುವಾಗ ಹತ್ತಿತು. "ಬಹಳ ತಡವಾಯಿತು, ನಾವು ತಲುಪಲು ಸಾಧ್ಯವಿಲ್ಲ...."ವೆಂದೆನಿಸಿತು.

ನಿರ್ಧಾರದ ಘಳಿಗೆ:

ಏಳು ಗಂಟೆಯ ಸಮಯಕ್ಕೆ ಎವರೆಸ್ಟಿನ ತುದಿ ಇನ್ನೂ ೩೦೦ ಮೀಟರಿನಷ್ಟು ಉಳಿದಿತ್ತು. ಆಗ ನಾವೊಂದು ನಿರ್ಧಾರಕ್ಕೆ ಬರಬೇಕಾಗಿತ್ತು. "ಇಲ್ಲಿಂದ ಶಿಖರ ತಲುಪಲು ಎಷ್ಟು ಸಮಯಬೇಕಾಗಬಹುದು?" ಎಂದು ಜಿಮ್ ಪಸಾಂಗನನ್ನು ಕೇಳಿದನು.

"ಐದು ಗಂಟೆಗಳು" ಎಂದು ಅವನು ಉತ್ತರಿಸಿದನು. ಆದರೆ ನಮ್ಮ ಸಿಲಿಂಡರ್‌ಗಳಲ್ಲಿ ಮೂರು ಗಂಟೆಗಳವರೆಗೆ ಮಾತ್ರ ಸಾಲುವಷ್ಟು ಆಮ್ಲಜನಕವಿತ್ತು. ಇನ್ನೂ ಎರಡು ಗಂಟೆಗಳವರೆಗೆ ಆಮ್ಲಜನಕದ ಪೂರೈಕೆ ಪ್ರಶ್ನೆ ನಮ್ಮೆದುರಿಗಿತ್ತು. ಆಗ ಹವಾಮಾನ ಅತ್ಯುತ್ತಮವಾಗಿತ್ತು, ಆದರೆ ಇದೇ ತೆರನಾಗಿರುತ್ತದೆಂದು ಹೇಳುವಂತಿರಲಿಲ್ಲ. "ನಮ್ಮಲ್ಲಿ ಒಬ್ಬರು ಹೋಗಬೇಕು" ಎಂದು ನಾನು ಸೂಚಿಸಿದೆ. ಜಿಮ್ ಪಸಾಂಗನ ಕಡೆಗೆ ಹೊರಳಿ "ಒಂದರಿಂದ ಹತ್ತರೊಳಗಿನ ಒಂದು ಅಂಕಿಯನ್ನು ಆಯ್ದುಕೋ" ಎಂದನು. ಪಸಾಂಗ ತಲೆಯಲ್ಲಾಡಿಸುತ್ತಿದ್ದಂತೆ ಸ್ಟೀವ್ "ಎಂಟು" ಎಂದನು. "ನಾಲ್ಕು" ಎಂದು ನಾನು ಅನ್ನುತ್ತಿದ್ದಂತೆ ನನ್ನ ಹೃದಯ ಬಡಿತ ಜೋರಾಯಿತು. "ನಾನು ಆರನ್ನು ಆರಿಸಿಕೊಳ್ಳುತ್ತೇನೆ" ಎಂದು ಜಿಮ್ ಹೇಳಿದನು. "ಮೂರು"

ಎಂದು ಪಸಾಂಗ ಹೇಳಿ "ಹೌದು ಅದು ಮೂರು ಇದೆ" ಎಂದನು.

"ಅಭಿನಂದನೆಗಳು" ಎಂದು ಜಿಮ್ ನನಗೆ ಹೇಳಿದ.

ಪಸಾಂಗನ ಕಡೆ ನೋಡುತ್ತ "ನಿನಗೆ ನಮ್ಮ ಜೊತೆ ಬರುವ ಇಚ್ಛೆಯಿದ್ದರೂ, ಮರಳಿ ನಮ್ಮ ಜೊತೆಗೆ ಬರಲಾಗುವುದಿಲ್ಲ" ಎಂದು ಹೇಳಿದನು.

"ನಾನೂ ಮೇಲೆ ಏರುವೆ" ಎಂದು ಪಸಾಂಗ ಹೇಳಿದ :

"ನಿನ್ನಲ್ಲಿದ್ದ ಆಮ್ಲಜನಕ ಮುಗಿದು ಹೋಗಿಬಿಡುತ್ತದೆ." ಎಂದು ಜಿಮ್ ಹೇಳಿದನು.

"ನಾನೂ ಮೇಲೆ ಏರುವೆ" ಎಂದು ಪಸಾಂಗ ಮತ್ತೊಮ್ಮೆ ನುಡಿದನು. ಅವನ ಪುಪ್ಪುಸಗಳು ಚರ್ಮದಂತಿದ್ದದರಿಂದ ಸಾಕಷ್ಟು ತೆಳು ಗಾಳಿ ಎಳೆದುಕೊಂಡು ಅದರ ಮೂಲಕ ಅವನು ಮುಂದುವರೆಸ ಬಹುದಾಗಿತ್ತು.

ಸ್ಟೀವ್ ನನ್ನ ಆಮ್ಲಜನಕದ ಸಿಲೆಂಡರ್ ಬದಲಾಯಿಸಿ ಜಿಮ್ಮನ ಜೊತೆಗೆ ಕೊರಕಲಿನ ಗುಹೆಯಲ್ಲಿ ಮಾಯವಾದನು. ನನಗೆ ಬಹಳ ಭಯವಾಯಿತು. ನನಗೆ ಈ ಪಸಾಂಗನ ಪರಿಚಯ ಹೆಚ್ಚಿರಲಿಲ್ಲ. ಅವನಾದರೂ ಎಂದೂ ಶಿಖರದವರೆಗೆ ಹೋಗಿರಲಿಲ್ಲ. ಒಮ್ಮೆ ದೀರ್ಘವಾಗಿ ಉಸಿರೆಳೆದುಕೊಂಡು ಧೈರ್ಯ ತಂದು ಕೊಂಡೆ. "ನಾನು ನನ್ನನ್ನೇ ಅವಲಂಬಿಸ ಬೇಕಾಗಿದೆ" ಎಂದುಕೊಂಡು ಪರ್ವತದ ಆ ಕೊನೆಯ ಹಂತದೆಡೆಗೆ ಸಾಗಹತ್ತಿದೆ. ಕೋರಿಯಾದ ಪರ್ವತಾರೋಹಿಗಳ ತಂಡ ವೊಂದು ಅದೇ ಸಮಯಕ್ಕೆ ಅಲ್ಲಿ ಬಂದು ನನ್ನ ಜೊತೆ ಸೇರಿಕೊಂಡಿತು.

'ಹಿಲೇರಿ ಹೆಜ್ಜೆ' ಎಂಬ ಭಾಗ ನಮ್ಮ ದಾರಿಯಲ್ಲಿನ ಕೊನೆಯ ಪ್ರಮುಖ ಅಂತರ ವೆನ್ನಬಹುದು. ಸ್ವಾಭಾವಿಕವಾಗಿದ್ದ ಹಿಮ ಭರಿತ ಜಾರುಬಂಡೆ, ತಗ್ಗು ಮತ್ತು ಹಿಮ ಕೊಡಲಿಯಿಂದ ಹೊಡೆದ ಕಲೆಗಳಿಂದ ತುಂಬಿ ಕೊಂಡಿದ್ದ ಹತ್ತು ಮೀಟರ್ ನೇರ ಎತ್ತರದ ಗುಡ್ಡ, ಏರಲು ಸುಲಭವಾಗಿತ್ತು.

ಉನ್ನತ ಶಿಖರದ ಮೇಲೆ

ಆದರೆ ೮೮೫೦ ಮೀಟರ್ ಎತ್ತರದಲ್ಲಿ ನಾವೆಣಿಸಿಕೊಂಡಂತಿರಲಿಲ್ಲ. ಆ ಗುಡ್ಡ ೨೪೫೦ ಮೀಟರ್‌ಗಿಂತ ಹೆಚ್ಚು ಆಳ ವಾಗಿದ್ದುದನ್ನು ಕಂಡು ನಾನು ತಲ್ಲಣ ಗೊಂಡೆ. ಬಹಳಷ್ಟು ಜನರು ಸುಲಭವಾದ ಗೋಡೆ ಏರುವಾಗಲೇ ತಪ್ಪು ಮಾಡುವ ದುಂಟು. ಗಾಳಿ ಕೂಡ ಬಹಳ ರಭಸದಿಂದ ಬೀಸ ಹತ್ತಿತು. "ನನ್ನನ್ನೂ ತಳ್ಳಿಕೊಂಡು ಹೋಗುವಷ್ಟು ಬಲವಾಗಿದೆಯೆ?" ಎಂಬ ಪ್ರಶ್ನೆ ನನ್ನೆದುರಿಗಿತ್ತು. ನನ್ನ ಭಯವನ್ನು ಕಳಚಲು ಹಿಮಕೊಡಲಿಯನ್ನು ಜೋರಾಗಿ ಬೀಸಿ ಹಿಮದಲ್ಲಿ ಸಿಕ್ಕಿಸಿ ನಾನು ಏರಲೆತ್ನಿ ಸಿದೆ. ಅಷ್ಟೇನೂ ಮುಖ್ಯವೆನಿಸದ ಇನ್ನೊಂದು ಗೋಡೆ ಇತ್ತು. ಮೂರು ನಿಮಿಷಗಳಲ್ಲಿ ಅವನ್ನು ಏರಿ ಮೇಲೆನಿಂತೆ.

ಪಸಾಂಗ ಮುಖವೆತ್ತಿ ನನ್ನನ್ನು ಅನುಮಾನಿಸುತ್ತಲೇ ನೋಡಿದ. ನಾನು ಕೈಮಾಡಿ ಬರುವಂತೆ ಕರೆದೆ. ಆದರೆ ಅವನು ಕದಲಲಿಲ್ಲ. ಪಸಾಂಗ ಕೂಡಾ ನಮ್ಮ ಕೆಳಗಿದ್ದ ಆ ತೆರುವಾದ ಸ್ಥಳ ಮತ್ತು ಗಾಳಿಯ ರಭಸದ ಬಗ್ಗೆ ಚಿಂತಿಸಿದ. ಹಿಮದ ಮೇಲೆ ಹೆಜ್ಜೆ ಇಡುವಾಗ ಸ್ವಲ್ಪ ತಪ್ಪಿದರೂ ನಮ್ಮ ಕಥೆ ಮುಗಿದಂತೆ.

"ಅದೆಲ್ಲ ಸರಿಯಾಗಿದೆ" ಎಂದು ನಾನು ಕೂಗಿದೆ. ಹಿಮದಮೇಲೆ ಕೊಡಲಿಯನ್ನು ಚುಚ್ಚಿ ಒಂದೊಂದು ಹೆಜ್ಜೆಯಿಟ್ಟು ಮೆಲ್ಲಗೆ ಏರಲು ಪ್ರಾರಂಭಿಸಿದ. ಅವನು ಏರುತ್ತಿದ್ದು ದನ್ನು ಕೆಲವು ನಿಮಿಷಗಳವರೆಗೆ ನೋಡಿ, ಆನಂತರ ಶಿಖರದ ಕಡೆಗೆ ನನ್ನ ದೃಷ್ಟಿ ಹೊರಳಿಸಿದೆ. ಅದು ಕೇವಲ ೨೫ ಮೀಟರು ನಷ್ಟು ಅಂತರದಲ್ಲಿತ್ತು. "ಶಿಖರಕ್ಕೆ ನಾನೆಷ್ಟು ಹತ್ತಿರದಲ್ಲಿದ್ದೇನೆ" ಎಂದೆನಿಸಿದಾಗ ನನ್ನೊಳಗಿನ ಉತ್ಸಾಹ ಹೊರಹೊಮ್ಮು ತ್ತಿದ್ದಂತೆನಿಸಿತು. ನಾನು ಅದನ್ನು ಅದುಮಿ ತಡೆಯಲೆತ್ನಿಸಿದೆ. ನಾನು ಇನ್ನೂ ತಡೆದು ಕೊಂಡು ಗುರಿ ತಲುಪಬೇಕಾಗಿತ್ತು.

ಏಳು ಮೀಟರ್‌ಗಳು ಉಳಿದಾಗ ಹೆಪ್ಪು ಗಟ್ಟಿದ್ದ ನನ್ನ ಕೈ-ಕಾಲು ಬೆರಳುಗಳಲ್ಲಿ ಚೈತನ್ಯ ಕಾಣಿಸಿಕೊಂಡಿತು. "ನಾನು ಸಾಧಿಸಲಿದ್ದೇನೆ...." ಎಂಬ ಉತ್ಸಾಹವೇ ಇದಕ್ಕೆ ಕಾರಣ.

ಮೂರು ಮೀಟರುಗಳು

ಇದೇ ಶಿಖರ....ನನ್ನ ಗಡಿಯಾರದಲ್ಲಿ ನೋಡಿಕೊಂಡೆ. ೧೯೮೮ ಸೆಪ್ಟೆಂಬರ್ ೨೯ರ ಬೆಳಗಿನ ೧೦-೩೦ರ ಸಮಯ. ಅಮ್ಲಜನಕದ ಆ ಮೊಗವಾಡದ ಹಿಂದೆಯೇ ನಸುನಗುತ್ತ ಕೊನೆಯ ಕೆಲವು ಹೆಜ್ಜೆಗಳನ್ನಿಟ್ಟೆ. ನಾನು ವಿಶ್ವದ ಅತ್ಯುನ್ನತ ಶಿಖರ ತಲುಪಿದ್ದೆ.

ಕೆಳಗಿನ ಕೆಲವು ಉನ್ನತ ಶಿಖರಗಳನ್ನು ಉಳಿದು ಎಲ್ಲೆಡೆ ಮೋಡಗಳು ತೇಲು ತ್ತಿದ್ದವು. ಮೇಲೆ ಆಕಾಶದಲ್ಲಿ ಮೋಡ ಗಳನ್ನು ಭೇದಿಸಿ ಕಿರಣಗಳು ಸೂಸು ತ್ತಿದ್ದವು. ಅಲ್ಲಿ ಕೂಡಾ ಮೋಡಗಳು ಗಾಳಿಯ ರಭಸಕ್ಕೆ ತೇಲಾಡುತ್ತಿದ್ದವು. ಶಿಖರವೇರಿದ ಪಸಾಂಗ ತನ್ನ ಕೊಡಲಿ ಯನ್ನು ಝಳಪಿಸುತ್ತ, ಕುಣಿಯುತ್ತ, ಕೇಕೆ ಹಾಕುತ್ತ ಬಂದನು.

ನಾನು ಭಾವುಕಳಾದೆ. ಗಾಜಿನ ಮೊಗ ವಾಡದ ಹಿಂದಿನ ನನ್ನ ಕಣ್ಣುಗಳು ಮಂಜಾದವು. ಕೆಲವು ತಿಂಗಳುಗಳಿಂದ ಹತ್ತಿಕ್ಕಿದ್ದ ನನ್ನ ಭಾವನೆಗಳನ್ನು ಹೊರ ಹಾಕಿದೆ. ಅನೇಕ ವರ್ಷಗಳಿಂದ ಕಂಡಿದ್ದ ನನ್ನ ಭಗ್ನ ಕನಸು—ಹೆಚ್ಚು ಕಡಿಮೆ ನುಚ್ಚುನೂರಾಗಿದ್ದ ಆ ಕನಸು—ಕೊನೆಗೂ ನನಸಾಗಿತ್ತು!

ಕಾರ್ಯ ಮಾಡುವಾಗ ದಕ್ಷನಾಗಿರು. ಮಾತನಾಡುವಾಗ ಎಚ್ಚರದಿಂದಿರು. ಯೋಚಿಸುವಾಗ ದೂರ ದೃಷ್ಟಿಯಿಂದಿರು.

—ಮಾರ್ಕ್ಸ್

ಏಕಿಷ್ಟು ದಣಿವು?

ಶಂಸ ಐತಾಳ

ಬಾಲ್ಯದ ದಿನಗಳನ್ನು ನೆನಪಿಸಿಕೊಂಡಾಗ, ಲೇಖಕಿ ಎಲ್ಲೆನ್ ಜಾಲಿಂಸ್ಕಿಗೆ ಈಗಲೂ ನಗು ಬರುತ್ತದೆ. ಹೌದು. ಅವಳಿಗೆಷ್ಟು ದಣಿವು ಉಂಟಾಗುತ್ತಿತ್ತೆಂದರೆ, ಕಾಲೇಜಿನಲ್ಲಿ ಒಂದು ಶಿಕ್ಷಣವನ್ನೇ ಅವಳು ನಡುವೆ ಬಿಡಬೇಕಾಗಿ ಬಂದಿತ್ತು. ವಿಪರೀತ ಬಳಲಿಕೆಯಿಂದ ಅವಳ ಅಂಗಾಂಗಗಳು ಮರಗಟ್ಟಿಹೋಗುತ್ತಿದ್ದವು. ಆದರೂ ಧೃತಿಗೆಡದೆ ಅವಳು ವಿದ್ಯಾಭ್ಯಾಸ ಮುಂದುವರಿಸಿದ್ದಳು. ದಣಿವಿನಿಂದಾಗಿ ತರಗತಿಯಲ್ಲಿಯೂ ತಾನು ಆಗಾಗ ತೂಕಡಿಸುತ್ತಿದ್ದೆನೆಂಬ ಮಸುಕುಮಸುಕು ನೆನಪು ಅವಳಿಗೆ. ಬಳಲಿಕೆಯಿಂದಾಗಿ ಹಗಲು ಹೊತ್ತು ಕೂಡ ಅವಳು ಗಾಢ ನಿದ್ರೆಗೆ ವಶಳಾಗುತ್ತಿದ್ದಳು—ಎಲ್ಲೆಂದರೆ ಅಲ್ಲಿ.

ಅವಳ ಈ ಅತಿ ಆಯಾಸವೇನೂ ಅಸಾಧಾರಣವಲ್ಲ. ಕೆಲವು ಜನರಿಗಂತೂ ಎರಡು ವಾರಗಳಷ್ಟು ದೀರ್ಘಕಾಲ ದಣಿವು ಬಾಧಿಸುತ್ತದೆ. ಇದು ನಿದ್ರಾಹೀನತೆಯಿಂದ ಹಿಡಿದು ಗಂಭೀರ ರೋಗಗಳವರೆಗೆ ಯಾವುದಾದರೊಂದರ ಸಂಕೇತವಾಗಿರುತ್ತದೆ. ಕೆಲವೊಮ್ಮೆ ಔಷಧ ಸೇವನೆಯ ದುಷ್ಪರಿಣಾಮವಾಗಿಯೂ ದಣಿವು ಕಾಣಿಸಿಕೊಳ್ಳುವುದುಂಟು. ಆದ್ದರಿಂದ ರೋಗನಿದಾನಕ್ಕೆ ಹೆಚ್ಚು ಕಾಲ ತಗಲುತ್ತದೆ.

"'ನನಗೆ ನಿಶ್ಶಕ್ತಿ', 'ಏನೂ ಮಾಡಲು ಸಾಧ್ಯವಾಗುತ್ತಿಲ್ಲ.' 'ಉತ್ಸಾಹವೇ ಇಲ್ಲ' ಮೊದಲಾದ ಹೇಳಿಕೆಗಳ ತೀರ ಸಂದಿಗ್ಧ ಹಾಗೂ ಅಸ್ಪಷ್ಟವಾಗಿರುತ್ತವೆ" ಎನ್ನುತ್ತಾರೆ ಬಾಸ್ಟನ್ ವಿಶ್ವವಿದ್ಯಾನಿಲಯದ ವೈದ್ಯಕೀಯ ಕಾಲೇಜಿನ ಮಾರ್ಕ್ ಮೋಸ್ಕೊವಿಟ್ಜ್." ಇತರ ಚಿಹ್ನೆಗಳತ್ತ ಕೂಡ ಗಮನ ಕೊಡುವುದು ರೋಗ ನಿದಾನಕ್ಕೆ ನೆರವಾಗುತ್ತದೆ."

ತುಂಬ ದಣಿವುಂಟಾಗಲು ಕಾರಣವೇನು? ದಣಿವನ್ನು ಹೇಗೆ ನಿವಾರಿಸಿಕೊಳ್ಳಬಹುದು? ಕೆಲವು ಸೂಚನೆಗಳು ಇಲ್ಲಿವೆ:

೧) ನಿದ್ರಾಹೀನತೆ

ನ್ಯಾನ್ಸಿ ಶಿಂಗಳ ಅನುಭವ ಕೇಳಿ. ಬೆಳಗ್ಗೆ ಆರು ಗಂಟೆಗೆ ಅವಳು ಹೇಳಲೇಬೇಕು. ಪ್ರತಿ ದಿನ ಕ್ಯಾಂಪಸ್‌ಗೆ ಹೋಗಿಬರಲು ಸುಮಾರು ೫೦ ಕಿಲೋಮೀಟರ್ ಡ್ರೈವ್ ಮಾಡ

೧೯೯೩ರ ಫೆಬ್ರವರಿ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಪ್ಯಾಟ್ರಿಸಿಯಾ ಲಾಂಗ್ ಅವರ 'ವೈ ಆ್ಯಮ್ ಐ ಸೋ ಟಯರ್ಡ್?' ಎಂಬ ಲೇಖನದ ಆಧಾರ.

ಬೇಕು. ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು. ಮನೆಯಲ್ಲಿ ಅಡಿಗೆ ಮಾಡುವ ಹೊಣೆಯೂ ಸಹಜವಾಗಿ ಅವಳದೇ. ಅಲ್ಲದೆ ಚಿಕ್ಕ ಮಕ್ಕಳನ್ನು ಸಂಗೀತ–ನೃತ್ಯ ತರಗತಿಗಳಿಗೆ, ಆಟೋಟ ಸ್ಪರ್ಧೆಗಳಿಗೆ ಕರೆದುಕೊಂಡು ಹೋಗಬೇಕು. ಕಾಲೇಜ್‌ಗೆ ಸಂಬಂಧಿಸಿದ ಕೆಲಸಗಳನ್ನು ಮಾಡಲು ಅವಳಿಗೆ ಸಮಯ ಸಿಗುವುದೇನಿದ್ದರೂ ರಾತ್ರಿ ಒಂಬತ್ತು ಗಂಟೆಯ ಅನಂತರವೇ. "ಪ್ರತಿ ದಿನ ಕನಿಷ್ಠ ಆರು ಗಂಟೆಗಳ ಕಾಲ ನಿದ್ರೆ ಮಾಡಬೇಕೆಂದು ನಾನು ಪ್ರಯತ್ನಿಸುತ್ತೇನೆ ; ಆದರೆ ಎಷ್ಟೋ ದಿನ ಅದೂ ಸಾಧ್ಯವಾಗುವುದಿಲ್ಲ. ಕೆಲಸ ಮಾಡಲು ನನಗೆ ಶಕ್ತಿಯೇ ಇರುವುದಿಲ್ಲ."

ಸಾಮಾನ್ಯವಾಗಿ ಬಹುಮಂದಿಗೆ ದಿನಕ್ಕೆ ಏಳರಿಂದ ಒಂಬತ್ತು ಗಂಟೆಗಳ ನಿದ್ರೆ ಆಗತ್ಯವಾಗಿರುತ್ತದೆ. ಆದರೆ ನಮ್ಮಲ್ಲಿ ಅನೇಕರಿಗೆ ಇಷ್ಟು ನಿದ್ರೆ ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ಮಾಡುವ ನಿದ್ರೆ ಗಾಢವಾಗಿರಬೇಕು. ಡ್ರೈವರ್‌ಗಳು ತಮ್ಮ ಅನುಭವದಿಂದ ಹೇಳುವಂತೆ, ಲಘು ನಿದ್ರೆ, ತೂಕಡಿಕೆ ಇವು ಅಪಾಯಕರ ; ಹಾನಿಕರ.

ಆಗಾಗ ತೂಕಡಿಕೆ–ಆಕಳಿಕೆ ಬರುತ್ತಿದ್ದರೆ, ರಾತ್ರಿ ಸಾಧ್ಯವಾದಷ್ಟು ಬೇಗ ಮಲಗುವ ಅಭ್ಯಾಸ ಮಾಡಿಕೊಳ್ಳಿ. ಮನೆಕೆಲಸ-ಕಛೇರಿ ಕೆಲಸಗಳಿಂದಾಗಿ ಇದು ಸಾಧ್ಯವಾಗದೆ ಇದ್ದರೆ, ಪ್ರತಿದಿನ ಕಡಮೆಬೀಳುವ ನಿದ್ರೆಯನ್ನು ವಾರಾಂತ್ಯದ ರಜಾ ದಿನಗಳಲ್ಲಿ ಭರ್ತಿ ಮಾಡಿಕೊಳ್ಳಲು ಪ್ರಯತ್ನ ಮಾಡಿ. ಇನ್ನೊಂದು ವಿಧಾನ ಹೀಗಿದೆ: ಹಗಲಿನಲ್ಲಿಯೇ ಸ್ವಲ್ಪ ಹೊತ್ತು—೨೦ರಿಂದ ೪೦ ನಿಮಿಷಗಳವರೆಗೆ—ನಿದ್ರೆ ಮಾಡುವುದನ್ನು ರೂಢಿಸಿಕೊಳ್ಳಿ. ನಿದ್ರೆ ಮಾಡುವ ಮುನ್ನ ತಲೆಯ ಪಕ್ಕ ಅಲಾರಮ್ ಗಡಿಯಾರವನ್ನು ಸೆಟ್ ಮಾಡಿ ಇರಿಸಿಕೊಳ್ಳಿ. ನೆನಪಿರಲಿ—ಎಂದೂ ಹೆಚ್ಚು ಹೊತ್ತು ಹಗಲುನಿದ್ರೆ ಮಾಡಲೇಬೇಡಿ, ಹಾಗೆ ಮಾಡಿದ್ದೇ ಆದರೆ ರಾತ್ರಿಯಿಡೀ ನಿದ್ರೆ ಬರದೆ ಹೊರಳಾಡುತ್ತ ಕಾಲ ಕಳೆಯಬೇಕಾಗಬಹುದು.

ಮಲಗಿದ ಕೂಡಲೇ ನಿಮಗೆ ನಿದ್ರೆ ಬರುವುದಿಲ್ಲವೆ? ಪ್ರತಿ ಮೂರು ಮಂದಿಯಲ್ಲಿ ಒಬ್ಬ ವ್ಯಕ್ತಿಗೆ ಈ ಸಮಸ್ಯೆಯಿರುತ್ತದೆ. ಸುಮಾರು ಹತ್ತು ಜನರಲ್ಲಿ ಒಬ್ಬರು ತೀವ್ರ ನಿದ್ರಾಹೀನತೆಯಿಂದ ನರಳುತ್ತಾರೆ. ಅತಿ ಕಾರ್ಯ-ಭಾರದಿಂದ ಅಥವಾ ಅನಾರೋಗ್ಯದಿಂದ ನಿದ್ರಾಹೀನತೆ ಉಂಟಾಗುವುದು ಸಹಜ. ಕಾರಣ ಇದಲ್ಲವಾಗಿದ್ದರೆ, ಕಾಫಿ ಕುಡಿಯುವ ಅಥವಾ ಮದ್ಯಪಾನದ ಅಭ್ಯಾಸವನ್ನು ಬಿಟ್ಟುಬಿಡಿ. ನಿದ್ರೆ ಬಂದೇಬಿಡುತ್ತದೆ ಎನಿಸುವ ತನಕ ಮಲಗಬೇಡಿ. ಒಂದೊಮ್ಮೆ ಮಲಗಿದ ಮೇಲೆಯೂ ಇಪ್ಪತ್ತು ನಿಮಿಷಗಳ ಕಾಲ ನಿದ್ರೆ ಬರದೆ ಇದ್ದರೆ, ಎದ್ದು ಬಿಡಿ. ಯಾವುದಾದರೂ ಕೆಲಸದಲ್ಲಿ ತೊಡಗಿ. ಓದಿ ಅಥವಾ ಟಿ.ವಿ. ನೋಡಿ—ಮತ್ತೆ ತೂಕಡಿಕೆ ಬರುವವರೆಗೂ. ರಾತ್ರಿ ನಿದ್ರೆಯೇ ಬರದಿದ್ದರೆ, ಅಥವಾ ಹಗಲು ನಿದ್ರೆ ಬರತೊಡಗಿದರೆ, ನಿಮ್ಮ ಸಮಸ್ಯೆಯ ಪರಿಹಾರಕ್ಕಾಗಿ ವೈದ್ಯರನ್ನು ಭೇಟಿ ಮಾಡಿ.

೨) ರಕ್ತಹೀನತೆ

ಮಿಲಿಯಗಟ್ಟಲೆ ಜನರಿಗೆ—ಹೆಚ್ಚಾಗಿ ಮಹಿಳೆಯರಿಗೆ, ಶಿಶುಗಳಿಗೆ ಮತ್ತು ಚಿಕ್ಕ ಮಕ್ಕಳಿಗೆ—ಅತಿ ಬಳಲಿಕೆಯುಂಟಾಗಲು, ಕಬ್ಬಿಣಾಂಶದ ಕೊರತೆಯಿಂದ ಉಂಟಾಗುವ

ರಕ್ತಹೀನತೆಯೇ ಕಾರಣ. ಅವರ ರಕ್ತದಲ್ಲಿ ಅತ್ಯಲ್ಪ ಪ್ರಮಾಣದ ಹೀಮೊಗ್ಲೋಬಿನ್ ಇರುತ್ತದೆ. ಅತ್ಯಲ್ಪ ಆಹಾರ ಸೇವಿಸುವುದರಿಂದ, ವಿಶೇಷವಾಗಿ ಕಟ್ಟುನಿಟ್ಟಾಗಿ ಸಸ್ಯಾಹಾರಿಯಾಗಿರುವುದರಿಂದ ಇಲ್ಲವೇ ಶರೀರದ ತೂಕವನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ನಿಗದಿಪಡಿಸಿದ ಆಹಾರ ಪದಾರ್ಥಗಳನ್ನು ನಿಗದಿಪಡಿಸಿದ ಪ್ರಮಾಣದಲ್ಲಿ ಮಾತ್ರ ಸೇವಿಸುವುದರಿಂದ, ಹೀಮೊಗ್ಲೋಬಿನ್‌ನ ಪ್ರಮಾಣ ಕಮ್ಮಿಯಾಗುತ್ತದೆ. ರಕ್ತಸ್ರಾವದಿಂದಲೂ ರಕ್ತಹೀನತೆ ಉಂಟಾಗುತ್ತದೆ. ಮುಟ್ಟಿನ ದಿನಗಳಲ್ಲಿ ಮಹಿಳೆಯರು ರಕ್ತಹೀನತೆಗೆ ಒಳಗಾಗುವುದು ಸಾಮಾನ್ಯ. ಪೆಪ್ಟಿಕ್ ಅಲ್ಸರ್, ದೊಡ್ಡ ಕರುಳಿನ ಊತ, ದೊಡ್ಡ ಕರುಳಿನ ಕ್ಯಾನ್ಸರ್ ಮತ್ತಿತರ ರೋಗಗಳಿಂದಲೂ ರಕ್ತಹೀನತೆಯುಂಟಾಗುತ್ತದೆ.

ಕಬ್ಬಿಣಾಂಶಯುಕ್ತ ಮಾತ್ರೆಗಳ ಸೇವನೆಯಿಂದ ದೇಹದಲ್ಲಿನ ರಕ್ತದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬಹುದು ಎಂಬುದು ಸಾಮಾನ್ಯ ನಂಬಿಕೆ. ಆದರೆ ಇಂಥ ಮಾತ್ರೆಗಳ ಸೇವನೆ, ರಕ್ತಹೀನತೆಯಿಂದ ಬಳಲುತ್ತಿರುವ ಎಲ್ಲರಿಗೂ, ಸೂಕ್ತ ರಾಮಬಾಣವಾಗಲಾರದು. ರಕ್ತಹೀನತೆ, ಕಿಡ್ನಿ ವೈಫಲ್ಯ ಅಥವಾ ದೊಡ್ಡ ಕರುಳಿನ ಕ್ಯಾನ್ಸರ್‌ಗಳಂತಹ ಗಂಭೀರ ರೋಗಗಳ ಸಂಕೇತವೂ ಆಗಿರಬಹುದಾದ್ದರಿಂದ, ಕಬ್ಬಿಣಾಂಶಯುಕ್ತ ಔಷಧಗಳ ಸೇವನೆಯಿಂದ ಸಮಸ್ಯೆಗೆ ಪರಿಹಾರ ದೊರೆಯಲಾರದು. ಇನ್ನೊಂದು ಮಾತು: ದೇಹದಲ್ಲಿ ಕಬ್ಬಿಣಾಂಶದ ಪ್ರಮಾಣ ಅಧಿಕವಾಗುವುದೂ ದಣಿವಿಗೆ, ಬಳಲಿಕೆಗೆ ಕಾರಣವಾಗಬಹುದು.

ರಕ್ತಹೀನತೆಯೇ ನಿಮ್ಮ ದಣಿವಿಗೆ ಕಾರಣ ಎನಿಸಿದಾಗ ರಕ್ತಪರೀಕ್ಷೆ ಮಾಡಿಸಿಕೊಳ್ಳಿ, ಹೀಮೊಗ್ಲೋಬಿನ್ ಪ್ರಮಾಣವನ್ನು ಕೆಂಪುರಕ್ತಕಣಗಳ ಪ್ರಮಾಣವನ್ನು ತಿಳಿದುಕೊಂಡು ವೈದ್ಯರ ಸಲಹೆ ಪಡೆಯಿರಿ.

೩) ದುಃಖ ಸಂಕಟಗಳು

ಅಪಘಾತ, ಕುಟುಂಬ ವರ್ಗದವರ ಮರಣವೊದಲಾದ ದುರಂತ ಘಟನೆಗಳೂ ಆಯಾಸಕ್ಕೆ ಕಾರಣವಾಗುವುದುಂಟು. ಜೀವನ ಸಂಗಾತಿಯನ್ನು ಕಳೆದುಕೊಂಡಾಗ ಉಂಟಾಗುವ ಯಾತನೆಯಂತೂ ಅವರ್ಣನೀಯ. ವಾಷಿಂಗ್‌ಟನ್‌ನ ವೈದ್ಯಕೀಯ ಸಂಸ್ಥೆ ನಡೆಸಿದ ಒಂದು ಸಮೀಕ್ಷೆಯಿಂದ ತಿಳಿದುಬಂದಂತೆ, ಕುಟುಂಬ ವರ್ಗದಲ್ಲಿನ ಯಾವುದಾದರೊಂದು ಸಾವಿನಿಂದ ಉಂಟಾದ ದುಃಖಸಂಕಟಗಳನ್ನು ಒಂದು ವರ್ಷದ ಅವಧಿಯೊಳಗೆ ಮರೆಯಬಹುದಾದರೂ, ಪತಿ ಅಥವಾ ಪತ್ನಿಯನ್ನು ಕಳೆದುಕೊಂಡ ವ್ಯಕ್ತಿ ಬದುಕಿಗೆ ಮರು–ಹೊಂದಿಕೊಳ್ಳಲು ಮೂರು-ನಾಲ್ಕು ವರ್ಷಗಳಷ್ಟು ದೀರ್ಘ ಕಾಲಾವಧಿಯೇ ಬೇಕಾಗುತ್ತದೆ.

ಬಂಧು-ಬಾಂಧವರ, ಆತ್ಮೀಯ ಸ್ನೇಹಿತರ ಮರಣವಷ್ಟೇ ಅಲ್ಲ, ವಿಚ್ಛೇದನ, ಉದ್ಯೋಗ ಕಳೆದುಕೊಳ್ಳುವುದು, ಇಳಿಮುಖವಾಗುತ್ತಿರುವ ಆರೋಗ್ಯ—ಮುಂತಾದುವೂ ದುಃಖಸಂಕಟಗಳಿಗೆ, ತನ್ಮೂಲಕ ದಣಿವಿಗೆ, ಕಾರಣವಾಗಬಹುದು.

ದುಃಖದ ಸಮಯದಲ್ಲಿ ಸಾಧ್ಯವಾದಷ್ಟು ಸಾರ್ವಜನಿಕ ಸಂಪರ್ಕವನ್ನು ಇರಿಸಿಕೊಳ್ಳಿ. ಪುಸ್ತಕಗಳನ್ನು ಓದಿ, ಸಾಂಸ್ಕೃತಿಕ ಕಾರ್ಯ

ಕ್ರಮಗಳಲ್ಲಿ ಭಾಗವಹಿಸಿ ಸದಾ ಲವಲವಿಕೆಯಲ್ಲಿ ನಿಮ್ಮನ್ನು ಇರಿಸುವಂತಹ ಕಾರ್ಯಚಟುವಟಿಕೆಗಳಲ್ಲಿ ತೊಡಗಿ ಆದರೂ ದುಃಖ ಸಂಕಟಗಳನ್ನು ಮರೆಯಲು, ನಿಮಗೆ ಸಾಧ್ಯವಾಗದೆ ಇದ್ದಲ್ಲಿ, ಮನೋರೋಗ ಚಿಕಿತ್ಸಕರ ಸಲಹೆ ಪಡೆಯಿರಿ. ಕಾಲ ಸರ್ವರೋಗ ನಿವಾರಕವಾಗಿರುವುದರಿಂದ, ಸಮಯ ಕಳೆದಂತೆ ದುಃಖಸಂಕಟಗಳು ಸಹಜವಾಗಿ ಶಮನವಾಗುತ್ತವೆ ಎಂಬ ಚಿರಸತ್ಯ ನಿಮ್ಮ ನೆನಪಿನಲ್ಲಿರಲಿ.

೪) ಉಸಿರಾಟದ ತೊಂದರೆ

ಕೆಲವರಿಗೆ ಗೊರಕೆ ಹೊಡೆಯುವ ಅಭ್ಯಾಸವಿರುತ್ತದೆ. ಅಂಥ ವ್ಯಕ್ತಿಯ ಜೊತೆ ರಾತ್ರಿ ಮಲಗಿದ್ದವನೊಬ್ಬನ ಅನುಭವ ಕೇಳಿ. "ಯಾರಾದರೊಬ್ಬ ಕಳ್ಳ ನಮ್ಮ ಮನೆಗೆ ಬಂದನೆಂದರೆ, ತನಗಿಂತ ಮೊದಲೇ ಇನ್ನೊಬ್ಬ ಕಳ್ಳ ಮನೆಗೆ ನುಗ್ಗಿ ಮನೆಯವರನ್ನು ಕತ್ತುಹಿಸುಕಿ ಕೊಲ್ಲುತ್ತಿದ್ದಾನೆ ಎಂದು ಆವನು ಭಾವಿಸುವುದು ಖಂಡಿತ." ಗೊರಕೆಯಲ್ಲೂ ಎಷ್ಟು ಶೈಲಿ! ಗೊರಕೆಯ ಸದ್ದಿನ ಕರ್ಕಶತೆಗೆ, ಭೀಕರತೆಗೆ ಪಕ್ಕದಲ್ಲಿ ಮಲಗಿದವರು ಮಾತ್ರವೇ ಏಕೆ? ಗೊರಕೆ ಹೊಡೆಯುತ್ತಿರುವವನಿಗೂ ಎಚ್ಚರವಾಗುತ್ತದೆ. ಈ 'ಗೊರಕೆ ರೋಗ' ಆನುವಂಶಿಕ. ಗೊರಕೆ ಹೊಡೆಯುವವರಲ್ಲಿ ಮಧ್ಯ ವಯಸ್ಕರು ಮತ್ತು ಬೊಜ್ಜು ಮೈಯವರೇ ಅಧಿಕ. ವಯಸ್ಕ ಪುರುಷರಲ್ಲಿ ಸುಮಾರು ಶೇಕಡ ನಾಲ್ಕು ಮಂದಿ ಹಾಗೂ ವಯಸ್ಕ ಮಹಿಳೆಯರಲ್ಲಿ ಸುಮಾರು ಶೇ. ಒಂಬತ್ತು ಮಂದಿ ಗೊರಕೆ ಹೊಡೆಯುತ್ತಾರೆಂದು ತಿಳಿದುಬಂದಿದೆ.

ಗೊರಕೆಹೊಡೆಯುವವರಿಗೆ ಉಸಿರಾಟದ ತೊಂದರೆ ಸಾಮಾನ್ಯ. ಗೊರಕೆಯ ಪರಿಣಾಮವಾಗಿ ಗೊರಕೆಹೊಡೆಯುವ ವ್ಯಕ್ತಿ ಮೇಲುಸಿರುಬಿಡುತ್ತಾನೆ; ಆಗಾಗ ಎಚ್ಚರಗೊಳ್ಳುತ್ತಾನೆ. ಕೆಲವರಂತೂ ರಾತ್ರಿ ಕಳೆಯುವುದರೊಳಗೆ, ತಮಗರಿವಿಲ್ಲದಂತೆ ನೂರಾರು ಸಲ ಎಚ್ಚರಗೊಳ್ಳುತ್ತಾರೆ. ಅಖಂಡ ನಿದ್ರೆ ಅವರಿಗೆ ಸಾಧ್ಯವಾಗುವುದಿಲ್ಲ. ಇಂಥ ನಿದ್ರಾಭಂಗದ ಪರಿಣಾಮವಾಗಿ ದಣಿವುಂಟಾಗುತ್ತದೆ. ಇಂಥ ಬಳಲಿಕೆಯಿಂದ ನರಳುವ ವ್ಯಕ್ತಿಯನ್ನು ನಿದ್ರಾ ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಿ ಅವನಿಗೆ ಸೂಕ್ತ ವೈದ್ಯಕೀಯ ಸಲಹೆ ನೀಡಲಾಗುತ್ತದೆ. ಸಾಮಾನ್ಯವಾಗಿ ಇಂಥ ವ್ಯಕ್ತಿಗಳು ಬೊಜ್ಜು ಕರಗಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಸಮಸ್ಯೆ ತೀವ್ರವಾಗಿದ್ದಾಗ ಮಾತ್ರ ಔಷಧ ಸೇವನೆ, ಅಲ್ಲದೆ ಶಸ್ತ್ರಚಿಕಿತ್ಸೆ ಕೂಡ. ಅಗತ್ಯವೆನಿಸಬಹುದು.

೫) ಖಿನ್ನತೆ

ಬಹಳಷ್ಟು ಸಂದರ್ಭಗಳಲ್ಲಿ ಮಾನಸಿಕ ಖಿನ್ನತೆಯೇ ವ್ಯಕ್ತಿಯ ಅತಿ ಬಳಲಿಕೆಗೆ ಕಾರಣವಾಗುತ್ತದೆ ಎಂಬುದು ವೈದ್ಯರ ಅಭಿಪ್ರಾಯ. ಈ ಸಮಸ್ಯೆ ಗಂಭೀರವಾಗಿದ್ದಾಗ್ಯೂ ಇದಕ್ಕೆ ಚಿಕಿತ್ಸೆ ಸುಲಭಸಾಧ್ಯ. ಸಾಮಾನ್ಯವಾಗಿ ತಮ್ಮ ಜೀವನದ ಒಂದಲ್ಲ ಒಂದು ಅಪ್ರಿಯ ಘಟನೆಗಳಿಂದಾಗಿ, ಮಹಿಳೆಯರಲ್ಲಿ ಸುಮಾರು ಶೇಕಡ ೨೪ ಮಂದಿ ಹಾಗೂ ಪುರುಷರಲ್ಲಿ ಶೇಕಡ ೧೫ ಮಂದಿ ಮಾನಸಿಕ ವಿಷಣ್ಣತೆಗೆ ಒಳಗಾಗುತ್ತಾರೆ. ಇಂಥವರು ಗಾಬರಿಯಾಗಿ ಮನೋರೋಗ ಚಿಕಿತ್ಸಕರಲ್ಲಿಗೆ ಧಾವಿಸಬೇಕಾಗಿಲ್ಲ. ತಾವು

ಸಂತೋಷಪಡೆಯಬಲ್ಲ ಕಾರ್ಯಚಟುವಟಿಕೆಗಳಲ್ಲಿ ಸದಾ ತೊಡಗಿರಲು ಪ್ರಯತ್ನಿಸಿದರೆ ಅಷ್ಟೇ ಸಾಕು. ಮಾನಸಿಕ ಖಿನ್ನತೆಯಿಂದಾಗಿ ಉಂಟಾಗುವ ದಣಿವು, ರೋಗ-ರುಜಿನುಗಳಿಂದ ಉಂಟಾಗುವ ಬಳಲಿಕೆಯಂತೆ, ಶಾಶ್ವತವಾಗಿರುವುದಿಲ್ಲ. ಬದಲಾಗಿ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುತ್ತದೆ, ಅಷ್ಟೆ. ಮಾನಸಿಕ ಖಿನ್ನತೆಯಿಂದ ವ್ಯಕ್ತಿಗೆ ಆಯಾಸವೆನಿಸುವುದಷ್ಟೇ ಅಲ್ಲದೆ, ಮನಸ್ಸನ್ನು ಯಾವುದಾದರೊಂದು ಕೆಲಸದಲ್ಲಿ ಕೇಂದ್ರೀಕರಿಸಲು ಅವನಿಗೆ ಸಾಧ್ಯವಾಗುವುದಿಲ್ಲ; ಆವನು ನೆನಪಿನ ಶಕ್ತಿ ಕಳೆದುಕೊಳ್ಳುತ್ತಾನೆ ಹಾಗೂ ಸಕಾಲಿಕ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲನಾಗುತ್ತಾನೆ.

ತೀವ್ರ ಮಾನಸಿಕ ವಿಷಣ್ಣತೆಯಿಂದ ಬಳಲುವವರು ಮನೋರೋಗ ಚಿಕಿತ್ಸೆ ಪಡೆಯುವುದು ಅಗತ್ಯ. ಆದರೆ ವೈದ್ಯರು ಸೂಚಿಸುವ ಖಿನ್ನತೆ-ಶಾಮಕ ಔಷಧಗಳ ಸೇವನೆಯಿಂದ ವ್ಯಕ್ತಿ ಮಂಪರು-ತೂಕಡಿಕೆಗಳಿಗೆ ಒಳಗಾಗುವ ಅಪಾಯವೂ ಇಲ್ಲದೆ ಇಲ್ಲ.

೬) ಥೈರಾಯ್ಡ್ ಅಸಮತೋಲನ

ಸಾಕಷ್ಟು ದೀರ್ಘಕಾಲ ನಿದ್ರೆ ಮಾಡಿದರೂ, ಆಗಾಗ ವಿಶ್ರಾಂತಿ ತೆಗೆದುಕೊಂಡರೂ ನಿಮ್ಮ ಬಳಲಿಕೆ ದೂರವಾಗುವುದಿಲ್ಲವೆ? ಹಾಗಿದ್ದರೆ ನಿಮ್ಮ ಸಮಸ್ಯೆ ಥೈರಾಯ್ಡ್ ಗ್ರಂಥಿಗೆ ಸಂಬಂಧಿಸಿದ್ದಾಗಿರುತ್ತದೆ ಎನ್ನುತ್ತಾರೆ. 'ಥೈರಾಯ್ಡ್ ಸೊಸೈಟಿ ಫಾರ್ ಎಜುಕೇಷನ್ ಅಂಡ್ ರೀಸರ್ಚ್' ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಶೆಲ್ಡನ್ ರುಬೆನ್‌ಫೆಲ್ಡ್. ಕೊರಳ ಭಾಗದಲ್ಲಿರುವ ಥೈರಾಯ್ಡ್ ಗ್ರಂಥಿ, ಎಷ್ಟು ವೇಗವಾಗಿ ಕೆಲಸ ಮಾಡಬೇಕೆಂದು ನಿಮ್ಮ ಶರೀರದ ಜೀವಕಣಗಳಿಗೆ ನಿರ್ದೇಶನ ನೀಡುವ ಹಾರ್ಮೋನ್‌ಗಳನ್ನು ಉತ್ಪಾದಿಸುತ್ತದೆ. ಈ ಗ್ರಂಥಿ, ಅಗತ್ಯ ಪ್ರಮಾಣಕ್ಕಿಂತ ಕಡಿಮೆ ಥೈರಾಯ್ಡ್ ಹಾರ್ಮೋನ್ ಉತ್ಪಾದಿಸಿದ್ದೇ ಆದರೆ, ಜೀವದ್ರವ್ಯ ಕೊರತೆಯಿಂದಾಗಿ ವ್ಯಕ್ತಿಗೆ ಬಳಲಿಕೆಯುಂಟಾಗುತ್ತದೆ. ಪರಿಣಾಮವಾಗಿ ಹೃದಯದ ಬಡಿತದ ವೇಗ ಕುಗ್ಗಬಹುದು; ಮಲಬದ್ಧತೆಯ ಸಮಸ್ಯೆ ತಲೆದೋರಬಹುದು; ಸ್ನಾಯು ಸೆಡೆತದ ಅನುಭವವಾಗಬಹುದು; ಚರ್ಮ ಒಣಗಬಹುದು; ಸ್ವರ ಒಡೆದುಹೋಗಬಹುದು ಹಾಗೂ ಯಾವುದೇ ಸ್ಪಷ್ಟ ಕಾರಣವಿಲ್ಲದೆ ಶರೀರದ ತೂಕ ಹೆಚ್ಚಿ ವ್ಯಕ್ತಿ ಸ್ಥೂಲಕಾಯನಾಗಬಹುದು. 'ಹೈಪೋ-ಥೈರಾಯ್ಡಿಸಮ್' ಎಂಬ ಹೆಸರಿನ ಈ ವಿಶಿಷ್ಟ ಬಾಧೆಗೆ ಒಳಗಾಗುವವರಲ್ಲಿ ಹೆಚ್ಚಿನವರು ಐವತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಹಿಳೆಯರೇ ಆಗಿರುತ್ತಾರೆ.

ವಿಚಿತ್ರವೆಂದರೆ, ಥೈರಾಯ್ಡ್ ಹಾರ್ಮೋನ್‌ಗಳ ಪ್ರಮಾಣ ಅತ್ಯಧಿಕವಾದಾಗಲೂ–'ಹೈಪರ್‌ಥೈರಾಯ್ಡಿಸಮ್'—ಹಾರ್ಮೋನ್‌ಗಳ ಆಧಿಕ್ಯ ಸ್ನಾಯುಗಳನ್ನು ದುರ್ಬಲಗೊಳಿಸುವುದರಿಂದ, ಅತಿ ದಣಿವು ಕಾಣಿಸಿಕೊಳ್ಳುತ್ತದೆ. ಇವರ ಇತರ ದುಷ್ಪರಿಣಾಮಗಳೇ, ತೂಕದಲ್ಲಿ ಇಳಿಕೆ, ನಿರಂತರ ಬೆವರುವಿಕೆ, ಹೃದಯದ ಬಡಿತ ವೇಗವಾಗುವುದು ಇತ್ಯಾದಿ. ಹೈಪರ್ ಥೈರಾಯ್ಡಿಸಮ್ ಯಾವುದೇ ವಯಸ್ಸಿನಲ್ಲಿ ಉಂಟಾಗಬಹುದು. ವಿಶೇಷ ರಕ್ತಪರೀಕ್ಷೆಯ ಮೂಲಕವೇ ಅರಿವಿಗೆ ಬರುವ ಈ 'ಹೈಪೋ ಥೈರಾಯ್ಡಿಸಮ್' ಮತ್ತು 'ಹೈಪರ್

ಥೈರಾಯ್ಡಿಸಂ' ಇವೆರಡರ ನಿವಾರಣೆಗೂ ಔಷಧಸೇವನೆ ಅಗತ್ಯವಾಗುತ್ತದೆ.

೨) ರೋಗ ನಿವಾರಣಾನಂತರದ ದಣಿವು

ರೋಗಿಗಳು ಗುಣಮುಖರಾದ ತರುವಾಯ ಕೂಡ, ಸುಸ್ತು ಆಯಾಸದ ಅನುಭವವುಂಟಾಗುವುದುಂಟು. ಶರೀರದ ಸ್ವಯಂರಕ್ಷಣಾ ವ್ಯವಸ್ಥೆ ಶಿಥಿಲಗೊಳ್ಳುವುದೇ ಇದಕ್ಕೆ ಕಾರಣ. ಸಾಮಾನ್ಯವಾಗಿ ಇಂಥ ಬಳಲಿಕೆ ರೋಗದಿಂದ ಗುಣಮುಖರಾದ ಒಂದು ತಿಂಗಳಿನಷ್ಟು ಕಾಲ ಮಾತ್ರ ಇರುತ್ತದೆ. ಅನಂತರ ಕ್ರಮೇಣ ಮಾಯವಾಗುತ್ತದೆ. ಆದ್ದರಿಂದ ಜ್ವರ ಮತ್ತಿತರ ಕಾಯಿಲೆಗಳಿಂದ ಗುಣಹೊಂದಿದ ತತ್‌ಕ್ಷಣ ಮಾಮೂಲಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಬೇಡಿ. ಸ್ವಲ್ಪ ಕಾಲ ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

ಮೇಲೆ ವಿವರಿಸಲಾದ ಯಾವುದೇ ಕಾರಣಗಳಿಂದಾಗಿ ಉಂಟಾಗುವ ದಣಿವನ್ನು ಎಂದೂ ನಿರ್ಲಕ್ಷಿಸಬೇಡಿ. 'ಸ್ವಲ್ಪ ಸುಸ್ತು, ಅಷ್ಟೆ— ವಿಶ್ರಾಂತಿ ತೆಗೆದುಕೊಂಡರೆ ಸರಿ' ಎಂದು ಲಘುವಾಗಿ ತೆಗೆದುಕೊಳ್ಳಬೇಡಿ. ಅತಿ ಬಳಲಿಕೆಯಿಂದ ಮಾರಕ ಪರಿಣಾಮಗಳೂ ಉಂಟಾಗಬಹುದು. ತಿಂಗಳುಗಳ ಕಾಲ ಮುಂದುವರಿಯುವ ದಣಿವು, ಸ್ನಾಯುಗಳ ನೋವು, ಗಂಟಲು ಹುಣ್ಣು, ತಲೆನೋವು ಮೊದಲಾದ ಅನಾರೋಗ್ಯಗಳಿಗೆ ಕಾರಣವಾಗುತ್ತದೆ.

ಇಂಥ ಮಾರಕ ದಣಿವಿಗೆ ವಾಸ್ತವ ಕಾರಣವೇನೆಂಬುದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಬೇರೆಲ್ಲ ಅನಾರೋಗ್ಯ ಸಮಸ್ಯೆಗಳಿಗೆ ಸೂಕ್ತ ವೈದ್ಯಕೀಯ ಪರಿಹಾರ ದೊರೆತ ಅನಂತರವೂ ದೀರ್ಘಕಾಲ ಉಳಿಯುವ ಇಂಥ ಬಳಲಿಕೆಯ ನಿವಾರಣೆಗೆ, ಸಾಮಾನ್ಯವಾಗಿ ವೈದ್ಯರು ಅಲ್ಪ ಪ್ರಮಾಣದ ಸೌಮ್ಯ ನೋವು ನಿವಾರಕಗಳನ್ನು ಖಿನ್ನತೆ ಶಾಮಕಗಳನ್ನು ಸೂಚಿಸುತ್ತಾರೆ ಹಾಗೂ ಲಘುವ್ಯಾಯಾಮಗಳನ್ನು ಮಾಡುವಂತೆ ಸಲಹೆ ನೀಡುತ್ತಾರೆ.



ಕುರಿಯು ತೋಳವನ್ನು ನಂಬುವುದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವುದೇ ಲೇಸು.

—ಗಾಂಧೀಜಿ

ಕುಂಬಾರ ಬದಲೂ

ಕೆ. ಶಾಂತಾಮಣಿ

ಬದಲೂ ಒರಟಾದ ಮಡಕೆಗಳನ್ನು ನಿರ್ಮಿಸುವಂತೆಯೇ ಅಷ್ಟಾವಕ್ರವಾದ ಮಕ್ಕಳ ಜನ್ಮದಾತನೂ ಆಗಿದ್ದನು. ನಿರ್ಜೀವ ಮಣ್ಣಿನ ಮಡಕೆಗಳ ಜೀವಂತ ಸೌಂದರ್ಯವಾಗಲೀ ಸಜೀವ ರಕ್ತ ಮಾಂಸದ ಆ ಮಕ್ಕಳ ನಿರ್ಜೀವ ಕುರೂಪವಾಗಲೀ ಅವನ ಸಮಾಧಿಗೆ ಭಂಗ ತರುವ ಸಾಮರ್ಥ್ಯವನ್ನು ಪಡೆದಿರಲಿಲ್ಲ.

ನಾನು ನೋಡಿದಾಗಲೆಲ್ಲ ಅವನು ಒಂದು ಕಡೆ ಹರಿದ, ಮುರಿದ ಪೂರ್ಣವಾದ ಮಡಕೆಗಳು, ಮತ್ತೊಂದು ಕಡೆ ದುರ್ಬಲವಾದ ಕೊಳಕು ಮುಖದ ಬೆತ್ತಲೆ ಮಕ್ಕಳುಗಳ ಮಧ್ಯೆಯೇ ಇರುತ್ತಿದ್ದ. ಮಣ್ಣಿನ ಮಡಕೆಗಳಲ್ಲಿ ಕೆಲವು ಮಾಡುವಾಗ, ಕೆಲವು ಒಣಗಿಸುವಾಗ ಮುರಿದುಹೋಗುವಂತೆ ಅವನ ಮಕ್ಕಳೂ ಕೂಡ ಕೆಲವು ಹುಟ್ಟುತ್ತಿದ್ದ ಹಾಗೇ, ಕೆಲವು ತಪ್ಪು ಹೆಜ್ಜೆ ಇಡುವಾಗ, ಕೆಲವು ತಂದೆ-ತಾಯಿಗಳಿಗೆ ಸಣ್ಣ ಪುಟ್ಟ ಕೆಲಸ ಮಾಡುವಾಗ ಸತ್ತು ಹೋಗುತ್ತಿದ್ದವು. ಆದರೆ ಬದಲೂ ಮಕ್ಕಳ ಹುಟ್ಟು-ಸಾವುಗಳ ಮಧ್ಯದಲ್ಲೂ ನಿರ್ವಿಕಾರನಾಗಿದ್ದ. ಪರಸ್ಪರ ವಿರೋಧಿ ರೇಖೆಗಳನ್ನೊಳಗೊಂಡ ಬದಲೂವಿನ ಚಿತ್ರವನ್ನು ಚಿತ್ರಿಸುವುದು ಯಾವ ಚಿತ್ರಕಾರನಿಗೂ ಸಾಧ್ಯವಾಗುವಂತಿರಲಿಲ್ಲ.

ಅವನ ಮುಖ ಸೌಮ್ಯವಾಗಿದ್ದರೂ, ಗುಳಿಬಿದ್ದ ಕೆನ್ನೆಗಳೂ ಉಬ್ಬಿದ ಮೂಳೆಗಳೂ ಅವನನ್ನು 'ಕಂಗಾಲ' ಎಂದು ಹೇಳುತ್ತಿದ್ದವು. ಅವನ ಶರೀರ ಹಿಂದೊಮ್ಮೆ ಸದೃಢಕಾಯವಾಗಿರಬಹುದು. ಆದರೆ ಬಡತನದ ಬೇಗೆಯಿಂದ ಅವನು ಅಕಾಲ ವೃದ್ಧಾಪ್ಯವನ್ನು ಪಡೆದಿದ್ದ. ಅವನ ಗಂಟಲಿನಿಂದ ಹೊರಡುತ್ತಿದ್ದ ನಡುಗುವ ಗೊಗ್ಗರು ದನಿ ಕೊಳಲಿನಿಂದ ಹೊರಡುವ ಶಂಖನಾದದಂತೆ ಕೇಳಿಸುತ್ತಿತ್ತು. ಅವನು ನನ್ನಂಥ ನಾಗರಿಕನಿಂದ ದೂರವಾಗಿದ್ದು ಮಿತಭಾಷಿಯಾಗಿದ್ದ.

ಎಂದಾದರೊಮ್ಮೆ ನಾನು ಅವನು ಮಡಕೆ ಮಾಡುವಾಗ ಬೆರಳುಗಳ ಚಮತ್ಕಾರವನ್ನು ನೋಡಲು ನಿಂತಾಗ ಅವನು ತಬ್ಬಿಬ್ಬಾಗುತ್ತಿದ್ದ....ತನ್ನ ಗಾಬರಿಯನ್ನು ಮುಚ್ಚಿಡಲು ಕೆಮ್ಮುತ್ತಿದ್ದ. ಹರಿದ-ಮುರಿದ ಮೂರು ಕಾಲಿನ ಮಂಚವನ್ನು ಕೋಣೆಯಿಂದ

ಆಧಾರ: ಶ್ರೀಮತಿ ಮಹಾದೇವಿ ವರ್ಮ ಅವರ 'ಬದಲೂ ಕುಮ್ಹಾರ' ಎಂಬ ಹಿಂದಿ ಕಥೆಯ ಅನುವಾದ.

ಹೊರಗೆ ತರಲು ಸ್ಪರ್ಧೆ ನಡೆಸುತ್ತಿದ್ದ ಮಕ್ಕಳನ್ನು ಕಂಡ ಕೂಡಲೇ ನಾನು ಅಲ್ಲಿಂದ ಜಾರಿಕೊಳ್ಳುತ್ತಿದ್ದೆ. ನಾನು ಕುಳಿತರೆ ಆ ಮಂಚದ ಸ್ಥಿತಿ ಇನ್ನೂ ಹದಗೆಡುತ್ತದೆ ಜೊತೆಗೆ ಮಡಕೆಗಳಿಗೂ ಅಪಾಯ ಒದಗುತ್ತಿತ್ತು.

ಬದಲೂವಿನ ಮನೆ ನಾನು ಓಡಾಡುವ ದಾರಿಯಲ್ಲಿತ್ತು. ಒಮ್ಮೊಮ್ಮೆ ಅವನ ಹೆಂಡತಿ ರಾಧಿಕಾ ಹೊರಗೆ ಕೆಲಸ ಮಾಡುತ್ತಿದ್ದಾಗ ನಾನು ಅನಿವಾರ್ಯವಾಗಿ ನಿಲ್ಲಬೇಕಾಗುತ್ತಿತ್ತು. ತನ್ನ ಗೋಳನ್ನು ಹೇಳಿಕೊಳ್ಳಲು ಅವಳು ತವಕಿಸುತ್ತಿದ್ದಳು. ಅವಳ ಕಣ್ಣು, ಬಾಯಿ, ಕೈಕಾಲು ತನ್ನ ಕತೆ ಹೇಳಲು ಆತುರಪಡುತ್ತಿದ್ದವು. ಅವಳ ಕರುಣ-ಕತೆ ನನ್ನ ಹೃದಯ ಹಿಂಡುತ್ತಿತ್ತು.

ರಾಧಿಕಾ ದೈನ್ಯದ ಮೂರ್ತಿಯಾಗಿದ್ದಳು. ಅವಳ ತಲೆಗೂದಲು ಹಬ್ಬ-ಹುಣ್ಣಿಮೆಗಳಲ್ಲಿ ಎಣ್ಣೆನೀರು ಕಾಣುವುದಿರಲಿ, ಕೊಬ್ಬರಿ ಎಣ್ಣೆಯನ್ನು ಕಂಡಿರದೆ ಗಂಟು ಕಟ್ಟಿಕೊಂಡಿದ್ದವು. ಅವಳು ತನ್ನ ಸೆರಗನ್ನು ಎಳೆದುಕೊಂಡಾಗಲೆಲ್ಲ ಅದು ಹರಿದು ಕೈಗೇ ಬರುತ್ತಿತ್ತು. ದುಃಖ ಒಂದು ರೀತಿಯಲ್ಲಿ ಶೃಂಗಾರವೂ ಆಗಿಬಿಡುತ್ತದೆ. ನೋಡುವವರನ್ನು ಆಕರ್ಷಿಸುತ್ತದೆ. ಅಂತೆಯೇ ರಾಧಿಕಾಳ ಅಗಲವಾದ ಮುಖ, ತೆಳುವಾದ ಮೂಗು, ಪುಟ್ಟ ಬಾಯಿ ಆಕರ್ಷಕವಾಗಿದ್ದವು. ಕಣ್ಣಿನ ಸುತ್ತಲೂ ಹರಡಿದ ಕಪ್ಪು ಅವಳ ಕಣ್ಣನ್ನು ಕಣ್ಣು-ಕಪ್ಪಿನಲ್ಲಿ ಅದುಮಿಬಿಟ್ಟಂತೆ ಕಾಣಿಸುತ್ತಿತ್ತು. ಅವಳ ಸುಕ್ಕುಗಟ್ಟಿದ ತುಟಿಗಳು ಕಹಿ ಔಷಧಿಯನ್ನು ಕುಡಿದಂತೆ ಕಾಣಿಸುತ್ತಿದ್ದವು. ಈ ಎಲ್ಲ ವಿಷಮತೆಗಳ ಮಧ್ಯದಲ್ಲೂ ಅವಳ ದುಃಖತಪ್ತ ಹೃದಯದಿಂದ ಉದ್ಭವಿಸಿದ ಒಂದು ಸಾಮಂಜಸ್ಯಪೂರ್ಣ ಆಕರ್ಷಣೆಯು ಕಂಡುಬರುತ್ತಿತ್ತು. ಸವೆದುಹೋದ ಹಿತ್ತಾಳೆ ಕಡಗದ ಜೊತೆಗೆ ರೂಪ-ರೇಖೆಗಳನ್ನು ಕಳೆದುಕೊಂಡ ಅರಗಿನ ಬಳೆಗಳನ್ನು ಬಿಟ್ಟರೆ ಅವಳಿಗೆ ಇನ್ನು ಯಾವ ಅಲಂಕಾರದ ಪರಿಚಯವೂ ಇರಲಿಲ್ಲ. ಆದರೂ ಕೂಡ ಅವಳು ಇದರ ಬಗ್ಗೆ ಚಿಂತಿಸಿದಂತೆ ಕಂಡುಬರುತ್ತಿರಲಿಲ್ಲ. ಸದೃಢವಾಗಿದ್ದ ಅವಳ ಶರೀರ ಮಕ್ಕಳ ಅಖಂಡ ಶೃಂಖಲತೆಯಿಂದಾಗಿ ಒಂದು ಎಲುಬಿನ ಹಂದರವಾಗಿ ಉಳಿದು ಅದು ನಡೆದಾಡುವುದನ್ನು ನೋಡಿದಾಗ ನನಗೆ ಆಶ್ಚರ್ಯವಾಗುತ್ತಿತ್ತು.

ಇಂಥ ವರ್ಗದ ಮಹಿಳೆಯರಲ್ಲಿ ಕಂಡುಬರುವಂತಹ ಒಂದು ತರಹದ ಕಠೋರತೆ, ಉದ್ಧಟತನ ಇವಳಲ್ಲಿ ಕಂಡುಬರುತ್ತಿರಲಿಲ್ಲ. ಅದರಿಂದಲೇ ನನ್ನಲ್ಲಿ ಅವಳ ಬಗೆಗಿದ್ದ ಉದಾಸೀನತೆಯೂ ಕುತೂಹಲವಾಗಿ, ಕುತೂಹಲವು ಗೌರವದಲ್ಲಿ ರೂಪಾಂತರವಾಗುವುದು ಅನಿವಾರ್ಯವಾಯಿತು. ಬದಲೂವಿನ ಬಗೆಗೆ ಅವಳು ಗಂಭೀರ, ಶಾಂತ ಸ್ನೇಹಭಾವವನ್ನು ಹೊಂದಿದ್ದಳು. ಅವಳು ಎಂದೂ ಮಕ್ಕಳ, ಮನೆಯ ಬಗೆಗಾಗಲಿ ಅಥವಾ ತನ್ನ ಬಗೆಗಾಗಲೀ ಚಿಂತಿಸಿದ್ದನ್ನು ನಾನು ಕಂಡಿಲ್ಲ. ರಾಧಿಕಾಳ ಬಾಯಿಂದ ಎಂದೂ ತನ್ನ ನಿರ್ವಿಕಾರ ಪತಿಯ ನಿಂದನೆಯನ್ನು ಕೇಳುವ ಸೌಭಾಗ್ಯವು ಯಾರಿಗೂ ದೊರೆತಿರಲಿಲ್ಲ. ರಾಧಿಕಾ ತನ್ನ ಗಂಡ ಕುಂಬಾರ–ಶಿರೋಮಣಿ, ಒಳ್ಳೆಯ ಕಲೆಗಾರ, ಜನ ಅವನ ಕಲೆಯನ್ನು ತಿಳಿಯಲು ಅಸಮರ್ಥರು ಎಂದೇ ನಂಬುತ್ತಿದ್ದಳು.

ಬೆಳಿಗ್ಗೆ ಎದ್ದು ಜೋಳ-ಕಡ್ಲೆ ಬೀಸುವುದರ ಮೂಲಕ ತನ್ನ ಕಠೋರ ಕರ್ತವ್ಯವನ್ನು ಪ್ರಾರಂಭಿಸುತ್ತಿದ್ದಳು. ಅದು ಸಂಜೆ ಮಸುಕು ಬೆಳಕಿನಲ್ಲಿ ಅಥವಾ ನಿದ್ದೆಗಣ್ಣಿನ ಮಕ್ಕಳಿಗೆ ಬೆಳಗಿನ ರೊಟ್ಟಿಯನ್ನು ಹಂಚಿದಾಗಲೇ ಮುಗಿಯುತ್ತಿದ್ದುದು.

ಜೀವಂತವಾಗಿದ್ದ ಮಕ್ಕಳು ನಾಲ್ಕು. ಆದರೆ ಅವಳು ಹೇಳುವಾಗ ಅಳಿದುಹೋದ ಮಕ್ಕಳನ್ನೂ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತಿದ್ದಳು. ಅಳಿದ ಮಕ್ಕಳು ಉಳಿದ ಮಕ್ಕಳ ಜೊತೆಗೆ ಎಷ್ಟರ ಮಟ್ಟಿಗೆ ಸೇರಿಹೋಗಿತ್ತೆಂದರೆ ಕೇಳುವವರು ಅವು ಜೀವಂತವಾಗಿವೆ ಎಂದೇ ಭಾವಿಸುತ್ತಿದ್ದರು. ಉಳಿದವಕ್ಕೂ-ಅಳಿದವಕ್ಕೂ ವ್ಯತ್ಯಾಸವಿಷ್ಟೆ— ಅಳಿದವು ಕಥಾನಾಯಕರಂತೆ ಕೇಳಲು ಯೋಗ್ಯವಾಗಿದ್ದರೆ ಉಳಿದವು ತಮ್ಮ ಜೀವಂತ ಕಾಲದಲ್ಲಿ ತಮ್ಮ ಕಲೆಗಾರ ತಂದೆ —ಕೂಲಿಯಾಳು ತಾಯಿಗೆ ಸಹಾಯ ಮಾಡುತ್ತಲೇ ಸತ್ತು ಹೋಗುತ್ತಿದ್ದವು. ಮಣ್ಣು ಅಗೆಯುವುದರಿಂದ ಹಿಡಿದು ಸಂತೆಗೆ ಮಡಕೆ ತಲುಪಿಸುವವರೆಗೂ ತಮ್ಮ ನಗ್ನ ದುರ್ಬಲ ಶರೀರವನ್ನು ಉಪಯೋಗಿಸಿ ಪ್ರಾಣವು—ಶರೀರದಿಂದ ವಿಚ್ಛೇದನ ಹೊಂದಿಲ್ಲವೆಂಬಂತೆ ನಟನೆ ಮಾಡುತ್ತಿದ್ದರು. ಎಲ್ಲರಿಗಿಂತ ಚಿಕ್ಕವ ನಕ್ಕೂ ತನ್ನ ಹೊಟ್ಟೆಗಿಂತಲೂ ಹತ್ತರಷ್ಟು ದೊಡ್ಡದಾದ ಮಡಕೆಯನ್ನು ತಲೆಯ ಮೇಲೆ ಹೊತ್ತು ತನ್ನ ದುರ್ಬಲವಾದ ಕಾಲುಗಳಿಂದ ತೂರಾಡುತ್ತ ಬರುವುದನ್ನು ನೋಡಿದಾಗ ನಗಬೇಕೋ ಅಳಬೇಕೋ ತಿಳಿಯುತ್ತಿರಲಿಲ್ಲ.

ತಮ್ಮ ಕುಲಕಸುಬಿನಿಂದ ಹೊಟ್ಟೆಯ ಸಮಸ್ಯೆ ಬಗೆ ಹರಿಯದಾದಾಗ ರಾಧಿಕಾ ಅಕ್ಕ-ಪಕ್ಕದ ಹೊಲಗಳಲ್ಲಿ ಕೆಲಸ ಮಾಡಲಾರಂಭಿಸಿದಳು. ಒಮ್ಮೊಮ್ಮೆ ಬದಲೂ —ಸಂತೆಯಿಂದ, ರಾಧಿಕಾ ಹೊಲದಿಂದ ಬರುವುದು ತಡವಾದಾಗ ಈ ಸಣ್ಣ ಜೀವಿಗಳು ಜಗುಲಿಯ ಮೇಲೆ ಅಥವಾ ಅದರ ಕೆಳಗೆ ಧೂಳಿನ ಮೇಲೆ ಮಲಗಿಬಿಟ್ಟಿರುತ್ತಿದ್ದವು. ರಾಧಿಕಾ ಬಂದವಳೇ ಹಳೆಯ ಕೊಳಕು ಪಂಚೆಯನ್ನು ಹಾಸಿ ಸಾಲಾಗಿ ಮಲಗಿಸುತ್ತಿದ್ದಳು. ಇನ್ನು ಎಚ್ಚರವಾಗಿರುವವರಿಗೆ ನೆಲುವಿನ ಮೇಲಿದ್ದ ಒರಟುರೊಟ್ಟಿಯ ತುಂಡನ್ನು ಕೊಡುತ್ತಿದ್ದಳು. ಎಚ್ಚರವಾಗದವರನ್ನು ಪ್ರೀತಿಯಿಂದ ತಟ್ಟಿ ಮಲಗಿಸುತ್ತಿದ್ದಳು. ಬದಲೂ ಕೂಡ ಈ ಪ್ರಸಾದಕ್ಕೆ ಅರ್ಹನಾಗಿದ್ದ ಆದರೆ ಎಂದಾದರೂ ಅನ್ನಕೋಶದ ಅನ್ನಪೂರ್ಣೆಗೆ ಏಕಾದಶೀವ್ರತವನ್ನು ಮಾಡಬೇಕಾಗುತ್ತಿತ್ತು.

ಇಬ್ಬರೂ ವಿಚಿತ್ರವಾಗಿದ್ದರು, ಗಂಡ ಹೊಟ್ಟೆಯನ್ನು ತುಂಬಿಸಲಾರದವನಾಗಿದ್ದ, ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸದವನಾಗಿದ್ದ ಆದರೂ ಹೆಂಡತಿಗೆ ಗಂಡನ ಈ ದುರ್ಗುಣಗಳು ಕಾಣಿಸುತ್ತಿರಲಿಲ್ಲ. ಅಸಮಾಧಾನಕ್ಕೆ ಅಲ್ಲಿ ಕಾರಣವೇ ಇರಲಿಲ್ಲ.

ರಾಧಿಕಾಳಿಗೆ ಮಕ್ಕಳು ಹುಟ್ಟಿದಾಗ ಯಾವ ಸಂಭ್ರಮವೂ ಇರುತ್ತಿರಲಿಲ್ಲ. ಚಿಕ್ಕ ಮಗು ಲಕ್ಕಿ ಹುಟ್ಟಿದ ಸಂಜೆಯೂ ಕೂಡ ರಾಧಿಕಾ ದೊಡ್ಡ ಕೊಡ ಹೊತ್ತು ತರುತ್ತಿದ್ದುದನ್ನು ನೋಡಿದ್ದೆ. ಕೊಡ ಇಟ್ಟು ಅದೇ ಮೂರು ಕಾಲಿನ ಸಣ್ಣ ಮಂಚ ನನಗಾಗಿ ತಂದಿಟ್ಟಳು, ನಾನು ಬಹಳ ಜೋಪಾನವಾಗಿ ಅದರ ಮೇಲೆ ಕುಳಿತೆ. ರಾಧಿಕಾ ಚಾಕು ತಂದು ಒಂದು ಕಲ್ಲಿನ

ಮೇಲೆ ಚಿಕ್ಕಿ-ಚಿಕ್ಕಿ ಹರಿತ ಮಾಡುತ್ತಿದ್ದಳು. ಈ ರಾತ್ರಿಯಲ್ಲಿ ಇವಕ್ಕೇನು ಕೆಲಸ? ಯಾರ ಕುತ್ತಿಗೆಯನ್ನಾದರೂ ಕತ್ತರಿಸುವೆ ಯೇನು? ಎಂದಾಗ ಸುಮ್ಮನೆ ಮುಗುಳ್ನಕ್ಕಿದ್ದಳು.

ಮರುದಿನ ಸೋಮವತಿ ಅಮಾವಾಸ್ಯೆಯಾದ ಕಾರಣ ಅವರ ಮನೆಗೆ ಹೋದೆ. ಬದಲು ಮಾಮೂಲಿನಂತೆ ಚಕ್ರದ ಮುಂದಿದ್ದ. ಮಕ್ಕಳು ಮುಚ್ಚಿದ ಬಾಗಿಲ ಮುಂದೆ ಗಲಾಟೆ ಮಾಡುತ್ತಿದ್ದರು. ಅವರಲ್ಲಿ ಮಾತುಗಾರ್ತಿಯಾದ ದುಬಿಯಾಳನ್ನು "ನಿಮ್ಮಮ್ಮ ಎಲ್ಲಿ? ಎಂದು ಕೇಳಿದಾಗ ಅವಳು ಎಲ್ಲ ಕತೆ ಹೇಳಿದಳು" ನಮಗೆ ಹೊಸ ತಮ್ಮ ಹುಟ್ಟಿದ್ದಾನೆ. ಅಮ್ಮ ಸೂಲಗಿತ್ತಿ ಒಂದು ರೂಪಾಯಿ ಕೇಳು ತ್ತಾಳೆಂದು ಅವಳನ್ನು ಕರೆಯಲಿಲ್ಲ ತಾನೇ ಮಗುವಿನ ಹೊಕ್ಕಳು ಕತ್ತರಿಸಿದಳು. ಅಪ್ಪ ಜೋಳದ ರೊಟ್ಟಿ ಕೊಟ್ಟಿದ್ದಾನೆ. ನಾನು ಒಳಗೆ ಇಣುಕಿದೆ. ಆ ಕತ್ತಲಲ್ಲಿ ರಾಧಿಕಾ ಕೊಳಕು ಬಟ್ಟೆ ಮಧ್ಯದಲ್ಲಿ ಮಲಗಿದ್ದಳು. ಛಾವಣಿಯಂತೂ ಕುಸಿದು ಬೀಳುವುದರಲ್ಲಿತ್ತು, ಮನೆಯಲ್ಲೆಲ್ಲಾ ತಂಬಾಕು ಹೊಗೆಯ ವಾಸನೆ ವಿಚಿತ್ರವಾಗಿತ್ತು. ಒಲೆಯ ಹತ್ತಿರದ ಮಡಕೆ, ಹೊಳೆಯುವ ಲೋಟ-ತಟ್ಟೆಗಳು ಜೈಲಿನ ಕೊಠಡಿಯನ್ನು ನೆನಪಿಗೆ ತರುತ್ತಿದ್ದವು. ಗೂಡಿನಲ್ಲಿ ಎಂದೆಂದಿನಿಂದಲೂ ಉದಾಸೀನಕ್ಕೆ ಒಳಗಾಗಿದ್ದ ಹಣತೆ ಮರ್ಯಾದೆ ಮುಚ್ಚಲು ಒಂದು ಹನಿ ಎಣ್ಣೆ. ಅರ್ಧಬತ್ತಿ ಉಳಿಸಿಕೊಂಡಿತ್ತು. ಇಂಥ ಮನೆಯ ಒಂದು ಮೂಲೆಯಲ್ಲಿ ರಾಧಿಕಾ ನವಜಾತ ಶಿಶುವಿಗೆ ಬಡತನದ ಪರಿಚಯ ಮಾಡಿಕೊಡುತ್ತಿದ್ದಳು. ಕಣ್ಣು ಮುಚ್ಚಿದ ಆ ಮಗು ಆಗ ತಾನೆ ಮೊಟ್ಟೆಯಿಂದ ಹೊರಬಂದ ರೆಕ್ಕೆ ಇಲ್ಲದ ಪಕ್ಷಿಯಂತೆ ಕಾಣಿಸುತ್ತಿತ್ತು. ಹೊಕ್ಕಳಿನ ಹತ್ತಿರ ರಕ್ತ ಬಂದು ಊದಿಕೊಂಡಿತ್ತು. ನೋವಿನಿಂದ ಏಳಲಾಗುತ್ತಿರಲಿಲ್ಲ. ಮಲಗಿಯೇ ಹೊಕ್ಕಳು ಕತ್ತರಿಸಿದ್ದರಿಂದ ಊದಿತ್ತು. ನಾನು ಆಶ್ಚರ್ಯದಿಂದ ಅವಳ ಮಲಿನ ಮುಖದಲ್ಲೂ ಪ್ರಶಾಂತ ಮತ್ತು ಸೌಮ್ಯ ಮುಖಮುದ್ರೆಯನ್ನು ಕಂಡೆ. ನಾನು ಅವಳಿಗಾಗಿ ಹಾಲು ಇತ್ಯಾದಿಗಾಗಿ ಏರ್ಪಾಟು ಮಾಡುವೆನೆಂದಾಗ 'ಎಲ್ಲಿವರೆಗೆ ಮಾಡುವಿರಿ, ಇದು ಇದ್ದದ್ದು' ಎಂಬ ಮುಖಭಾವದಲ್ಲಿ ನನ್ನನ್ನು ನೋಡಿದಳು.

ಬದಲೂವಿಗೆ ತುಪ್ಪ, ಬೆಲ್ಲ ತರಲು ಹೇಳಿದಾಗ ಅವನಿಗೆ ಆಕಾಶವೇ ಕಳಚಿಬಿದ್ದಂತಾಯಿತು. ರಾಧಿಕಾಳಿಗೆ ಬೆಲ್ಲವೆಂದರೆ ವಾಂತಿ ಬರುತ್ತದೆ. ತುಪ್ಪ ಎಂದರೆ ಹೊಟ್ಟೆನೋವು ಬರುತ್ತದೆ. ಅದಕ್ಕೆ ಜೋಳದ ರೊಟ್ಟಿ ಕೊಟ್ಟೆ ಎಂದು ಹೇಳಿದ. ನಾನು ರಾಧಿಕಾಳ ಕಡೆ ನೋಡಿದೆ. ಬದಲೂಗೆ ತರಲಾಗದ ವಸ್ತು ತನಗೆ ಹಾನಿಕಾರಕ ಎಂದು ಅವಳ ಮುಖವೇ ಹೇಳುತಿತ್ತು. ಆದರೂ ಆ ದಿವ್ಯ ಜ್ಞಾನವನ್ನು ಬಚ್ಚಿಟ್ಟುಕೊಂಡು ಎಲ್ಲ ಹೆಂಗಸರೂ ಅದನ್ನು ತಿನ್ನುತ್ತಾರೆ. ನೀನೂ ತಿನ್ನಲೇಬೇಕು ಎಂದೆ. ಆ ಮನೆಯಲ್ಲಿ ಮೃತ್ಯು-ಜನ್ಮ ಎರಡೂ ಗಲಾಟೆ ಇಲ್ಲದೆ ನಡೆದು ಹೋಗುತಿತ್ತು.

ಮುಲಿಯಾಗೆ ಜ್ವರ ಬಂದಾಗಲೂ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದಳು. ಪ್ಲೇಗುಬಂದಾಗ ಅವಳ ಅಣ್ಣ ಹಿಡಿದು ಮಂಚದ ಮೇಲೆ ಮಲಗಿಸಿದ. ಬೇವಿನ ಮರಕ್ಕೆ ನೀರು ಹೊಯ್ಯುವುದು ಇತ್ಯಾದಿ ತನ್ನ ಶಕ್ತಿ

ಒಳಗಿರುವ ಎಲ್ಲ ಕೆಲಸವನ್ನು ಮಾಡಿದಳು. ಆದರೆ ನಾಲ್ಕನೆ ದಿನ ಅವಳು ಪರಂಧಾಮ ತಲುಪಿದಳು. ಅವಳನ್ನು ಕಂಡರೆ ಬದಲೂವಿಗೆ ತುಂಬ ಮಮತೆ. ಯಮುನೆಯಲ್ಲಿ ವಿಸರ್ಜಿಸಿ ಬಂದ ಮೇಲೆ ಆದನಿಗುಂಟಾದ ದುಃಖವನ್ನು ರಾಧಿಕಾ ಕತೆಮಾಡಿ ಹೇಳಿದಳು. ಮೂಢ ನಂಬಿಕೆಯು ಬದಲೂ ಆ ಮಹಾ ತಾಯಿಯೇ ಕನಸಿನಲ್ಲಿ ಬಂದು ಮಗು ವನ್ನು ಕೇಳಿದಳು. ಆ ಮಗುವಿಗೆ ಔಷಧಿ ಮಾಡಿದ್ದರೂ ಅದು ಉಳಿಯುತ್ತಿರಲಿಲ್ಲ. ಆ ಮಹಾತಾಯಿಯೇ ಮಗುವನ್ನು ಕೇಳಿದ ಮೇಲೆ ಆ ಮಗುವಿಗೆ ಆ ಭಾಗ್ಯಕ್ಕಿಂತ ಇನ್ನೇನುಬೇಕು ಎಂದು ಕೇಳುತ್ತಿದ್ದ.

ಒಂದು ಸಲ ನಾನು ರಾಧಿಕಾಳಿಗೆ ಅವಳು ಸುಳ್ಳು ಹೇಳುವುದರ ಬಗೆಗೆ ಸಾರಗರ್ಭಿತ ಭಾಷಣವನ್ನು ಕೊಟ್ಟಾಗ ರಾಧಿಕಾ ಕೊಳಕು ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ ಹೇಳಿದ ವಿವರಣೆ ಇನ್ನೂ ಹೆಚ್ಚು ಸಾರಗರ್ಭಿತವಾಗಿತ್ತು. ಅವಳ ಗಂಡ ತುಂಬ ಮುಗ್ಧ ಅವನ ಹೃದಯ ಎಷ್ಟು ಕೋಮಲ ವೆಂದರೆ ಚಿಕ್ಕಪುಟ್ಟ ವಿಷಯಗಳಿಗೂ ಧೈರ್ಯ ಕಳೆದುಕೊಳ್ಳುತ್ತಾನೆ. ಅದಕ್ಕಾಗಿ ಅವಳ ಸಣ-ಪುಟ್ಟ ದುಃಖಗಳನ್ನು ನುಂಗಿಕೊಳ್ಳು ತ್ತಾಳೆ. ದೇವರು ಸುರಲೋಕದಲ್ಲಿ ಏನಾದರೂ ಶಿಕ್ಷೆಕೊಡಲಿ, ಆದರೆ ತಾನು ಬೇರೆಯವರದ್ದನ್ನು ಕಿತ್ತುಕೊಳ್ಳಲು ಸುಳ್ಳು ಹೇಳುತ್ತಿಲ್ಲ, ರಾಧಿಕಾಳ ಉತ್ತರವೇ ನನಗೆ ಪ್ರಶ್ನೆಯಾಯಿತು. ಸುಳ್ಳನ್ನು ಸುಳ್ಳು ಎಂದೂ ಹೇಳಲಾಗುತ್ತಿರಲಿಲ್ಲ. ಹಾಗಾದರೆ ಅದಕ್ಕೆ ಏನು ಹೆಸರಿಡಬೇಕು?

ಒರಟು ಮಡಕೆ ಮಾಡುವುದರ ಬದಲು ಸುಂದರವಾದ ಹೂಜಿಗಳನ್ನೂ ನಕಾಶಿ ಕೆಲಸದ ಹೂದಾನಿಗಳನ್ನೂ ಮಾಡಿದರೆ ಪೇಟೆಯಲ್ಲಿ ಮಾರಾಟ ಮಾಡಬಹುದೆಂದು ನಾನು ಬದಲೂವಿಗೆ ಹೇಳಿದಾಗ ಅವನು ಚಕ್ರದ ಕಡೆಗೇ ನೋಡುತ್ತ ಗೊಗ್ಗರು ದನಿಯಲ್ಲಿ ಹೇಳಿದುದರ ಅರ್ಥವಿಷ್ಟೆ. ಅವರ ಅಜ್ಜ ಮುತ್ತಜ್ಜ ಇಂಥ ಮಡಕೆಗಳನ್ನೇ ಮಾಡುತ್ತಾ ಬಂದಿದ್ದಾರೆ. ತಾನಾದರೋ ಹಳ್ಳಿಯ ಕುಂಬಾರ, ತನಗೆ ಪಟ್ಟಣದ ಪಾತ್ರೆ ಮಾಡಲು ಬರುತ್ತದೆಯೇ! ನಾನು ಮುಂದೆ ಮಾತಾಡುವುದು ವ್ಯರ್ಥವೆಂದು ಸುಮ್ಮನಾದೆ.

ಒಂದು ಸಲ ನಾನು ಮಕ್ಕಳಿಗೆ ತೋರಿ ಸಲು ಕೆಲವು ಚಿತ್ರಗಳನ್ನು ತಂದೆ. ಬದಲು ವಿನ ಮಕ್ಕಳಲ್ಲಿ ದುಬಿಯಾ ಓದಲು ಬರು ತ್ತಿದ್ದಳು. ಬಹುಶಃ ಅವಳೇ ಹೇಳಿರಬೇಕು. ಬದಲೂ ಮಕ್ಕಳಂತೆ ಓಡೋಡುತ್ತ ಬಂದ. ನನಗಂತೂ ತುಂಬ ಆಶ್ಚರ್ಯವಾಯಿತು. ನಾನು ಚಿತ್ರ ತೋರಿಸಿ ಆದಷ್ಟೂ ಸರಳ ವಾಗಿ ವಿವರಿಸಿದೆ. ಬದಲೂ ಮಕ್ಕಳ ಮಧ್ಯೆ ಕುಳಿತಿದ್ದ. ಸರಸ್ವತಿಯ ಚಿತ್ರವನ್ನು ಒಂದೇ ಸಮನೆ ನೋಡುತ್ತಿದ್ದನ್ನು ಕಂಡು "ನಿನಗೆ ಬೇಕಾದರೆ ಇದನ್ನು ಇಟ್ಟುಕೊ" ಎಂದೆ. ಅವನ ಕಣ್ಣುಗಳಲ್ಲಿ "ಇಷ್ಟು ಸುಂದರವಾದ ಚಿತ್ರವನ್ನು ಹೇಗೆ ಕೇಳಲಿ" ಎಂಬ ಸಂಕೋಚ ಎದ್ದು ಕಾಣುತ್ತಿತ್ತು. ನಾನು ಅದನ್ನು ಅವನಿಗೆ ಕೊಟ್ಟು ಕೆಲವು ದಿನಗಳ ನಂತರ ಬದಲೂವಿನ ಮುರಕಲು ಬಾಗಿಲ ಮೇಲೆ ಅಂಟಿಸಿದ ಆ ಚಿತ್ರದ ದುಃಸ್ಥಿತಿ ಕಂಡು ನನಗೆ ದುಃಖವಾಯಿತು.

ದೀಪಾವಳಿ ದಿನ ಮಣ್ಣಿನ ಆಟದ ಸಾಮಾನು ಕೊಳ್ಳುವುದು ನನ್ನ ಹವ್ಯಾಸ ವಾಗಿತ್ತು. ಕುಶಲ ಕಲೆಯನ್ನು ತೋರಿಸಿ

ಕೊಳ್ಳಲು ಶಿಲ್ಪಿಗಳಿಗೆ ಅದೊಂದು ಅವಕಾಶ. ಆದರೆ ಆಧುನಿಕ ಸಭ್ಯ ಯುಗದಲ್ಲಿ ಉತ್ಸವದ ಉತ್ಸಾಹದ ಜೊತೆಗೆ ಶಿಲ್ಪಿಗಳ ಅಭಿವೃದ್ಧಿಯೂ ಕುಂಟಿತಗೊಂಡಿದೆ. ಆ ದಿನ ಬೊಂಬೆಗಳನ್ನು ಶೃಂಗರಿಸಲು ಹಜಾರಕ್ಕೆ ಬಂದಾಗ ಬದಲೂವಿನ ಕೆಮ್ಮಿನ ಸದ್ದು ಕೇಳಿ ಆಶ್ಚರ್ಯ-ಚಿಂತೆ ಎರಡೂ ಉಂಟಾಯಿತು. ಬದಲೂ ಎಂದೂ ನಮ್ಮನೆಗೆ ಬಂದವನಲ್ಲ. ಅವರ ಮನೆಯಲ್ಲಿ ಯಾರಿಗಾದರೂ ಖಾಯಿಲೆಯೆ? ಏನಾದರೂ ತೊಂದರೆ ಬಂದಿದೆಯೇ ಎಂದು ಯೋಚಿಸಿದೆ. ಕೊಳಕು ಬಟ್ಟೆ ಧರಿಸಿದ ಬದಲೂ ಸಂಕೋಚದಿಂದ ನಿಂತಿದ್ದ.

ಅವನು ಮುಂದೆ ಹರಕು ಕುಕ್ಕೆಯ ಮೇಲೆ ಮುಚ್ಚಿದ ಬಟ್ಟೆಯ ತುಂಡನ್ನು ಸಡಿಲಿಸಿದಾಗ ಅದರಲ್ಲಿದ್ದ ಸರಸ್ವತಿ ಮೂರ್ತಿಯನ್ನು ಕಂಡು ನಾನು ಅವಾಕ್ಕಾದೆ–ಬಿಳಿ ಮತ್ತು ಚಿನ್ನದ ಬಣ್ಣದಿಂದ ಕೂಡಿದ ಸುಂದರ ಮೂರ್ತಿ! ಮೂರ್ತಿಯ ಪ್ರಶಾಂತ ಮುಖಮುದ್ರೆ. ಹೊಂಬಣ್ಣದ ಕೂದಲು, ವೀಣೆ, ಕೆಂಪು ಕೊಕ್ಕು ಮತ್ತು ಕೆಂಪು ಕಾಲಿನ ಹಂಸ, ನಿಜವಾಗಿಯೂ ಅದನ್ನು ಮಾಡಿದವ ಕುಶಲ ಶಿಲ್ಪಿ ಎಂದು ಹೇಳಬಹುದಾಗಿತ್ತು. "ಯಾರಿಂದ ಮಾಡಿಸಿ ತಂದೆ?" ಎಂದು ಕೇಳಿದಾಗ ಬದಲೂ ನಾಚಿಕೆಯಿಂದ ಕತ್ತು ಬಗ್ಗಿಸಿ ತನ್ನ ಬಡಕಲು ಕೈಗಳನ್ನು ಆಡಿಸುತ್ತಾ 'ನಾನೇ ಮಾಡಿದೆ' ಎಂದ. ನಂಬಿಕೆ ಬಂದ ನಾನು ಬದಲೂ ಮತ್ತು ಮೂರ್ತಿಯನ್ನು ನೋಡುತ್ತಾ ನಿಂತೆ.



ಅದು ಬೇಕು, ಇದು ಬೇಕು ಎಂದು ಹಲುಬಬೇಡ. ದೇವೀ ಪ್ರೇಮದಿಂದ ದೊರೆತುದನ್ನು ಮಾತ್ರ ಸ್ವೀಕರಿಸು. ಉಳಿದವುಗಳಿಗಾಗಿ ನಿರಾಶೆಪಟ್ಟುಕೊಳ್ಳಬೇಡ.

—ಟಾಗೋರ್

ಬೇಕು ಎಲ್ಲರಿಗೂ ಶಿಕ್ಷಣ

ಟಿ. ವೆಂಕ

ಇಪ್ಪತ್ತನೆಯ ಶತಮಾನದ ಅಂತ್ಯಕ್ಕೆ 'ಎಲ್ಲರಿಗೂ ಶಿಕ್ಷಣ' ಸಿಗಬೇಕೆಂಬುದು ಪ್ರಸ್ತುತದ ಜಾಗತಿಕ ಕೂಗು. ಇದಕ್ಕಾಗಿ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಪ್ರಪಂಚದಲ್ಲೆ ಅತಿ ಹೆಚ್ಚು ಅನಕ್ಷರತೆಯನ್ನು ಹೊಂದಿರುವ ಭಾರತ 'ಎಲ್ಲರಿಗೂ ಶಿಕ್ಷಣ'ಕ್ಕೆ ಗಂಭೀರ ಗಮನಹರಿಸಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಭಾರತದ ಶೈಕ್ಷಣಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಯುನೆಸ್ಕೋ ಹೇಳಿರುವ, "ಕ್ರಿ.ಶ. ೨೦೦೦ಕ್ಕೆ ಭಾರತವೊಂದೇ ವಿಶ್ವದಲ್ಲಿ ಏಕೈಕ ಅನಕ್ಷರಸ್ಥ ರಾಷ್ಟ್ರವಾಗಿ ಉಳಿಯಬೇಕಾಗುತ್ತದೆ" ಎಂಬುದು ನಿಜವಾಗಬಹುದು.

ಮೂಲ ಗುರಿ

೧೯೯೧ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ ೮೪.೬೩ ಕೋಟಿ. ಈ ಸಂಖ್ಯೆ ಪ್ರಪಂಚದ ಜನಸಂಖ್ಯೆಯ ಶೇ|| ೧೬ ರಷ್ಟಾಗುತ್ತದೆ. ಆದರೆ ಭಾರತಕ್ಕಿರುವ ಭೂಪ್ರದೇಶ ಕೇವಲ ಶೇ|| ೨.೪ ಮಾತ್ರ. ಒಟ್ಟು ಜನಸಂಖ್ಯೆಯಲ್ಲಿ ೬ ರಿಂದ ೧೪ರ ವಯೋಮಿತಿಯ ೧೫.೩ ಕೋಟಿ (ಶೇ|| ೧೮) ಮಕ್ಕಳಿದ್ದಾರೆ. ಇವರಲ್ಲಿ ೨.೪ ಕೋಟಿ ಅನಕ್ಷರಸ್ಥರು. ಅದರಲ್ಲೂ ಶೇ|| ೬೦ ಹೆಣ್ಣು ಮಕ್ಕಳು. ೧೫ ರಿಂದ ೩೫ರ ವಿ
ಮಿತಿಯ ೨೫.೪ ಕೋಟಿ (ಶೇ||
ಯುವಜನರಿದ್ದಾರೆ. ಇವರಲ್ಲಿ ೧೨.೧
ಅನಕ್ಷರಸ್ಥರು; ಶೇ|| ೬೨ ರಷ್ಟು ೧
ಯರು. ಶಿಕ್ಷಣದಿಂದ ವಂಚಿತರಾಗಿರ
ಎರಡೂ ವರ್ಗದ ಮಕ್ಕಳು ಮತ್ತು
ಜನಾಂಗವನ್ನು ಸಂಪೂರ್ಣವಾಗಿ ಶಿ
ಹೊರಗುಳಿಯದಂತೆ ನೋಡಿಕೊ
ಅವರಿಗೆ ಅಗತ್ಯ ಶಿಕ್ಷಣ ನೀಡುವುದೆ
ರಿಗೂ ಶಿಕ್ಷಣ"ದ ಮೂಲಗುರಿಯಾ

ಅಲ್ಪ ಸುಧಾರಣೆ

೭ ವರ್ಷಕ್ಕಿಂತ ಮೇಲ್ಪ
ಸಂಖ್ಯೆಯ ಒಟ್ಟು ಸಾಕ್ಷರತಾ
ದಲ್ಲಿ ಶೇ|| ೫೨.೧೯. ಇದರಲ್ಲಿ
ಸಾಕ್ಷರತೆ ಶೇ|| ೬೪.೧೩ ಮತ್ತು
ಸಾಕ್ಷರತೆ ೩೯.೨೯. ೧೯೮೧ ರಿಂದ ೧
ದಲ್ಲಿ ಭಾರತದ ಸಾಕ್ಷರತಾ ಪ್ರ
ಸ್ವಲ್ಪ ಮಟ್ಟಿನ ಸುಧಾರಣೆಯನ
ಬಹುದು. ಜನಸಂಖ್ಯಾ ಬೆಳವ
ಅನಕ್ಷರಸ್ಥ ಸಂಖ್ಯೆಗಿಂತ ಅಕ್ಷರಸ್ಥ
ಹೆಚ್ಚಾಗಿರುವುದು; ಮಹಿಳಾ
(೯·೬%) ಪುರುಷರ ಸಾಕ್ಷರ

.೫%) ಹೆಚ್ಚಾಗಿರುವುದು ; ಗ್ರಾಮೀಣ ಮತ್ತು ನಗರ ಪ್ರದೇಶದ ಸಾಕ್ಷರತೆ ನಡುವಿನ ವ್ಯತ್ಯಾಸದ ಪ್ರಮಾಣ ಕಡಿಮೆ ಆಗಿರುವುದು ; ಪರಿಶಿಷ್ಟ ಜಾತಿಯುವರಲ್ಲಿ ಸಾಕ್ಷರತಾ ಪ್ರಮಾಣ ಶೇ|| ೨೧.೩೮ ರಿಂದ ಶೇ|| ೭.೪ ಕ್ಕೆ ಹಾಗೂ ಪರಿಶಿಷ್ಟ ವರ್ಗದವರ ಸಾಕ್ಷರತೆ ಶೇ|| ೧೬.೩೫ ರಿಂದ ಶೇ|| ೯.೬೦ ಕ್ಕೆ ಹೆಚ್ಚಿರುವುದು ಗಮನಾರ್ಹ ಅಂಶ.

ಡಿಸೆಂಬರ್ ೧೯೯೩ ರಲ್ಲಿ ನವದೆಹಲಿಯಲ್ಲಿ ನಡೆದ ೯ ರಾಷ್ಟ್ರಗಳ ಶೃಂಗಸಭೆ "ಎಲ್ಲರಿಗೂ ಶಿಕ್ಷಣ" ಕಾರ್ಯಕ್ರಮಕ್ಕೆ ಒಂದು ಆಯಾಮವನ್ನು ತಂದುಕೊಟ್ಟಿತು. ಈ ಶೃಂಗಸಭೆಯಲ್ಲಿ ಭಾರತ ಪ್ರಮುಖ ಪಾತ್ರ ವಹಿಸಿತ್ತು. ಜಗತ್ತಿನ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಚೀನಾ, ಭಾರತ, ಇಂಡೋನೇಷಿಯಾ, ಬಾಂಗ್ಲಾದೇಶ, ಬ್ರೆಜಿಲ್, ಈಜಿಪ್ಟ್, ಮೆಕ್ಸಿಕೋ, ನೈಜಿರಿಯಾ ಮತ್ತು ಪಾಕಿಸ್ತಾನ ಇದರಲ್ಲಿ ಭಾಗವಹಿಸಿದ ರಾಷ್ಟ್ರಗಳು. ಪ್ರಪಂಚದ ಅರ್ಧಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಈ ೯ ದೇಶಗಳಲ್ಲೇ ಪ್ರಪಂಚದ ಶೇ|| ೭೦ ರಷ್ಟು ಅನಕ್ಷರತೆ ಇದೆ. 'ಎಲ್ಲರಿಗೂ ಶಿಕ್ಷಣ'ಕ್ಕಾಗಿ ಈ ಶೃಂಗ ಸಭೆ ಅಂಗೀಕರಿಸಿದ ನಿರ್ಣಯಗಳು ಗಮನಾರ್ಹವಾದುವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ೧) ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ; ಮಕ್ಕಳು, ಯುವಕರು ಮತ್ತು ವಯಸ್ಕರಿಗೆ ಕಲಿಕೆಯ ಅವಕಾಶ ಕಲ್ಪಿಸುವುದು ; ೨) ಎಲ್ಲರಿಗೂ ಶಿಕ್ಷಣವನ್ನು ಸಂವಿಧಾನಾತ್ಮಕ ಹಕ್ಕನ್ನಾಗಿ ಪರಿಗಣಿಸುವುದು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಿ ಸೃಜನಶೀಲಗೊಳಿಸುವುದು ; ಶೈಕ್ಷಣಿಕ ವಿಷಯ-ವಿಧಾನವನ್ನು ಜನರ ಅಗತ್ಯತೆಗೆ ತಕ್ಕಂತೆ ಮಾರ್ಪಡಿಸುವುದು ; ಜನರ ಸಮಸ್ಯೆ, ಬಡತನ, ಉತ್ಪಾದಕತೆಯ ಹೆಚ್ಚಳ, ಜೀವನ ಮಟ್ಟದ ಸುಧಾರಣೆ, ಪರಿಸರ ಸಂರಕ್ಷಣೆ–ವಿಷಯಗಳಲ್ಲಿ ಸಶಕ್ತತೆ ತರುವ ವಿಷಯ ಅಳವಡಿಕೆ ; ಒಟ್ಟಿನಲ್ಲಿ ಶಿಕ್ಷಣವನ್ನು ಒಂದು ಸಾಮಾಜಿಕ ಜವಾಬ್ದಾರಿಯಾಗಿ ಪರಿಗಣಿಸುವುದು ; ೩) ಕ್ರಿ.ಶ. ೨೦೦೦ ವರ್ಷ ಅಥವಾ ಎಷ್ಟು ಬೇಗ ಸಾಧ್ಯವೋ ಅಷ್ಟರೊಳಗೆ 'ಎಲ್ಲರಿಗೂ ಶಿಕ್ಷಣವನ್ನು ನೀಡುವುದು ; ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ಬೃಹತ್ ಪ್ರಮಾಣದ ಶಿಕ್ಷಕರನ್ನು, ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು, ಮೂಲ ಶಿಕ್ಷಣ ನೀಡುವಲ್ಲಿ ತೋರುವ ಕುಟುಂಬ, ಲಿಂಗ, ವಯಸ್ಸು, ಧರ್ಮ, ಭಾಷೆ, ಆದಾಯ, ತಾರತಮ್ಯ ಮತ್ತು ಪ್ರಾದೇಶಿಕ (ಭೌಗೋಳಿಕ) ಅಸಮಾನತೆಯನ್ನು ನಿರ್ಮೂಲನ ಮಾಡುವುದು. ೪) ಮೂಲ ಶಿಕ್ಷಣ ಸುಧಾರಣೆಗೆ ಅಂತರ ರಾಷ್ಟ್ರೀಯ ಸಹಯೋಗವನ್ನು, ಸಹಕಾರವನ್ನು ಪಡೆಯುವುದು ಇತ್ಯಾದಿಗಳು. ಇವುಗಳ ಅನುಷ್ಠಾನಕ್ಕೆ ಕಟಿಬದ್ಧರಾಗಿರುವುದಾಗಿ ನಿರ್ಣಯಿಸಲಾಯಿತು.

ಭಾರತದ ಶೈಕ್ಷಣಿಕ ಸನ್ನಿವೇಶದಲ್ಲಿ ಎಲ್ಲರಿಗೂ ಶಿಕ್ಷಣಕ್ಕೆ ತುರ್ತು ಗಮನ ನೀಡುವ ಅನಿವಾರ್ಯತೆ ಇದೆ. ಇಲ್ಲಿ ೧೯೬೧ ರಿಂದಲೂ 'ಕಡ್ಡಾಯ ಪ್ರಾಥಮಿಕ ಶಿಕ್ಷಣ' ಜಾರಿಯಲ್ಲಿದೆ. ಇದರ ಪ್ರಕಾರ ಮಕ್ಕಳನ್ನು ಶಾಲೆಗೆ ಸೇರಿಸದ ತಂದೆ-ತಾಯಿ ಪೋಷಕರಿಗೆ ಶಿಕ್ಷೆ ವಿಧಿಸಬೇಕು. ಕೋಟ್ಯಾಂತರ ಮಕ್ಕಳು ಶಾಲೆಯ ಮೆಟ್ಟಿಲು ಹತ್ತಿಲ್ಲ. ಇದಕ್ಕೆ ಕಾರಣರಾದವರಿಗೆ ಶಿಕ್ಷೆ ಆಗಿರುವುದರ ಒಂದೇ ಒಂದು

ಉದಾಹರಣೆಯೂ ಈ ದೇಶದಲ್ಲಿ ಎಲ್ಲಿಯೂ ಇಲ್ಲ!

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

'ಎಲ್ಲರಿಗೂ ಶಿಕ್ಷಣ'ಕ್ಕಾಗಿ ನಡೆದಿರುವ ಪ್ರಯತ್ನಗಳಲ್ಲಿ ಇದು ಪ್ರಮುಖವಾದದ್ದು. ಇದರ ಉದ್ದೇಶಗಳು ತುಂಬ ಆಕರ್ಷಕ ಮತ್ತು ಆಶಾದಾಯಕವಾಗಿವೆ. ಎಲ್ಲ ಮಕ್ಕಳು ಶಾಲೆ ಸೇರುವಂತೆ ನೋಡಿಕೊಳ್ಳುವುದು. ಅದರಲ್ಲೂ ಹೆಣ್ಣು ಮಕ್ಕಳು, ಪರಿಶಿಷ್ಟ ಜಾತಿ/ವರ್ಗದ ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡುವುದು; ಎಲ್ಲ ಪ್ರಾಥಮಿಕ ಶಾಲಾ ಮಕ್ಕಳು ಕನಿಷ್ಠ ೧ ಕಿ.ಮೀ. ದೂರದ ಒಳಗೇ ನಡೆದು ಹೋಗುವಂತೆ ಹತ್ತಿರದಲ್ಲಿ ಶಾಲಾ ವ್ಯವಸ್ಥೆ ಮಾಡುವುದು; ಮಧ್ಯದಲ್ಲಿ ಶಾಲೆ ಬಿಟ್ಟ, ಶಾಲೆ ಸೇರದ, ಶಾಲೆಗೆ ಹೋಗಲು ಸಾಧ್ಯವಾಗದ ಹೆಣ್ಣು ಮಕ್ಕಳು ಮತ್ತು ದುಡಿಯುವ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣದ ವ್ಯವಸ್ಥೆ ಮಾಡುವುದು; ಶಾಲೆ ಬಿಡುವವರ ಪ್ರಮಾಣವನ್ನು ತಗ್ಗಿಸುವುದು; ಪ್ರಾಥಮಿಕ ಶಾಲೆಯಿಂದ ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವವರ ಪ್ರಮಾಣವನ್ನು ಹಾಲಿ ಇರುವುದಕ್ಕಿಂತ ಹೆಚ್ಚಿಸುವುದು. ಇದಕ್ಕಾಗಿ ಶೈಕ್ಷಣಿಕ ಸುಧಾರಣೆಗಳನ್ನು ತಂದು ತರಗತಿ ಉಲ್ಲಾಸದಾಯಕವಾಗಿರುವಂತೆ ನೋಡಿಕೊಳ್ಳಲು ಗಮನ ಕೊಡಲಾಗುತ್ತಿದೆ. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳೆರಡಕ್ಕೂ ಸೇರಿದಂತೆ ೪೧೦ ಅಂಶಗಳ ಕನಿಷ್ಠ ಕಲಿಕಾ ಹಂತಗಳನ್ನು (ಮಿನಿಮಂ ಲೆವೆಲ್ಸ್ ಆಫ್ ಲರ್ನಿಂಗ್ – ಎಂ.ಎಲ್.ಎಲ್.) ರೂಪಿಸಲಾಗಿದೆ. ಇಲ್ಲಿ ನೀಡುವ ಮೂಲ ಶಿಕ್ಷಣ ವಾಸ್ತವಿಕತೆ, ಸಮಕಾಲೀನ ಅಗತ್ಯತೆ ಮತ್ತು ಕ್ರಿಯಾತ್ಮಕತೆಯಿಂದ ಕೂಡಿದ್ದು, ಇದಕ್ಕೆ ಬೇಕಾದ ತಂತ್ರ-ವಿಧಾನಗಳನ್ನು ಬಳಸಲಾಗುತ್ತದೆ; ಈ ನೆಲೆಗಟ್ಟಿನಲ್ಲಿ ಕಲಿಕಾ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

ಆಪರೇಷನ್ ಬ್ಲಾಕ್ ಬೋರ್ಡ್

೧೯೮೬ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ 'ಆಪರೇಷನ್ ಬ್ಲಾಕ್ ಬೋರ್ಡ್' ಎಂಬ ಪ್ರಮುಖ ಶೈಕ್ಷಣಿಕ ಯೋಜನೆಯೊಂದು ಜಾರಿಗೆ ಬಂತು. ದೇಶದ ೫ ಲಕ್ಷಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳಿಗೆ ಕನಿಷ್ಠ ೨ ದೊಡ್ಡ ಕೊಠಡಿಗಳು, ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಇಬ್ಬರು ಶಿಕ್ಷಕರು, ಅಗತ್ಯ ಕಲಿಕಾ ಮತ್ತು ಬೋಧನಾ ಸಾಮಗ್ರಿಗಳು (ಕಪ್ಪು ಹಲಗೆ, ಭೂಪಟ, ಚಾರ್ಟ್, ಸಣ್ಣ ಗ್ರಂಥಾಲಯ, ಆಟಿಕೆಗಳು) ಹಾಗೂ ಪಿಠೋಪಕರಣಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶ. ಈ ಕಾರ್ಯ ಸಮರೋಪಾದಿಯಲ್ಲಿ ಆಗಬೇಕೆಂಬ ಉದ್ದೇಶದಿಂದಲೇ 'ಆಪರೇಷನ್' ಪದವನ್ನು ಬಳಸಲಾಯಿತು. ಒಂದು ಸರ್ಕಾರಿ ಅಂಕೆ ಅಂಶದ ಪ್ರಕಾರ, ಈ ಯೋಜನೆಯ ಶೇ॥ ೯೧.೬ ರಷ್ಟು ಶಾಲೆಗಳಿಗೆ ಕಲಿಕಾ-ಬೋಧನಾ ಸಾಮಗ್ರಿಗಳನ್ನು, ಶೇ॥ ೮೬.೯ ರಷ್ಟಕ್ಕೆ ಶಿಕ್ಷಕರನ್ನು ಮತ್ತು ಶೇ॥ ೪೭ ರಷ್ಟಕ್ಕೆ ಕೊಠಡಿಗಳ ನಿರ್ಮಾಣ ಆಗಿದೆ. ಆದರೆ 'ಆಪರೇಷನ್' ಪದ ಬಳಕೆಯು ಅರ್ಥವತ್ತಾಗಬೇಕಾಗಿದೆ.

ಅನೌಪಚಾರಿಕ ಶಿಕ್ಷಣ

ಶಾಲೆಗೆ ಹೋಗದ, ಶಾಲೆ ಬಿಟ್ಟ ೬ ರಿಂದ ೧೪ ವರ್ಷ ವಯೋಮಿತಿ ಮಕ್ಕಳಿಗೆ ಇರುವ ಯೋಜನೆಯೇ ಅನೌಪಚಾರಿಕ ಶಿಕ್ಷಣ. ಇದನ್ನು ಕೇಂದ್ರ ಸರ್ಕಾರ ಮೊದಲು ಶೈಕ್ಷಣಿಕವಾಗಿ ಹಿಂದುಳಿದ ೧೦ ರಾಜ್ಯಗಳಲ್ಲಿ ಪ್ರಾರಂಭಿಸಿತು. ನಗರ ಪ್ರದೇಶದ ಕೊಳಗೇರಿ, ಕಣಿವೆ, ಬೆಟ್ಟಗಾಡು ಮತ್ತು ಮರುಭೂಮಿ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೆಲಸ ಮಾಡುವ ಮಕ್ಕಳನ್ನು ಒಳಗೊಂಡಿತ್ತು. ಹಾಲಿ ದೇಶಾದ್ಯಂತ ಈ ಕಾರ್ಯಕ್ರಮ ನಡೆಯುತ್ತಿದೆ. ವೆಚ್ಚದ ಅರ್ಧ ಭಾಗವನ್ನು ಕೇಂದ್ರ ಸರ್ಕಾರ ಮತ್ತು ಇನ್ನರ್ಧಭಾಗವನ್ನು ರಾಜ್ಯ ಸರ್ಕಾರಗಳು ಭರಿಸುತ್ತವೆ. ಅಲ್ಲದೆ, ದೇಶದ ೪೦೦ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳು ಕೇಂದ್ರ ಸರ್ಕಾರದಿಂದ ಶೇ. ೧೦೦ರಷ್ಟು ಅನುದಾನ ಪಡೆದು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇದರ ಜೊತೆಗೆ ದೇಶದ ಪ್ರತಿ ಜಿಲ್ಲೆಯಲ್ಲೂ 'ನವೋದಯ ಶಾಲೆ'ಗಳು ಇವೆ. 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ.) ವಿದೇಶಿ ಸಂಸ್ಥೆಗಳ ಸಹಕಾರದೊಡನೆ ಆಯ್ದ ಜಿಲ್ಲೆಗಳಲ್ಲಿ ಜಾರಿಯಾಗುತ್ತಿದೆ. ಕರ್ನಾಟಕದಲ್ಲಿ ಈ ವರ್ಷದಿಂದ ಪ್ರತಿ ಜಿಲ್ಲೆಯಲ್ಲೂ 'ಮೊರಾರ್ಜಿ ವಸತಿ ಶಾಲೆ', 'ಉರ್ದು ವಸತಿ ಶಾಲೆ'ಗಳಂಥ ರಾಜ್ಯ ಮಟ್ಟದ ಶೈಕ್ಷಣಿಕ ಕಾರ್ಯಕ್ರಮಗಳು, ಕಾರ್ಯಗತವಾಗುತ್ತಿವೆ. ಮುಂದುವರಿಕೆ ಶಿಕ್ಷಣಕ್ಕಾಗಿ 'ರಾಷ್ಟ್ರೀಯ ಮುಕ್ತ ಶಾಲೆಯು' ಜಾಲ ದೇಶಾದ್ಯಂತ ವ್ಯಾಪಿಸಿದೆ.

ರಾಷ್ಟ್ರೀಯ ಸಾಕ್ಷರತಾ ಮಿಷನ್

೧೫–೩೫ರ ವಯೋಮಿತಿಯ ೮ ಕೋಟಿ ವಯಸ್ಕ ಅನಕ್ಷರಸ್ಥರಿಗೆ ೧೯೯೫ರೊಳಗೆ ಕ್ರಿಯಾತ್ಮಕ ಸಾಕ್ಷರತೆ ನೀಡುವ ಉದ್ದೇಶದಿಂದ ಮೇ, ೧೯೮೮ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಅಸ್ತಿತ್ವಕ್ಕೆ ಬಂತು. ಈ ವ್ಯಾಪ್ತಿಯನ್ನು ವಿಸ್ತರಿಸಿ ೮ನೇ ಪಂಚವಾರ್ಷಿಕ ಯೋಜನೆ (೧೯೯೭)ಯೊಳಗೆ ೧೦ ಕೋಟಿ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವ ಗುರಿ ಇಟ್ಟುಕೊಳ್ಳಲಾಯಿತು. ವಯಸ್ಕರ ಸಾಕ್ಷರತೆಗೆ ಸಾಮಾಜಿಕ ಬಲವನ್ನು ಸಂಘಟಿಸಿ ಜನರೂ ಪಾಲ್ಗೊಳ್ಳುವಂತೆ ಮಾಡಿ ಉದ್ದೇಶ ಸಾಧಿಸುವುದು, ಜನಾಂದೋಲನವಾಗಿ ಜಾರಿಗೊಳಿಸುವುದು ಕಾರ್ಯಾಚರಣೆಯ ಮಾರ್ಗವಾಯಿತು. ೧೯೮೯ರಲ್ಲಿ ಕರ್ನಾಟಕದ ೨೦ ತಾಲ್ಲೂಕುಗಳಲ್ಲಿ ನಡೆದ ಪ್ರಯೋಗ ಮತ್ತು ಎರ್ನಾಕುಲಂ ಜಿಲ್ಲೆ ೧೯೮೯–೯೦ರಲ್ಲಿ ಅನಕ್ಷರತೆ ನಿರ್ಮೂಲನೆಗೆ ಅನುಸರಿಸಿದ ವಿಧಾನ, ದೃಷ್ಟಿಕೋನ ಸಾಕ್ಷರತಾ ಆಂದೋಲನಕ್ಕೆ ಒಂದು ಸ್ಪಷ್ಟ ಕಲ್ಪನೆಯನ್ನು ನೀಡಿತು. ಇಂದು ದೇಶದ ಎಲ್ಲೆಡೆ ಈ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ನಿರ್ದಿಷ್ಟ ಪ್ರದೇಶ, ನಿಗದಿತ ಕಾಲ, ಸ್ವಯಂಸೇವೆಯ ಆಧಾರ, ಕಡಿಮೆ ವೆಚ್ಚ, ಹೆಚ್ಚು ಪ್ರತಿಫಲ — ಈ ಸಾಕ್ಷರತಾ ಆಂದೋಲನದ ಪ್ರಮುಖ ಅಂಶಗಳು. ಇದರ ನಂತರ ಇಲ್ಲಿ ಪಡೆದ ಸಾಕ್ಷರತಾ ಕೌಶಲ್ಯವನ್ನು ಉಳಿಸಿಕೊಂಡು, ಬೆಳೆಸಿಕೊಂಡು, ಮುಂದುವರಿಸಿಕೊಂಡು ಹೋಗಲು ಸಾಕ್ಷರೋತ್ತರ ಆಂದೋಲನ ಹಮ್ಮಿಕೊಳ್ಳಲಾಗುತ್ತಿದೆ. ಓದು–ಬರಹದ ಜೊತೆಗೆ ಇಲ್ಲಿ ಆದಾಯ

ತರುವಂತಹ ವೃತ್ತಿ ತರಬೇತಿ ಚಟುವಟಿಕೆಗಳನ್ನು ಅಳವಡಿಸುವುದು, ನವಸಾಕ್ಷರರ ಆದಾಯ ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶ ಇಟ್ಟುಕೊಳ್ಳಲಾಗಿದೆ.

ಇದುವರೆಗೆ ನಡೆದಿರುವ ಸಾಕ್ಷರತಾ ಆಂದೋಲನದಿಂದ ಹಲವಾರು ರಚನಾತ್ಮಕ ಬದಲಾವಣೆ ಆಗಿರುವುದನ್ನು ಗುರುತಿಸಲಾಗಿದೆ. ಅವುಗಳೆಂದರೆ, ಮಕ್ಕಳ ಶಾಲಾ ದಾಖಲಾತಿ ಹೆಚ್ಚಿರುವುದು, ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿ ಮಹಿಳಾ ಸಮಾನತೆ ಉತ್ತಮಗೊಂಡಿರುವುದು, ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಿರುವುದು, ಮಕ್ಕಳಿಗೆ ರೋಗ ನಿರೋಧಕ ಲಸಿಕೆ ಕಾರ್ಯಕ್ರಮದಲ್ಲಿ ಸುಧಾರಣೆ ಆಗಿರುವುದು, ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಾ ಸಾಮರಸ್ಯ ಮೂಡಿರುವುದು, ಕೋಮು ಸೌಹಾರ್ದತೆ ಆಗಿರುವುದು, ಸಾಮಾಜಿಕ ಅನಿಷ್ಟಗಳಾದ ವರದಕ್ಷಿಣೆ, ಬಾಲ್ಯವಿವಾಹ, ಭಿಕ್ಷಾಟನೆ, ಮದ್ಯಪಾನ ಇತ್ಯಾದಿಗಳ ಪ್ರಮಾಣ ತಗ್ಗಿರುವುದು, ಪಾನನಿರೋಧ ಚಳುವಳಿ ಬಲಗೊಂಡಿರುವುದು, ಪೌರತ್ವದ ಮತ್ತು ಪರಿಸರದ ಅರಿವು ಮೂಡಿರುವುದು, ಗ್ರಾಮ ಶಿಕ್ಷಣ ಸಮಿತಿಗಳನ್ನು ಸಂಘಟಿಸಿ ಆ ಮುಖೇನ ಸಮುದಾಯ ಪಾಲ್ಗೊಳ್ಳುವಂತೆ ಮಾಡಿರುವುದು ಮುಂತಾದುವು ಆಂದೋಲನದ ಅಂಗವಾಗಿ ಹೊರಬಂದಿರುವ ಕಲಾ ಜಾಥಾ, ಜಾನಪದ ಹಾಡು, ನಾಟಕ, ಗೊಂಬೆಯಾಟ, ಕುಣಿತ ಇತ್ಯಾದಿ ಸಾಂಸ್ಕೃತಿಕ ಕಲಾ ಪ್ರಕಾರಗಳ ಪುನರ್ ಉತ್ಥಾನಕ್ಕೆ ಎಡೆಮಾಡಿಕೊಟ್ಟಿರುವುದು, ಸ್ವಯಂಸೇವಾ ಮನೋಭಾವವನ್ನು ಬೆಳೆಸಿರುವುದು—ಈ ಅಂಶಗಳೆಲ್ಲ ದೇಶದಾದ್ಯಂತ ನಡೆಸಿರುವ ಸಾಕ್ಷರತಾ ಆಂದೋಲನಗಳಲ್ಲಿ ಅಲ್ಲಲ್ಲಿ ಕಂಡುಬಂದಂತಹವು. ಇದಕ್ಕೆ ಸಾಕ್ಷರತಾ ಆಂದೋಲನವೇ ಕಾರಣ ಎಂದು ನಿಖರವಾಗಿ ಹೇಳಲಾಗದಿದ್ದರೂ ಆಂದೋಲನದ ನಂತರ ಇಂತಹ ಆರೋಗ್ಯಕರವಾದ ಬೆಳವಣಿಗೆ ಆಗುತ್ತಿರುವುದು ಶ್ಲಾಘನೀಯ ವಿಷಯ.

೧೯೯೫ರ ಆಗಸ್ಟ್ ೧೫ರಂದು ಮಾಜಿ ಪ್ರಧಾನಿ ಪಿ. ವಿ. ನರಸಿಂಹರಾವ್ ಅವರು ಕೆಂಪುಕೋಟೆಯಲ್ಲಿ ಧ್ವಜಾರೋಹಣ ಮಾಡಿ ಮಾತನಾಡುತ್ತಾ, 'ಇನ್ನು ಮುಂದೆ ಒಟ್ಟು ರಾಷ್ಟ್ರೀಯ ವರಮಾನದಲ್ಲಿ ಶೇ. ೬ರಷ್ಟನ್ನು ಸಾಕ್ಷರತಾ ಕಾರ್ಯಕ್ರಮಗಳಿಗೆ ಮೀಸಲಿಡುವುದಾಗಿ ಹೇಳಿದ್ದಾರೆ. ಇದು ಕೇಂದ್ರ ಸರ್ಕಾರ ಸಾಕ್ಷರತೆಗೆ ನೀಡಿರುವ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಒಟ್ಟಿನಲ್ಲಿ ಔಪಚಾರಿಕವಾಗಿರಲಿ, ಅನೌಪಚಾರಿಕವಾಗಿರಲಿ, 'ಎಲ್ಲರಿಗೂ ಶಿಕ್ಷಣ'ಕ್ಕೆ ಈಗ ಇರುವ ಯೋಜನೆಗಳೇ ಸಾಕು. ಇವುಗಳನ್ನು ನಿಷ್ಠೆಯಿಂದ, ಅನುಷ್ಠಾನಕ್ಕೆ ತಂದಾಗ 'ಎಲ್ಲರಿಗೂ ಶಿಕ್ಷಣ'ದ ಗುರಿ ಮುಟ್ಟಲು ಸಾಧ್ಯ.

ಬಹುಮುಖ ಪ್ರತಿಭೆಗೆ ಒಂದು ಕಿರೀಟ

ಪ್ರಕೃತಿ

ಬಾಲ್ಯದ ದಿನಗಳಿಂದಲೂ ಸಮಾಜದ ಸತ್ವಹೀನ ವ್ಯವಸ್ಥೆಯ ವಿರುದ್ಧವಾಗಿ ಧ್ವನಿ ಎತ್ತಿ, ತಮ್ಮ ಅನುಭವಗಳನ್ನು ಕತೆ ಕಾದಂಬರಿಗಳ ಪಾತ್ರಗಳ ಮೂಲಕ ಬಿಚ್ಚಿಟ್ಟು ಓದುಗರಿಗೆ ಹಂಚುತ್ತ ತಮ್ಮ ಮನದ ತುಡಿತಗಳು ಏನೆಂಬುದನ್ನು ತೋರುತ್ತ ಕೇರಳದ ಕರಾವಳಿಯ ಉದ್ದಗಲಕ್ಕೂ 'ಎಂ.ಟಿ.' ಎಂದೇ ಹೆಸರಾದ ಎಂ.ಟಿ. ವಾಸುದೇವನ್ ನಾಯರ್‌ಗೆ ಈಗ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಇದು ಕೇರಳದ ಕುಗ್ರಾಮವೊಂದರಿಂದ ಮೂಡಿಬಂದ ನಕ್ಷತ್ರಕ್ಕೆ ಶೋಭೆ ತಂದಿದೆ. ಎಂ. ಟಿ ವಾಸುದೇವನ್ ನಾಯರ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಸುದ್ದಿ ತಿಳಿದು ಹರ್ಷದಿಂದ ಮಾತನಾಡುತ್ತ ಅಂದಿನ ಮುಖ್ಯಮಂತ್ರಿಯವರು ಈ ಸಂತೋಷ ಕೂಟವನ್ನು ಕೇರಳದ ಹಬ್ಬ ಎಂದು ಆಚರಿಸುವ ಎಂದರು. ಜ್ಞಾನಪೀಠ ಪ್ರಶಸ್ತಿ ಪಡೆದ ಮಲಯಾಳಂ ಲೇಖಕರಲ್ಲಿ ವಾಸುದೇವನ್ ನಾಯರ್ ನಾಲ್ಕನೆಯವರು. ಈ ಮುನ್ನ ಶಂಕರ ಕುರುಪ್, ಎಸ್. ಕೆ. ಪೊಟ್ಟೆಕ್ಕಾಟ್ ಮತ್ತು ತಗಳಿ ಶಿವಶಂಕರ ಪಿಳ್ಳೈ ಇವರು ಪಡೆದಿದ್ದರು. ಈಗ ಎಂ. ಟಿ. ವಿ. ಅವರ ಬಹುಮುಖ ಪ್ರತಿಭೆಗೆ ಬಂದದ್ದು ಅದೂ ಕೂಡಲ್ಲೂರಿನಂಥ ಕುಗ್ರಾಮಕ್ಕೆ ಮೂಡಿ ಬಂದ ಒಂದು ಗರಿ ಎನಿಸಿದೆ.

ಕೇರಳದ ಪಾಲಕ್ಕಾಟ್ ಜಿಲ್ಲೆಯ ಪೊನ್ನನಿ ತಾಲ್ಲೂಕಿನಲ್ಲಿ ಕೂಡಲ್ಲೂರು ಒಂದು ಕುಗ್ರಾಮ. ಇಲ್ಲಿನ ಸಂಪ್ರದಾಯಸ್ಥ ಕುಟುಂಬದ ನಾರಾಯಣನ್ ನಾಯರ್ ಮತ್ತು ಮಾಡತ್ತು ತೆಕ್ಕೇಪಾಟ್ ಅಮ್ಮಾಳ್ ದಂಪತಿಗಳಿಗೆ ೧೯೩೪ರ ಜುಲೈ ೧೫ರಲ್ಲಿ ವಾಸುದೇವನ್ ನಾಯರ್ ಹುಟ್ಟಿದರು, ಅವರು ಹುಟ್ಟಿದಾಗ ಮನೆಯಲ್ಲಿ ಬಡತನ ತಾಂಡವವಾಡುತ್ತಿತ್ತು. ಬಡತನದ ನಡುವೆಯೂ ಅಳಿಯ ಸಂತಾನದ ಯಜಮಾನಿಕೆಯ ದಬ್ಬಾಳಿಕೆಯನ್ನು ಚಿಕ್ಕ ವಯಸ್ಸಿನ ಪಿಳಿ ಪಿಳಿ ಕಣ್ಣುಗಳಿಂದಲೇ ಭಯಗ್ರಸ್ಥನಾಗಿ ಕಂಡದ್ದುಂಟು.

ಕೇರಳದ ನಾಯರ್ ಜನಾಂಗದಲ್ಲಿ ಅಳಿಯನೇ ಯಜಮಾನ. ಹೆಣ್ಣು ಮಕ್ಕಳೇ ಆಸ್ತಿಯ ವಾರಸುದಾರರು ಆದುದರಿಂದ ಅಳಿಯನೇ ಒಡೆಯ. ಅಳಿಯನ ಹಿಡಿತದಲ್ಲಿ ಮನೆಯಲ್ಲಿ ಉಳಿದವರೆಲ್ಲರೂ ಅವಿಭಕ್ತ ಕುಟುಂಬದ ಸದಸ್ಯರು. ಅಳಿಯ ನಡೆಸಿದಂತೆ ನಡೆದುಕೊಂಡ ದಿನಗಳೂ ಇದ್ದವು. ಬಡ

ಲಾಗುವ ದಿನಗಳಲ್ಲೂ ಇಂಥ ಹಿಡಿತದಲ್ಲಿ ಸತ್ವ ಹೀನಬದುಕನ್ನು ಸೂಕ್ಷ್ಮವಾಗಿಯೆ ಅನುಭವಿಸಿ ಅದನ್ನು ಪ್ರತಿಭಟಿಸುವ ಆಲೋಚನೆಯನ್ನು ಹಲವು ಯುವಕರು ಕಂಡುಕೊಳ್ಳತೊಡಗಿದರು. ಇಂಥ ಅನುಭವದ ಮೂಸೆಯಿಂದ ಹೊರಬಂದದ್ದು ಅವರ 'ನಾಲುಕೆಟ್ಟು', ಆಗಿನ್ನು ವಾಸುದೇವನ್ ನಾಯರ್ ೨೩ ವಯಸ್ಸಿನವರು. ಈ ಕೃತಿ ಉತ್ತಮವಾಗಿದೆ ಎಂದು ಪರಿಗಣಿಸಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿತು.

ವಾಸುದೇವನ್ ನಾಯರ್ ಅವರ ಉತ್ತಮ ಶೈಲಿಯ 'ಇರುಟ್ಟಿಂಡೆ ಆತ್ಮಾವು' ಒಬ್ಬ ಮಾನಸಿಕ ಅತೃಪ್ತ ಯುವಕನ ಸುತ್ತ ರಚಿಸಿದ ಕತೆ. ನಾಯಕನ ಮಾನಸಿಕ ತುಮುಲಗಳನ್ನು ತಮ್ಮದೇ ಆದ ನೈಜ ಭಾಷೆಯಲ್ಲಿ ಹೇಳಿಕೊಂಡು ಹೋಗುತ್ತಾರೆ. ೧೯೭೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದುಕೊಂಡ 'ಕಾಲಂ' ಕೂಡ ಉತ್ತಮ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ. ತನ್ನ ಪ್ರಿಯಕರನಿಗಾಗಿ ಬದುಕಿನುದ್ದಕ್ಕೂ ಕಾಯುಬಯಸುವ ವಿಮಲಳ ಸಂವೇದನಾತ್ಮಕ ಪಾತ್ರವನ್ನು ಅವರ ನೀಳ್ಗತೆ 'ಮಂಜು'ನಲ್ಲಿ ಕಾಣುತ್ತೇವೆ.

ಪ್ರತಿಷ್ಠಿತ ವಯಲಾರ್ ಪ್ರಶಸ್ತಿಯನ್ನು ೧೯೮೪ರಲ್ಲಿ ತನ್ನದಾಗಿಸಿಕೊಂಡ 'ರಂಡಾಮೂಳಂ' ಬರೆಯಲು ಆರು ವರ್ಷಗಳೇ ಬೇಕಾಯಿತು. ಮಹಾಭಾರತದ ಭೀಮನ ಪಾತ್ರವನ್ನು ಕೇಂದ್ರವಾಗಿರಿಸಿಕೊಂಡ ಈ ಕೃತಿ ಓದುಗರ, ವಿಮರ್ಶಕರ ಗಮನಸೆಳೆದು ಮುಟ್ಟತ್ತುವರ್ಕಿ ಪ್ರಶಸ್ತಿಯನ್ನು ದೋಚಿಕೊಂಡಿತು ಎಂಬುದು ಗಮನಾರ್ಹವಾದ ಸಂಗತಿ. ಹಾಗೆಯೆ ೧೯೮೬ರಲ್ಲಿ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡ 'ಸ್ವರ್ಗಂ ತುರಕ್ಕನ್ನ ಸಮಯಂ' ಸಹ ಒಂದು ಸಾಮಾಜಿಕ ತೊಳಲಾಟದ ನಡುವೆ ಬದುಕುವ ಪಾತ್ರಗಳ ಸುತ್ತ ಹೆಣೆದ ವಸ್ತು. ಕನ್ನಡದ 'ಸಂಸ್ಕಾರ'ದಲ್ಲಿ ಅನಂತಮೂರ್ತಿಯವರು ಚಿತ್ರಿಸಿರುವ ಪ್ರಾಣೇಶಾಚಾರ್ಯನಂತೆ ಇಲ್ಲಿ ಗೋವಿಂದನ್ ಕುಟ್ಟಿಯ ಪಾತ್ರವನ್ನು ಸಮೀಕರಿಸಬಹುದು.

ಬರಿ ಕಾದಂಬರಿ, ಸಣ್ಣ ಕತೆಗಳಷ್ಟಕ್ಕೆ ಸೀಮಿತರಾಗದ ಎಂ.ಟಿ.ವಿ. ಅವರು ನಾಟಕಗಳನ್ನು ಬರೆದಿದ್ದಾರೆ. ಅವರು ಬರೆದ 'ಗೋಪುರ ನಡೆಯಿಲ್'' ನಾಟಕ ಅಕಾಡೆಮಿ ಬಹುಮಾನ ಪಡೆಯಿತು. ಇದಲ್ಲದೆ ಪ್ರವಾಸ ಕಥನಗಳನ್ನು ಬರೆದಿದ್ದಾರೆ.

'ವಾನಪ್ರಸ್ತಂ' ಕಾವ್ಯ ಮಾದರಿಯ ಕಾದಂಬರಿ ರೀತಿಯದು. ಮುರಿದು ಬಿದ್ದ ತಮ್ಮ ಯೌವನ ಕಾಲದ ಪ್ರೇಮ ಪ್ರಸಂಗವನ್ನು ಒಂದು ಪುಣ್ಯ ಕ್ಷೇತ್ರದಲ್ಲಿ ಬಹಳ ಕಾಲದ ನಂತರ ಆಕಸ್ಮಿಕವಾಗಿ ಸಂಧಿಸಿದ ವೃದ್ಧ-ವೃದ್ಧೆ ಈ ಇಬ್ಬರೂ ನೆನಪು ಮಾಡಿಕೊಳ್ಳುವುದು. ಇಲ್ಲಿನ ವಸ್ತು. ಈ ಕೃತಿಯ ಬಗ್ಗೆ ಮಲೆಯಾಳಂನ ಲೇಖಕ ಎನ್. ಪಿ. ಮಹಮ್ಮದ್ ಅವರು 'ಅಲ್ಪ ಕಾಲದ ಮೌನದ ನಂತರ ವಾಸುದೇವನ್‌ನಾಯರ್ ಬರೆದ 'ವಾನಪ್ರಸ್ತಂ' ರಚನೆಯು ಜೀವನವೇ ಭಾಷೆಯಾದಂತೆ ಸಂವೇದನಾಶೀಲ ಕೃತಿಯಾಗಿದೆ. ಕಥೆ ಹೇಳಿಕೊಂಡು ಹೋಗುವಲ್ಲಿ ಬಳಸಿರುವ ಭಾಷೆ ಉದ್ದಕ್ಕೂ ಓದಿಸಿಕೊಂಡು ಹೋಗುವ ವಾಹಿನಿಯಂತಿದೆ' ಎಂದಿದ್ದಾರೆ.

ಮಲೆಯಾಳಂನ ಲೇಖಕಿ ಮಾಧವಿ ಕುಟ್ಟಿ 'ವಾಸುದೇವನ್‌ನಾಯರ್ ಸೃಷ್ಟಿಸುವ ಬಹುತೇಕ ಪಾತ್ರಗಳು ಗ್ರಾಮೀಣ ಬದುಕಿನಿಂದ ಬಂದಂಥವು. ಉದ್ದಕ್ಕೂ ಜೀವ ತುಂಬಿಕೊಂಡಿರುತ್ತದೆ' ಎಂದು ಇದಕ್ಕೆ ಅವರ 'ರಂಡಾಮುಳಂ' ಕೃತಿಯನ್ನು ಉದಾಹರಿಸುತ್ತಾರೆ.

ಜ್ಞಾನಪೀಠ ಪ್ರಶಸ್ತಿ ವಿಜೇತ ಯು. ಆರ್. ಅನಂತಮೂರ್ತಿ ಅವರು 'ವಾಸು ಅವರ ಕಥೆಗಳು ನಮ್ಮನ್ನು ಹೊಸ ಲೋಕಕ್ಕೆ ಕೊಂಡೊಯ್ಯುತ್ತವೆ' ಎನ್ನುತ್ತಾರೆ.

ಮಲೆಯಾಳಂ ಲೇಖಕ ಎಂ. ಎನ್. ಕಾರಶೇರಿ ಅವರು ಮಾತೃಭೂಮಿ ಪತ್ರಿಕೆಯ ಸಾಪ್ತಾಹಿಕಕ್ಕೆ ಬರೆಯುತ್ತಾ 'ಎಂ. ಟಿ. ವಿ ಅವರಿಗೆ ಬಂದ ಜ್ಞಾನಪೀಠ ಪ್ರಶಸ್ತಿ ಕೇರಳದ ಸಾಂಸ್ಕೃತಿಕ ಬದುಕಿಗೇ ಬಂದ ಚರಿತ್ರಾರ್ಹ ಪ್ರಶಸ್ತಿ. ಅವರು ಸೃಷ್ಟಿಸುವ ಕಥಾ ಪಾತ್ರಗಳು ಕಾಲದಲ್ಲೆ ಲೀನವಾಗದೆ ಪ್ರವಾಹದಂತೆ ಸದಾ ಹರಿಯುತ್ತವೆ; ಕತೆಗಾರನ ಆತ್ಮ ಸಂವೇದನೆಯನ್ನು ತೆರೆದಿಡುತ್ತದೆ. ವಾಸುದೇವನ್‌ನಾಯರಂಥ ಸತ್ವ ಪೂರಿತ ಲೇಖಕರು ಮಲೆಯಾಳಂ ಸಾಹಿತ್ಯದಲ್ಲಿ ಇನ್ನೊಬ್ಬರಿಲ್ಲ' ಎಂದಿದ್ದಾರೆ.


೧೯೪೮ರಲ್ಲಿ 'ವೀಸುಕ್ಕೈನೀಟ್ಟುಂ' ಎಂಬ ಕತೆ ಬರೆದು ಮಲೆಯಾಳಂ ಸಾಹಿತ್ಯ ಲೋಕಕ್ಕೆ ಪರಿಚಯವಾದ ವಾಸುದೇವನ್ ನಾಯರ್ ೧೯೫೪ರಲ್ಲಿ 'ನ್ಯೂಯಾರ್ಕ್ ಹೆರಾಲ್ಡ್' ಮತ್ತು 'ಮಾತೃಭೂಮಿ' ಪತ್ರಿಕೆಗಳು ಸಂಯುಕ್ತವಾಗಿ ನಡೆಸಿದ ವಿಶ್ವ ಕಥಾ ಸ್ಪರ್ಧೆಯಲ್ಲಿ 'ವಳರ್ತುಮೃಗಂಗಳ್' ಮೂಲಕ ತಮ್ಮ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡರು. 'ಮಾತೃಭೂಮಿ' ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಕೆಲಸಕ್ಕೆ ಸೇರಿಕೊಂಡರಲ್ಲದೆ, ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಕೂಡ ಆದರು. ಹೀಗೆಯೇ 'ಪಾದಿರಾವು ಪಗಲ್‌ವೆಳಿಚ್ಚವುಂ' 'ಅಸುರವಿತ್ತ' 'ಕಥೆಕ್ಕಂಡೆ ಮಣಿಪ್ಪುರಂ' 'ವಿಲಾಪಯಾತ್ರಾ' 'ದಯಾ ಎನ್ನ ಪೆಣ್‌ಕುಟ್ಟಿ' 'ಎಂಡೆ ಪ್ರಿಯಪ್ಪಟ್ಟ ಕಿರು ಕಥಗಳ್' 'ಎಂಡೆ ಓರ್ಮಕಳ್' ಮುಂತಾದ ಕೃತಿಗಳನ್ನು ಮಲೆಯಾಳಂ ಸಾಹಿತ್ಯಕ್ಕೆ ನೀಡಿ 'ಎಂ.ಟಿ.' ಎಂದೇ ಪ್ರಸಿದ್ಧರಾದರು.

ಸಾಹಿತ್ಯ ಕ್ಷೇತ್ರದಂತೆ ಚಲನ ಚಿತ್ರರಂಗದಲ್ಲೂ ತಮ್ಮದೇ ಆದ ಪ್ರಭಾವವನ್ನು ಸೃಷ್ಟಿಸಿಕೊಂಡಿರುವ ವಾಸುದೇವನ್ ನಾಯರ್ ಅವರು 'ಮುರಪೆಣ್' ಚಿತ್ರಕ್ಕೆ ಚಿತ್ರಕತೆ ಬರೆಯುತ್ತ ಬಣ್ಣದ ಲೋಕಕ್ಕೂ ಪ್ರವೇಶಿಸಿದರು. ಪ್ರಾರಂಭದಲ್ಲಿಯೇ ಉತ್ತಮ ಚಿತ್ರಕತೆಗಾಗಿ ಇರುವ ಪ್ರಶಸ್ತಿಯನ್ನು ಗೆದ್ದರು. ಇವರೇ ಬರೆದ 'ಇರುಟ್ಟಿಂಡೆ ಆತ್ಮಾವ್' 'ಪರಿಣಯಂ' 'ಆರೂಢಂ' 'ಒಪ್ಪೋಳ್' 'ಒರು ವಡಕ್ಕನ್ ವೀರಗಾಥ' ಕತೆಗಳೂ ಬೆಳ್ಳಿ ತೆರೆಯ ಮೇಲೆ ಮಿಂಚಿ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಸೂರೆ ಮಾಡಿದವು. 'ಅನುಬಂಧಂ' 'ಅಮೃತಂಗಮಯಂ' ಇವು ರಾಜ್ಯ ಪ್ರಶಸ್ತಿ ಪಡೆದವು. ಎಂ. ಟಿ. ವಿ. ಅವರೆ ನಿರ್ದೇಶಿಸಿದ 'ನಿರ್ಮಾಲ್ಯಂ' ರಾಷ್ಟ್ರಪತಿ ಚಿನ್ನದ ಪದಕ ಗೆದ್ದುಕೊಂಡಿತು. ಅಲ್ಲದೆ 'ವಳರ್ತುಮೃಗಂ-ಗಳ್' 'ಸುಕೃತಂ' ಇವು ಭಾರತೀಯ ಪನೋರಮ ಪ್ರಶಸ್ತಿಯನ್ನು ಪಡೆದವು.

ಹೀಗೆ ಹತ್ತಾರು ಚಿತ್ರಗಳಿಗೆ ಚಿತ್ರಕತೆ ಬರೆದರು. ತಾವೇ ಚಿತ್ರಗಳನ್ನು ನಿರ್ದೇಶಿಸಿಯೂ ತಮ್ಮ ಪ್ರತಿಷ್ಠೆ ತೋರಿದರು. ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ಬೆಳ್ಳಿ ತೆರೆಯ ಲೋಕದಲ್ಲೂ ಮಿಂಚುತ್ತ ಮಿನುಗಿದರು.

ಸಾಹಿತ್ಯದ ಹಲವು ಪ್ರಾಕಾರಗಳಾದ ಸಣ್ಣ ಕತೆ, ಕಾದಂಬರಿ, ನಾಟಕ, ಪ್ರವಾಸಕಥನ ಮತ್ತು ಹಲವ ಲೇಖನಗಳನ್ನು ಬರೆದು ಕೇರಳದ ಕರಾ ವಳಿಯ ಉದ್ದಕ್ಕೂ 'ಎಂ. ಟಿ.' ಎಂದೇ ಹೆಸರಾದ ಇವರು ಇಂಗ್ಲಿಷಿನ ಎಂಟಿ ಆಗ 'ಜ್ಞಾನಪೀಠ' ಪ್ರಶಸ್ತಿಯನ್ನೂ ಪಡೆದ ಕೊಂಡರು.

(ಪರಮಶಿವ ನಡುಬೆಟ್ಟ



ಹಲವರು, ಜೀವಮಾನವೆಲ್ಲ ಅನೇಕ ದುರ್ಘಟನೆಗಳ ಬಗ್ಗೆಯೇ ಚಿಂತಿಸುತ್ತಿರುತ್ತಾರೆ. ಆದರೆ ಆಶ್ಚರ್ಯವೆಂದರೆ, ಅವರು ಚಿಂತಿಸುವ ಹಲವು ದುರ್ಘಟನೆಗಳು ಅವರ ಜೀವನದಲ್ಲಿ ಸಂಭವಿಸುವುದಿಲ್ಲ ಕೂಡಾ. ಆದ್ದರಿಂದ ಅಂಥ ಚಿಂತೆ ಎಷ್ಟು ವ್ಯರ್ಥವೆಂಬುವನ್ನವರು ಮೊದಲೇ ತಿಳಿದುಕೊಂಡರೆ ಹರ್ಷಚಿತ್ತರಾಗಿರಬಹುದು.

—ಹಬಾರ್

ಇತರರನ್ನು ಅನುಸರಿಸುವುದಕ್ಕಿಂತ ನಿಮ್ಮ ಸದಸದ್ವಿವೇಕ ಬುದ್ಧಿಯಂತೆ ನಡೆದುಕೊಳ್ಳಿರಿ. ಇತರರಿಂದ ಎರವು ತಂದ ಶಕ್ತಿ ಸಾಮರ್ಥ್ಯಗಳಿಗಿಂತ ನಿಮ್ಮ ಸ್ವಂತ ಪ್ರಭಾವದ ಮೇಲೆಯೇ ಜೀವಿಸಲು ಕಲಿಯಿರಿ.

—ಎಮರ್ಸನ್

ಜ್ಞಾನಪೀಠ ಪ್ರಶಸ್ತಿ ವಿಜೇತರ ಬಾಲ್ಯ

ಪರಮಶಿವ ನಡುಬೆಟ್ಟ

ಮಲೆಯಾಳಂ ಸಾಹಿತ್ಯದಲ್ಲಿ ಹಲವು ಪ್ರಾಕಾರಗಳಾದ ಸಣ್ಣಕತೆ, ಕಾದಂಬರಿ, ನಾಟಕ, ಪ್ರಬಂಧ, ಪ್ರವಾಸ ಕಥೆಗಳನ್ನು ಬರೆದು ಈಚೆಗೆ ಜ್ಞಾನಪೀಠ ಪ್ರಶಸ್ತಿ ಪಡೆದುಕೊಂಡ ಪ್ರಸಿದ್ಧ ಲೇಖಕ ಎಂ. ಟಿ. ವಾಸುದೇವನ್ ನಾಯರ್ ಅವರು ಮಲೆಯಾಳಂ ಮನೋರಮ ವಾರಪತ್ರಿಕೆಗೆ ತಮ್ಮ ಬರಹದ ಬಾಲ್ಯದಿನಗಳನ್ನು ನೆನೆದು ಬರೆದ 'ಎಳುತ್ತಿಂಡೆ ಬಾಲ್ಯಂ'ನ ಸಾರಾಂಶ.

ವಾಸುದೇವನ್ ನಾಯರ್ ಬರೆಯಲು ಪ್ರಾರಂಭಿಸಿದಾಗ ಅವರಿಗಿನ್ನೂ ಹದಿನೈದು ವರ್ಷ. ಪತ್ರಿಕೆಯೊಂದರ ಲೇಖನದ ಕೆಳಗೆ ಅವರು ತಮ್ಮ ಹೆಸರನ್ನು ಕಾಣುವ ಭಾಗ್ಯ ಬಂದದ್ದು ೧೯೪೮ರಲ್ಲಿ. ಅದೂ ಗುರು-ವಾಯೂರಿನಿಂದ ಪ್ರಕಟವಾಗುತ್ತಿದ್ದ 'ಕೇರಳ ಕ್ಷೇಮಂ' ಎಂಬ ಪತ್ರಿಕೆಯಲ್ಲಿ. ಆಗ ಪತ್ರಿಕೆಗೆ ಏನಾದರೂ ಬರೆದು ಕಳುಹಿಸಬೇಕಾದರೂ ಮನೆಯಲ್ಲಿ ಹಿರಿಯರ ಅನುಮತಿ ಕೋರಿ ಕಳುಹಿಸಬೇಕಿತ್ತು.

ಅನೇಕ ಪತ್ರಿಕೆಗಳಿಗೆ ಅವರು ಬರೆದ ಕತೆಗಳನ್ನು ಕಳುಹಿಸುತ್ತಿದ್ದರು. ಯಾರೂ ಅವುಗಳನ್ನು ಪ್ರಕಟಿಸುತ್ತಿರಲಿಲ್ಲ. ಪ್ರಕಟಿಸಲು ಆಗದಿದ್ದರೆ ಹಿಂದಿರುಗಿಸಿ ಎಂದು ಹೇಳಲು ಸ್ಟ್ಯಾಂಪ್ ಇಡಬೇಕಿತ್ತು. ಅದಕ್ಕೂ ಅವರಲ್ಲಿ ಕಾಸು ಇರುತ್ತಿರಲಿಲ್ಲ. ವಾರಕ್ಕೆ ಐದು-ಆರು ಕತೆಗಳನ್ನು ಬರೆದು ಹಲವು ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ಅಲ್ಲದೆ ಅಂಚೆ ಕಛೇರಿಗೆ ಹೋಗಿ ತಮ್ಮ ಕತೆ ಪ್ರಕಟವಾದ ಪತ್ರಿಕೆಯ ಪ್ರತಿಯೇನಾದರೂ ಬರಬಹುದೇನೋ ಎಂದು ಕಾಯುತ್ತಿದ್ದರು. ಯಾವೊಂದು ವಾರಪತ್ರಿಕೆಯೂ, ಮಾಸಪತ್ರಿಕೆಯೂ ಬರುತ್ತಿರಲಿಲ್ಲ. ಹೀಗಿರುವಾಗ ಮದರಾಸಿನಿಂದ ಎಂ.ವಿ. ದೇವನ್ ಎಂಬುವವರ ಸಂಪಾದಕತ್ವದಲ್ಲಿ 'ಚಿತ್ರ ಕೇರಳಂ' ಎಂಬ ಮಾಸ ಪತ್ರಿಕೆ ಬರತೊಡಗಿತು.

ಈ ಸಂದರ್ಭದಲ್ಲಿ ತಗಳಿ ಶಿವಶಂಕರಪ್ಪಿಳ್ಳೈ, ಕರೂರು ನೀಲಕಂಠಪ್ಪಿಳ್ಳೈ, ಇಂಥ ಹಿರಿಯರ ಹೆಸರನ್ನು ಅನುಕರಿಸಿ ಅವರೂ ರವೀಂದ್ರನಾಥ ಠಾಕೂರರ ಒಂದು ಕವಿತೆಯನ್ನು ಓದಿ ಅಭಿಪ್ರಾಯ ಬರೆದು ಅದರ ಕೆಳಗೆ ಕೂಡಲ್ಲೂರು ವಾಸುದೇವನ್ ನಾಯರ್ ಎಂದು ತಮ್ಮ ಹೆಸರನ್ನು ಬರೆದರು. ಅದೇ ಮಾಸಿಕಕ್ಕೆ 'ವೀಸು-ಕ್ಕೈನೀಟ್ಟ್ಂ' ಎಂಬ ಸಣ್ಣ ಕತೆಯನ್ನು ಎಂ.ಟಿ. ವಾಸುದೇವನ್ ನಾಯರ್ ಎಂಬ ಹೆಸರಿನಲ್ಲಿ ಕಳುಹಿಸಿದರು. ಇದಲ್ಲದೆ ಎಸ್. ಕೆ. ಪೊಟ್ಟೆಕಾಟ್ ಅವರ

ಹೆಸರನ್ನು ಅನುಕರಿಸಿ ಅವರೂ ತಮ್ಮ ಹೆಸರನ್ನು ವಿ. ಎನ್. ತೆಕ್ಕೇಪಾಟ್ ಎಂಬ ಹೆಸರಿನಲ್ಲೂ ಬರೆದರು. ಹೇಗಾದರೂ ಪತ್ರಿಕೆಗಳಲ್ಲಿ ಬರುತ್ತದೊ ಏನೊ ಎಂದು ನೋಡಲು ಅಂಚೆ ಕಛೇರಿಗೆ ಹೋದರು. ಒಂದು ದಿನ 'ಚಿತ್ರಕೇರಳಂ' ಎಂಬ ಮಾಸ ಪತ್ರಿಕೆ ಬಂತು. ಅದರಲ್ಲಿ ಅವರ ಮೂರು ಹೆಸರಿಗೂ ಅದರ ಸಂಪಾದಕರು ಪತ್ರ ಬರೆದು 'ನಿಮ್ಮ ಸಾಹಿತ್ಯ ಸೃಷ್ಟಿಯು ಬಹಳ ಚೆನ್ನಾಗಿದೆ. ನೀವು ಇನ್ನೂ ಬರೆಯಬೇಕು. ನಾಡಿನಲ್ಲಿ "ಚಿತ್ರಕೇರಳಂ"ನ ಹೆಸರನ್ನು ಉಳಿಸಬೇಕು' ಎಂದು ತಿಳಿಸಿದ್ದರು.

ಈ ಸಂತೋಷದಲ್ಲಿರುವಾಗ ಕುರಿಪ್ಪುರು ರೈಲ್ವೆ ಸ್ಟೇಷನ್‌ನಿಂದ ನಿಮಗೆ ಒಂದು ಪಾರ್ಸಲಿದೆ ಅದನ್ನು ಕಾಸುಕೊಟ್ಟು ಬಿಡಿಸಿಕೊಳ್ಳಿ ಎಂದು ಒಂದು ತಿಳಿವಳಿಕೆ ಪತ್ರವೂ ಬಂತು. ರೈಲ್ವೆ ಸ್ಟೇಷನ್ನಿಗೆ ಹೋಗಿ ವಿಚಾರಿಸಲು ಐವತ್ತು, ಐವತ್ತು ಪುಸ್ತಕಗಳ ಮೂರು ಕಟ್ಟುಗಳು ಎಂ.ಟಿ. ವಾಸುದೇವನ್ ನಾಯರ್, ಕೂಡಲ್ಲೂರು ವಾಸುದೇವನ್ ನಾಯರ್ ಮತ್ತು ವಿ. ಎನ್. ತೆಕ್ಕೇಪಾಟ್ ಎಂದು ಮೂರು ಹೆಸರಿನಲ್ಲೂ ಇದ್ದವು. ಎಲ್ಲೊ ಸಾಲ ಪಡೆದು ಹೋಗಿ ಆ ಬಾಂಗಿಗಳನ್ನು ಬಿಡಿಸಿಕೊಂಡು ಬಂದರು. ಇಂಥ ಹಲವಾರು ಅನುಭವಗಳು ಹಲವು ಸಾಹಿತಿಗಳ ಬದುಕಿನ ಆರಂಭದಲ್ಲಿ ಆಗಿರಲೂ ಸಾಧ್ಯ.

ಆ ಕಾಲದಲ್ಲಿ ಪತ್ರಿಕೆಗಳಲ್ಲಿ ಕತೆಗಳು ಪ್ರಕಟವಾದರೆ ಮನೆಯಲ್ಲಿ ಭಯಂಕರ ರಂಪ ಆಗುತ್ತಿತ್ತು. 'ಮನೆಯಲ್ಲಿ ಪಾಠ ಓದುವುದು ಬೇಡ, ಬೀದಿಯಲ್ಲಿ ಕಂಡದ್ದು, ಕೇಳಿದ್ದನ್ನು ಬರೆಯುತ್ತ ಬರುತ್ತಿರು' ಎಂದು ಅವರ ಅಮ್ಮ ಆಕ್ಷೇಪಿಸಿದಂತೆ 'ಭಕ್ತಿ ವಿಷಯದ ಬಗ್ಗೆ ಅವನೆಲ್ಲಿ ಚಿಂತಿಸುತ್ತಾನೆ? ಕಣ್ಣಲ್ಲಿ ಕಂಡ ಹೆಣ್ಣು ಗಂಡುಗಳ ಕತೆಗಳನ್ನೆಲ್ಲ ಬರೆಯುತ್ತಾನೆ' ಎಂದು ತಂದೆ ಗೊಣಗುತ್ತಿದ್ದರು.

ತಗಳಿಯವರ ಸಾಹಿತ್ಯದ ಪ್ರಭಾವದಿಂದ ಕೃಷಿಕರ ಬಗ್ಗೆ ವಾಸುದೇವನ್ ನಾಯರ್ ಸಹ ಸುಮಾರು ೨೦೦ ಪುಟಗಳಷ್ಟು ಒಂದು ಕಾದಂಬರಿಯನ್ನು ಬರೆದರು. ಎರಡು ತಿಂಗಳು ಕಳೆದ ಮೇಲೆ ಒಂದೆರಡು ಕಡೆ ಅದನ್ನು ಓದಿದರು. ಅದರಲ್ಲಿ ಆವೇಗಕ್ಕೆ ಅವಕಾಶವಿದೆ ಎಂಬುದನ್ನು ತಿಳಿದ ಮೇಲೆ ಪ್ರಕಟಿಸಲು ಮನಸ್ಸು ಮಾಡಲಿಲ್ಲ. ಆದರೂ ನಾಡಿನ ಕೃಷಿಕ ಕೂಲಿಕಾರರ ಬಗ್ಗೆ ಒಂದು ಕಾದಂಬರಿಯನ್ನು ಚಿಕ್ಕವಯಸ್ಸಿನಲ್ಲಿ ಬರೆಯಲು ಶ್ರಮವಹಿಸಿದ ಸಂತೋಷ, ನೆಮ್ಮದಿಯನ್ನು ಇಂದೂ ನೆನೆದುಕೊಳ್ಳುತ್ತಾರೆ.

ಬಿ.ಎಸ್ಸಿ ಪದವಿ ಮುಗಿಸಿದ ಮೇಲೆ ಕೆಲಸಕ್ಕಾಗಿ ಅಲೆಯುತ್ತ ಪಾಲಕ್ಕಾಟ್‌ನ ಒಂದು ಟ್ಯುಟೋರಿಯಲ್ ಕಾಲೇಜಿನಲ್ಲಿ ಶಿಕ್ಷಕ ವೃತ್ತಿಗೆ ಸೇರಿದರು. ಅಲ್ಲಿನ ಮುಖ್ಯಸ್ಥರ ಸಹಕಾರ ಮತ್ತು ಒತ್ತಾಯದಿಂದ 'ಮಲಯಾಳಿ' ಎಂಬ ಪತ್ರಿಕೆಗೆ 'ಪಾತಿರಾವುಂ ಪಗಲ್‌ವಿಳಿಚ್ಚುವುಂ' ಕಾದಂಬರಿ ಬರೆದರು. ಅದು ಪ್ರಕಟವಾಯಿತು. 'ನಾಲುಕೆಟ್ಟು' ಎಂಬ ಕಾದಂಬರಿ ಸಹ ಪುಸ್ತಕ ರೂಪದಲ್ಲಿ ಬಂತು. ಇದಕ್ಕೂ ಮುಂಚೆ 'ಮೋಕ್ಷತ್ತಿಂಡೆ ಪಡಿವಾದಿಲ್' ಕತೆ ಪ್ರಕಟವಾಗಿತ್ತು. 'ಒಪ್ಪೋಳ್', 'ಒರು ಪಿರನ್ನಾಳಿಂಡೆ ಓರ್ಮ್ಮೈಕ್ಕು', 'ಇರಟ್ಟಿಂಡೆ ಆತ್ಮಾವ್' ಇನ್ನೂ ಹಲವಾರು ಕತೆಗಳನ್ನು ಬರೆದರು.

ಟ್ಯುಟೋರಿಯಲ್‌ನಲ್ಲಿ ಪಾಠಮಾಡುವಾಗ ಬರುತ್ತಿದ್ದ ಹಣದಲ್ಲಿ ಪುಸ್ತಕ ಪ್ರಕಟಿಸುವ ಯೋಚನೆ ಮಾಡಿದರೂ ಭಯಂಕರ ಬಡತನವನ್ನು ಕಿತ್ತುತಿನ್ನುವ ಕಾಲವಾಗಿತ್ತು. ಈ ಸಾಹಸ ಅವರಿಂದ ಆಗಲಿಲ್ಲ. ಬಟ್ಟೆಗಳ ಕೊರತೆಯೂ ಇತ್ತು. ಇದ್ದ ಒಂದೊ ಎರಡೊ ಅಂಗಿ, ಪಂಚೆಗಳನ್ನೆ ತೊಳೆದು ಹಾಕಿಕೊಳ್ಳುವ ಪರಿಸ್ಥಿತಿಯಲ್ಲಿದ್ದರು.

ಇಂಥ ಕೆಟ್ಟ ದಿನಗಳಲ್ಲಿ ಒಂದು ದಿನ ಮನೆಯ ಮುಂದೆ ಒಂದು ಕಾರು ಬಂದು ನಿಂತಿತು. ಯಾರನ್ನೊ ಕಾಣಲು ಬಂದಿರಬಹುದೆಂದು ಯೋಚಿಸುತ್ತಿದ್ದರು. ಆ ಕಾರಿನಿಂದ ಇಳಿದು ಬಂದ ವ್ಯಕ್ತಿ 'ವಾಸುದೇವನ್ ನಾಯರ್ ಉಂಡೊ?' (ವಾಸುದೇವನ್ ನಾಯರ್ ಉಂಟೊ?) ಎಂದು ಕೇಳಿದರು. ಅವರು ತಮ್ಮ ಪರಿಚಯ ಮಾಡಿಕೊಂಡರು. ಬಂದಿದ್ದ ವ್ಯಕ್ತಿ ಸಹ ತಮ್ಮ ಪರಿಚಯ ಮಾಡಿಕೊಳ್ಳುತ್ತ 'ನಾನು ಜಾರ್ಜ್ ಎಂದು ಸಿಂಗಾಪುರದಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ಕೇರಳದಲ್ಲಿರುವ ಯುವ ಬರಹಗಾರರ ಹಲವು ಪುಸ್ತಕಗಳನ್ನು ಪ್ರಕಟಿಸಲು ಯೋಚಿಸುತ್ತಿರುವೆ.' ಎಂದರಲ್ಲದೆ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿರುವ ಇವರ ಹಲವು ಸಣ್ಣಕತೆಗಳನ್ನು ಸೇರಿಸಿ ಒಂದು ಕಥಾ ಸಂಕಲನ ತರುವುದಾಗಿ ಹೇಳಿ ಮುಂಗಡವಾಗಿ ೨೦೦ ರೂಪಾಯಿಗಳನ್ನು ಗೌರವ ಧನವನ್ನಾಗಿ ನೀಡಿದರು. ಅದು ಇಂದಿನ ೨೦,೦೦೦ ರೂಪಾಯಿಗಳಿಗೆ ಸಮ ಎನಿಸುತ್ತದೆ.

ಊಟಕ್ಕೂ ಕಾಸಿಲ್ಲದೆ, ಕೆಲಸ ಹುಡುಕಿ ಅಲೆಯುತ್ತ ಸಣ್ಣ ಮಾಸ್ತರರ ಕೆಲಸದಲ್ಲಿ ಬರುತ್ತಿದ್ದ ಸ್ವಲ್ಪ ಸಂಬಳದಲ್ಲಿ ಬದುಕುತ್ತ, ತರಗತಿಯ ಬೆಂಚುಗಳನ್ನೆ ಹಾಕಿ ಮಂಚಮಾಡಿಕೊಂಡು ತಡಿಕೆಯ ಬಾಗಿಲನ್ನು ಮುಚ್ಚಿ ರಾತ್ರಿ ಕಳೆಯುವ ಸಂದರ್ಭದಲ್ಲಿ ಆ ವ್ಯಕ್ತಿ ದೇವ ದೂತನಂತೆ ಬಂದು ಪುಸ್ತಕ ಪ್ರಕಟಿಸಲು ಅವರಿಗೆ ಕೊಟ್ಟ ಹಣ, ಮನೆಬಿಟ್ಟಾಗ ಕೂಲಿಯವನಿಂದ ಪಡೆದು ಹೊರಟ ಚಿಕ್ಕ ಕಾಸು, ರೈಲ್ವೆ ಸ್ಟೇಷನ್ನಿನಲ್ಲಿ ಪುಸ್ತಕದ ಕಟ್ಟುಗಳನ್ನು ಬಿಡಿಸಿಕೊಳ್ಳಲು ಸಾಲ ನೀಡಿದ ವ್ಯಕ್ತಿ ಇವರನ್ನೆಲ್ಲ 'ಜ್ಞಾನಪೀಠ' ಪ್ರಶಸ್ತಿ ಬಂದ ಈ ಸಮಯದಲ್ಲಿ ಹೇಗೆ ತಾನೆ ಮರೆಯಲು ಸಾಧ್ಯ?

ನನ್ನನ್ನು ವ್ಯಕ್ತಿಯೆಂದು ಪೂಜಿಸುವವನು ಮೂಢ. ಎಲ್ಲರಲ್ಲಿಯೂ ಅಸ್ತಿತ್ವವನ್ನು ಭಾವಿಸಿ ಪ್ರೀತಿಸುವವನು ನನ್ನನ್ನು ಸರಿಯಾಗಿ ಅರಿತುಕೊಂಡವನು.

—ಶ್ರೀಕೃಷ್ಣ

ಶಾನುಭೋಗರ ಪಟ್ಟು

ಅರುಣ್‌ಚಂದ್ರ ಮುಧೋಳ್

ಬಹಳ ವರ್ಷಗಳಿಂದಲೂ ನಮ್ಮ ಮನೆತನದಲ್ಲಿ ನಡೆದುಕೊಂಡು ಬಂದ ರೂಢಿ ಒಂದಿದೆ. ಬೆಳಿಗ್ಗೆ ಒಂಬತ್ತು ಗಂಟೆಗೆ ನಮ್ಮ ಪರಿವಾರದವರೆಲ್ಲ ಊಟಕ್ಕೆ ಸಿದ್ಧ. ಈ ರೂಢಿ ಶಾಲೆಗೆ ಹೊತ್ತಾಗುತ್ತೇ. ಆಫೀಸಿಗೆ ಲೇಟಾಗುತ್ತೇ ಎಂದು ಶುರುವಾದದ್ದು. ಇಂದಿಗೆ ನಾನು ಶಾಲೆಗೆ ಹೋಗುವುದು ಬಿಟ್ಟು ಹದಿನೈದು ವರ್ಷಗಳಾಗಿ, ತಂದೆ ಆಫೀಸಿಗೆ ಹೋಗುವುದು ಬಿಟ್ಟು ಹನ್ನೊಂದು ವರ್ಷಗಳಾದರೂ ಇನ್ನೂ ಹೋಗಿಲ್ಲ. ನಮ್ಮದು ಬಹಳ ಚಿಕ್ಕ ಪರಿವಾರ. ನಾನು, ನನ್ನ ತಂದೆ ಹಾಗೂ ನನ್ನ ತಾಯಿ. ಹಾಗಾಗಿ ಈ ರೂಢಿಯನ್ನು ಕಾಪಾಡಿಕೊಂಡು ಬರಲು ನನಗಾಗಲಿ ಅಥವಾ ನನ್ನ ತಂದೆಗಾಗಲಿ ಕಷ್ಟವೆನಿಸಿಲ್ಲ. ನಾವು ಮರೆತರೂ ನನ್ನ ತಾಯಿ ಮರೆಯುವುದಿಲ್ಲ.

ಅಂದು ಬೆಳಿಗ್ಗೆ ಸಹ ಹಾಗೇ ಆಗಿತ್ತು. ನಾವೆಲ್ಲ ಊಟಕ್ಕೆ ಸಿದ್ಧವಾಗಿದ್ದೆವು. ಹೊರಗೆ ಟ್ರಣ್ .... ಟ್ರಣ್ ಎಂದು ಸೈಕಲ್ ಗಂಟೆಯ ಶಬ್ಧ. ದಿನಂಪ್ರತಿಯಂತೆ ಪಕ್ಕದ ಮನೆಯ ನಾಯಿ ನಮ್ಮ ಮನೆಗೆ ಬಂದವರನ್ನು ನೋಡಿ ಬೊಗಳ ಹತ್ತಿತು. ಬಾಗಿಲು ತೆರದು ನೋಡಿದೆ. ಪೋಸ್ಟ್‌ಮನ್ ಬಂದಿದ್ದ. "ನಮಸ್ಕಾರ ಸಾರ್! ನಿಮಗೊಂದು ಪತ್ರ ಬಂದಿದೆ" ಎಂದು ಹೇಳಿ, ಗೇಟಿಗೆ ಲಕೋಟೆಯೊಂದನ್ನು ಸಿಕ್ಕಿಸಿ ಹೋದ. ಪತ್ರವನ್ನು ನಾನು ಯಾರದ್ದು ಎಂದು ನೋಡುವಷ್ಟರಲ್ಲೇ ನನ್ನ ತಾಯಿ "ಎಲ್ಲಿಂದ ಬಂದಿದೆ?" ಎಂದು ಕೇಳಿಯೇ ಬಿಟ್ಟರು. ನಮ್ಮ ಮನೆಯಲ್ಲಿ ಅವರೊಬ್ಬರೇ ಅವಸರದವರು. ಪತ್ರ ನೋಡಿದೆ. "ಊರಿಂದ ಬಂದಿದೆ. ಕ್ಷೇಮ ಸಮಾಚಾರದ ಪತ್ರ" ಎನ್ನುತ್ತಲೇ ಪತ್ರವನ್ನು ಬಿಡಿಸಿ ಓದಲಾರಂಭಿಸಿದೆ. ವಯಸ್ಸಿಗೆ ಬಂದ ಮಗ ಒಬ್ಬ ಮನೆಯಲ್ಲಿದ್ದರೆ, ಹುಡುಕಿಕೊಂಡು ಬರುವವರು ನೂರು ಜನ ಎಂಬಂತೆ, ಪತ್ರದೊಡನೆ ನನ್ನ ತಾಯಿಯ ಅಣ್ಣ ಅವರ ಪರಿಚಯಸ್ತರ ಮಗಳ ಜಾತಕವನ್ನು ಕಳಿಸಿದ್ದರು. ನನ್ನ ತಾಯಿಗಂತೂ ಎಲ್ಲಿಲ್ಲದ ಖುಷಿ. ಮೊದಲನೆಯದಾಗಿ, ಹುಡುಗಿಯ ಜಾತಕ ತನ್ನ ತೌರುಮನೆಯವರಿಂದ ಬಂದಿದೆ. ಇನ್ನು ಹುಡುಗಿಯ ತಂದೆ, ಊರಿನ ಶಾನುಭೋಗರು. ಹುಡುಗಿ ಸ್ವತಃ ವಿದ್ಯಾವಂತೆ. ಇನ್ನೇನು ಬೇಕು? ನನ್ನ ತಾಯಿಗಂತೂ ನನ್ನ ಮದುವೆ ನಾಳೆಯೇ ಎನ್ನುವಷ್ಟು ಖುಷಿಯಾಯಿತು. ನನ್ನ ತಂದೆ ಸ್ವಲ್ಪ ಯೋಚಿಸಿ, "ಕುಲಕರ್ಣಿಯವರು ನನ್ನ ಪರಿಚಯಸ್ತರೇ. ನಾನು

ಮತ್ತು ಅವರು ಒಟ್ಟಿಗೆ ಸ್ವಲ್ಪ ವರ್ಷಗಳ ಕಾಲ ಓದಿದ್ದೇವೆ. ಅವರ ಮಗಳು ಇಷ್ಟು ದೊಡ್ಡವಳಾಗಿದ್ದಾಳೆಯೇ? ಬಹಳ ಒಳ್ಳೆಯ ಜನ. ಅವರ ಮಗಳನ್ನು ತರುವುದಕ್ಕೆ "ಏನೂ ಯೋಚಿಸಬೇಕಾಗಿಲ್ಲ" ಎಂದು ನನ್ನ ತಾಯಿಯ ಮಾತಿಗೆ ಪುಟ ಕೊಟ್ಟರು.

ತಾಯಿಗೆ ತೌರಿನ ಸಹವಾಸ ಎಂದು ಸಂತೋಷವಾದರೆ, ತಂದೆಗೆ ಗೊತ್ತಿದ್ದ ಮನೆತನ ಎಂದು ಹೆಮ್ಮೆ. ಮಧ್ಯದಲ್ಲಿ ಪೇಚಿಗೆ ಸಿಕ್ಕವನು ನಾನು.

ಇಲ್ಲಿಯವರೆಗೆ ಯಾವತ್ತೂ ನನ್ನ ಮದುವೆಯ ವಿಷಯ ಮನೆಯಲ್ಲಿ ಪ್ರಸ್ತಾಪವಾಗಿರಲಿಲ್ಲ. ಇಂದು ಪತ್ರ ಬಂದೊಡನೆ ದಿಢೀರ್ ಎಂದು ವಿಷಯ ಎದ್ದಾಗ, ನಾನಂತೂ ಅದಕ್ಕೆ ಸಿದ್ಧವಾಗಿರಲಿಲ್ಲ. ಸ್ವಲ್ಪ ಮಟ್ಟಿಗೆ ಗಾಬರಿಗೊಂಡೆ ಎಂದರೂ ತಪ್ಪಿಲ್ಲ. ಮನೆಗೇನೋ ಪತ್ರ ಹಾಗೂ ಜಾತಕ ಬಂದರೆ, ನನಗೆ ಅದೊಂದು ಯೋಚನೆಗಳ ಸುರಿಮಳೆಯನ್ನೇ ತಂದೊಡ್ಡಿತು. ಹುಡುಗಿ ಹೇಗೋ? ಮೊದಲ ಯೋಚನೆ. ಗುಣ ಹೇಗೋ? ಎರಡನೇ ಯೋಚನೆ. ನಮ್ಮ ಮನೆತನಕ್ಕೆ ಸರಿಹೋಗಬಹುದೇ? ಮೂರನೇ ಯೋಚನೆ. ಹೀಗೇ ಇನ್ನೂ ಅನೇಕ ಯೋಚನೆಗಳು.

ನನ್ನ ಸ್ನೇಹಿತನೊಬ್ಬ ಇತ್ತೀಚೆಗಷ್ಟೆ ಮದುವೆ ಆಗಿದ್ದಾನೆ. ಬೆಂಗಳೂರಿನಲ್ಲಿ ಆತನ ವಾಸ. ಮದುವೆಯ ನಂತರ ತನ್ನ ಬಾಳಿನಲ್ಲಿ ಹೆಚ್ಚೇನು ಪರಿವರ್ತನೆ ಆಗಿಲ್ಲ. "ಅದೇ ಊಟ, ಅದೇ ತಿಂಡಿ, ಅದೇ ಕಾಫೀ" ಎಂದು ಮೊನ್ನೆ ನನಗೆ ಸಿಕ್ಕಿದಾಗ ಪ್ರಾಸಂಗಿಕವಾಗಿ ವಿಷಯ ತಿಳಿಸಿದ. ಅರ್ಥವಾಗದೇ ಬಿಡಿಸಿ ಹೇಳಲು ಹೇಳಿದೆ. "ಮಾಡಿಕೊಂಡ ಹುಡುಗಿ ಬಹಳ ಒಳ್ಳೆಯವಳು ಹಾಗೂ ವಿದ್ಯಾವಂತೆ. ಆದರೆ ಅಡುಗೆ ಮಾತ್ರ ಎಳ್ಳಷ್ಟು ಬರುವುದಿಲ್ಲ. ಏನು ಮಾಡುವುದು? ಅವಳು ಕಲಿಯುವವರೆಗೆ ಅದೇ ಉಡುಪಿ ಹೋಟೆಲ್ ಕಾಫಿ, ತಿಂಡಿ ಹಾಗೂ ಊಟ ಜಾರಿಯಲ್ಲಿದೆ. ಮೊದಲು ನಾನೊಬ್ಬನೇ ಹೋಗುತ್ತಿದ್ದೆ, ವ್ಯತ್ಯಾಸವಿಷ್ಟೇ. ಈಗ ಇಬ್ಬರಾಗಿದ್ದೇವೆ" ಎಂದು ವಿವರಿಸಿದ. ದೇವರೇ ಕಾಪಾಡು! ಹಾಗೇನಾದರೂ ಈಗ ನನಗೆ ಬಂದ ಜಾತಕದ ಹುಡುಗಿಗೂ ಅಡುಗೆ ಬಾರದೇ ಇದ್ದರೆ, ನನ್ನ ಪಾಡೇನು? ನಮ್ಮೆಲ್ಲರ ಪಾಡೇನು? ಅದೂ ಬೆಳಗ್ಗೆ ಒಂಬತ್ತಕ್ಕೆ ಊಟ ಮಾಡಿ ರೂಢಿ ಇರುವ ನಮಗೆ!

ಊಟದ ಪ್ರಶ್ನೆ ಒಂದೆಡೆ ಇರಲಿ! ಮನೆಯಲ್ಲಿ ತಾಯಿ ಇದ್ದಾರೆ ಹೇಗೋ ನಡೆದು ಹೋಗುತ್ತೆ. ಆದರೇ ನನ್ನ ಇನ್ನೊಬ್ಬ ಸ್ನೇಹಿತನ ಗೋಳಿಗಂತೂ ಕೊನೆಯೇ ಇಲ್ಲವೇನೋ ಎನ್ನಿಸುತ್ತದೆ.

ನನ್ನ ಇನ್ನೊಬ್ಬ ಸ್ನೇಹಿತ ಮೊದಲಿನಿಂದಲೂ ಬಹಳ ಆದರ್ಶವಾದಿ. ನಮ್ಮ ಗುಂಪಿನಲ್ಲೇ ಅವನೊಬ್ಬ ಭಿನ್ನ. ಹೆಂಡತಿ ಸಿಗುವ ಅದೃಷ್ಟದಲ್ಲೂ, ಭಿನ್ನವಾದ ಹೆಂಡತಿ ಸಿಕ್ಕಿದ್ದು ಅವನ ಅದೃಷ್ಟವೋ ದುರಾದೃಷ್ಟವೋ ಗೊತ್ತಿಲ್ಲ. ಒಟ್ಟಿನಲ್ಲಿ ಭಿನ್ನವಾದ ಜೋಡಿ. ಹುಡುಗಿ ಹಳ್ಳಿಯವಳು. ಮದುವೆ ಆದೊಡನೆಯೇ ಪಟ್ಟಣಕ್ಕೆ ಬಡ್ತಿ ದೊರತಂತಾಯಿತು. ಬೆಂಗಳೂರಿನಲ್ಲಿ ಪಲ್ಲವಿ ಥಿಯೇಟರ್ ಮಗ್ಗುಲಲ್ಲೆ ಮನೆ. ಕೇಳಬೇಕೆ? ವಾರಕ್ಕೆರಡು ಅಥವಾ ಮೂರು ಸಿನೆಮಾಗಳಿಗಿಂತಾ ಕಡಿಮೆ ಯಾವತ್ತೂ ನೋಡಿಲ್ಲ. ನನ್ನ ಸ್ನೇಹಿತನಿಗಂತೂ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಮನೆ ಬಾಡಿಗೆಯೋನೋ

ಹಳೆಯ ದರದಲ್ಲಿಯೇ ಸಿಕ್ಕಿದ್ದರಿಂದ ೧೫೦ ರೂಪಾಯಿಗಳಲ್ಲಿ ನಡೆಯುತ್ತದೆ. ಆದರೆ ೨೫೦ ರೂಪಾಯಿ ೩ ತಿಂಗಳಿಗೆ ಪಲ್ಲವಿ ಥಿಯೇಟರ್‌ಗೇ ತೆರಬೇಕಾಗುತ್ತಿದೆ. ಇನ್ನು ಊರಿಂದ ತನ್ನ ನೆಂಟರಿಷ್ಟರು, ಸ್ನೇಹಿತರು ಏನಾದರೂ ಬಂದರೆ, ಎಲ್ಲರೂ ಒಟ್ಟಿಗೆ ಸೇರಿ ಪಲ್ಲವಿ ಥೀಯೆಟರ್‌ಗೆ ಹೋಗುವುದು. ಮನೆಯಲ್ಲಿ ಅಡುಗೆಯ ವಿಷಯದಲ್ಲಿ ಅವನಿಗೆ ಎಷ್ಟೂ ಯೋಚನೆಯಿಲ್ಲ. ಅದೆಲ್ಲಾ ಸಾಂಗವಾಗಿ ನಡೆಯುತ್ತದೆ. ಥಿಯೇಟರ್‌ನಲ್ಲಿ ಪೋಸ್ಟರ್ ಬದಲಾದರೆ ಸಾಕು, ಅವನ ಮುಖವೂ ಬದಲಾಗುತ್ತದೆ. ಮದುವೆಯ ಹೊಸತು. ನನ್ನ ಆದರ್ಶವಾದಿ ಸ್ನೇಹಿತನಿಗೆ ತನ್ನ ಮಡದಿಯ ಆಸೆಗಳಿಗೆ ಕಡಿವಾಣ ಹಾಕಬೇಕೊ, ಅಥವಾ ಅವಳಿಗೇ ಒಂದು ದಿನ ಅರ್ಥವಾದೀತು ಎಂದು ಸುಮ್ಮನಿರಬೇಕೋ ಒಂದೂ ಹೊಳೆಯುತ್ತಿಲ್ಲ.

ಸ್ನೇಹಿತರದು ಈ ಪಾಡಾದರೆ, ನನ್ನ ಪಾಡು ಆ ದೇವರಿಗೇ ಪ್ರೀತಿ. ನನ್ನಲ್ಲಿ ಅದ್ಯಾವ ಗುಣ ನೋಡಿ ಅವರು ಜಾತಕ ಕಳಿಸಿದರು ಎಂಬುದಂತೂ ಸೋಜಿಗವೇ. ವಿದ್ಯೆ ತಕ್ಕಮಟ್ಟಿಗೆ, ನೌಕರಿ—ಅದೂ ತಕ್ಕಮಟ್ಟಿಗೆ. ತಂದೆ ತಾಯಿಗಳು ನನ್ನ ಮೇಲೆ ಅವಲಂಬಿಸಿಲ್ಲದಿರುವುದರಿಂದ, ಒಬ್ಬನೇ ಮಗನಾದ ನಾನು ಅವರ ಮೇಲೆ ಅವಲಂಬಿಸಿದ್ದೇನೆ. ಎಷ್ಟೇ ಆದರೂ ತಂದೆ ತಾಯಿಗಳಲ್ಲವೇ? ಮಗನಿಗೆ ಮಾಡತಕ್ಕವರು. ಇನ್ನು ನಾನು ಅವರಿಂದ ಸಹಾಯ ಪಡೆಯದೆ ಇದ್ದರೆ ಅದು ನನ್ನ ಸೌಜನ್ಯವಲ್ಲ ಎಂದೇ ನನ್ನ ಅನಿಸಿಕೆ. ಹೀಗೇ ಇದೇ ಜಾಡಿನಲ್ಲಿ ಯೋಚಿಸುತ್ತ ಇದ್ದ ನನ್ನನ್ನು ಶಾನುಭೋಗರ ಪ್ರಸ್ತಾಪದ ಪತ್ರ ಬಡಿದೆಬ್ಬಿಸಿತು. ಮನೆ ನಡೆಸಿಕೊಂಡು ಹೋಗುವಷ್ಟು ಆದಾಯ ನನಗಿದೆಯೇ? ಹುಡುಗಿ ಮೈಸೂರು ಸಿಲ್ಕ್ ಸೀರೆಯನ್ನೇನಾದರೂ ಕೇಳಿದರೆ? ಸೀರೆಯನ್ನೇನೋ ಉಟ್ಟು ಓಡಾದಿದರೆ, ನೋಡಿ ಆನಂದಿಸಬಹುದು. ಆದರೆ ಅಂಗಡಿಯಲ್ಲಿ ಖರೀದಿಸುವ ಪ್ರಸಂಗ ಬಂದರೆ ಮಾತ್ರ ಅದು ನನ್ನಿಂದ ಕಷ್ಟಸಾಧ್ಯ. ಇನ್ನೂ ಸಿನೇಮಾ, ಹೋಟೆಲ್ಲು ಇವೆಲ್ಲ ನಮ್ಮ ಮನೆತನಕ್ಕೆ ಒಗ್ಗಿ ಬಂದಿಲ್ಲ ಎಂದು ಹೇಳಿಬಿಡಬಹುದು. ಆದರೂ ನನಗೇಕೋ ಮುಜುಗರವೆನಿಸಿತು. ಮದುವೆ ಸಧ್ಯಕ್ಕೆ ಬೇಡ ಎಂದು ಹೇಳಲು ನಿರ್ಧರಿಸಿದೆ. ತಂದೆ ತಾಯಿಗಳಿಗೆ ಹೇಳಿಯೂ ಬಿಟ್ಟೆ. ನಾನು ಹಠಹಿಡಿದದ್ದು ನೋಡಿ, ಬೇರೆ ಉಪಾಯವಿಲ್ಲದೇ "ಹುಡುಗಿಯ ಜಾತಕವೇನೋ ಕೂಡುವುದು, ನಮಗೆಲ್ಲಾ ಇಷ್ಟವಿದ್ದರೂ, ಹುಡುಗ ಇನ್ನೂ ಒಂದು ವರ್ಷ ಓದಲು ಇಷ್ಟಪಡುತ್ತಾನೆ. ಆದ್ದರಿಂದ ಉಪಾಯವಿಲ್ಲ. ದಯವಿಟ್ಟು ಕ್ಷಮಿಸಿ" ಎಂದು ನನ್ನ ತಂದೆ, ನಮ್ಮೂರಿನಲ್ಲಿಯ ನನ್ನ ಸೋದರ ಮಾವನಿಗೊಂದು ಪತ್ರ ಬರೆದೇ ಬಿಟ್ಟರು. ಅಂದು ನನ್ನ ಮೇಲೆ ಹೊರಿಸಿದ ಭಾರವನ್ನು ಇಳಿಸಿದಂತಹ ಅನುಭವ.

ಇದೆಲ್ಲವೂ ಆಗಿ ಹದಿನೈದು ದಿವಸಗಳು ಕಳೆದಿರಬಹುದು. ನಮ್ಮೂರಿನಲ್ಲಿ ಜಾತ್ರೆ ಪ್ರತಿ ವರ್ಷದಂತೆ ಈ ಸಲವೂ ನಮ್ಮಲ್ಲಿ ಯಾರಾದರೊಬ್ಬರು ಹೋಗಬೇಕೆಂದು ನಿಶ್ಚಯಿಸಿದೆವು. ಹೊರಡುವ ದಿನ ನಮ್ಮ ತಂದೆಯ ಸ್ನೇಹಿತರೊಬ್ಬರು ನಮ್ಮ ಮನೆಗೆ

ಬಂದಿಳಿದಿದ್ದರಿಂದ ಊರಿಗೆ ನಾನೇ ಹೋಗ ಬೇಕಾಯಿತು.

ಬಹಳ ವರ್ಷಗಳ ಮೇಲೆ ನಾನು ಊರಿಗೆ ಹೋಗಿದ್ದರಿಂದ, ಎಲ್ಲರೂ ಸಂತೋಷ ಪಟ್ಟರು. ಊರಿನಲ್ಲಿ ಜಾತ್ರೆ ಎಂದರೆ ಮನೆ ಮನೆಯಲ್ಲೂ ಹಬ್ಬದ ಸಡಗರ. ಎಲ್ಲರೂ ತಾವು ಹೊಲಿಸಿದ ಹೊಸ ಬಟ್ಟೆಧರಿಸಿ ಬಣ್ಣ ಬಣ್ಣವಾಗಿ ಕಾಣುತ್ತಿದ್ದರು. ಚಿಕ್ಕ ಮಕ್ಕಳಿಗಂತೂ ಕೈಯಲ್ಲಿ ಬೆಲೂನು, ಮುಖದಲ್ಲಿ ಬಣ್ಣದ ಚಾಳೀಸು ಹಾಗೂ ಬಾಯಲ್ಲಿ ಒಂದು ಪೀಪಿ. ಇದು ಸಾಮಾನ್ಯವಾಗಿ ಎಲ್ಲಿನೋಡಿದರೂ ಕಾಣಸಿಗುವ ದೃಶ್ಯ. ಜಾತ್ರೆಯ ದಿನ ಊರ ಜನರೆಲ್ಲ ಸೇರಿ ರಥವನ್ನು ಎಳೆದು ಊರ ದೇವತೆಗೆ ವಿಶೇಷ ಪೂಜೆ ಸಲ್ಲಿಸಿದರು. ಸಂಜೆ ಹಲವಾರು ಮೇಳದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ಏರ್ಪಟ್ಟಿದ್ದವು. ಜಾತ್ರೆ ಮುಗಿದ ಮೇಲೆ ಅಕ್ಕಪಕ್ಕದ ಊರಿನಲ್ಲಿರುವ ನನ್ನ ಹಳೆಯ ಗೆಳೆಯರನ್ನು ಭೇಟಿಯಾಗಲೆಂದು ಇನ್ನೂ ಎರಡು ದಿನವಿದ್ದು ಊರಿಗೆ ಮರಳಬೇಕೆಂದು ನಿಶ್ಚಯಿಸಿದೆ. ಊರಿಗೆ ಬಂದು ಆರು ದಿನವಾದರೂ ಯಾರೂ ನಾನು ಮದುವೆಗೆ ಏಕೆ ಬೇಡವೆಂದೆ ಎಂದು ಕೇಳಬಾರದೇ? ಅವರಾಗಿ ಆ ವಿಷಯ ತೆಗೆದರೆ ವಿವರಣೆ ಹೇಳಿದರಾಯಿತು ಎಂದು ನಾನು ಸುಮ್ಮನಿದ್ದರೆ, ಎಲ್ಲರೂ ಆ ಮದುವೆಯ ವಿಷಯ ಮುಗಿದಂತೆಯೇ, ಇನ್ನು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡಾ ಎನ್ನುವ ಹಾಗೆ ನಿಶ್ಚಿಂತೆಯಿಂದ ಇದ್ದರು. ಆಶ್ಚರ್ಯವೆಂದರೆ, ನನ್ನ ಮದುವೆಯ ಬಗ್ಗೆ ಹಾತೊರೆಯುತ್ತಿದ್ದ ನನ್ನ ಅಜ್ಜಿ ಸಹ ಈ ಸಾರಿ ಅದರ ಬಗ್ಗೆ ಯಾವ ಪ್ರಸ್ತಾಪವೂ ಎತ್ತಲಿಲ್ಲ. ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಕೊನೆಗೆ ನನ್ನ ತಂದೆ ಬರೆದ ಪತ್ರ ಬಂದು ತಲುಪಿತು ವಿಷಯ ತಿಳಿಯಿತು ಎಂದಾದರೂ ಹೇಳಬೇಡವೆ? ನನ್ನ ಅಜ್ಜ "ನೀನು ಹೊಸ ಕಂಪ್ಯೂಟರ್ ತೆಗೆದುಕೊಂಡೆಯಂತೆ?" ಎಂದು ಕೇಳಿದರೇ ಹೊರತು ನಿನ್ನ ತಂದೆಯಿಂದ ಪತ್ರ ಬಂತು ಎಂದು ಹೇಳಲಿಲ್ಲ. ನನಗ್ಯಾಕೊ ಅನುಮಾನವಾಯಿತು. ಸಂಜೆ ಹರಟೆಹೊಡೆಯುತ್ತ ಕುಳಿತಿದ್ದಾಗ ಕುತೂಹಲ ತಾಳಲಾರದೇ, ಧೈರ್ಯ ತಂದುಕೊಂಡು ನಾನೇ ವಿಷಯ ಪ್ರಸ್ತಾಪಿಸಿದೆ. "ಹೌದು ನಮಗೇನೋ ಹುಡುಗಿ ಹಿಡಿಸಿದ್ದಳು. ನೋಡಲು ಚೆನ್ನಾಗಿದ್ದಾಳೆ, ಕೆಲಸದಲ್ಲೂ ನಿಪುಣಳು. ಹಾಗಾಗಿ ನಿಮಗೆ ತಿಳಿಸಿದೆವು. ನಿಮ್ಮ ತಂದೆಯಿಂದ ಪತ್ರ ಬಂದ ಮೇಲೆ ನಾವು ಅದರ ಬಗ್ಗೆ ಕೈಬಿಟ್ಟೆವು" ಎಂದು ಬಹಳ ಉದಾಸೀನದಿಂದ ನನ್ನ ಅಜ್ಜಿ ಉತ್ತರಿಸಿದಳು. "ನಿನಗೆ ಕಳಿಸಬೇಕೆಂದು ನಾವು ಫೋಟೋ ಸಹ ತರಿಸಿದ್ದೆವು. ಅಷ್ಟರಲ್ಲಿ ನಿಮ್ಮ ಪತ್ರ ಬಂದಿದ್ದರಿಂದ ನಾವು ಅಷ್ಟಕ್ಕೆ ಸುಮ್ಮನಾದೆವು" ಎಂದು ಮಾತನಾಡುತ್ತ ಎದ್ದ ನನ್ನ ಅಜ್ಜಿ ಕೈಯ್ಯಲ್ಲೊಂದು ಫೋಟೋ ಹಿಡಿದುಕೊಂಡು ಬಂದು ನನ್ನ ಕೈಯಲ್ಲಿತ್ತರು. ನನ್ನನ್ನೇ ನಾನು ನಂಬಲಾರದವನಾದೆ. ಹುಡುಗಿ ನಿಜವಾಗಲೂ ಬಹಳ ಸುಂದರಳಾಗಿದ್ದಳು. ಮನಸ್ಸಿನಲ್ಲಿ ಒಂದು ಕ್ಷಣ ನಾನು ತಪ್ಪು ಮಾಡಿದೆ ಎಂದು ಅನಿಸಿದರೂ, ಯಾರಿಗೂ ಅದನ್ನು ತೋರುಗೊಡದೇ, ಫೋಟೋ ಇನ್ನೊಂದು ಬಾರಿ ನೋಡಿ ಅಲ್ಲೇ ಪಕ್ಕದಲ್ಲಿಟ್ಟೆ. ಅಷ್ಟರಲ್ಲಿ ಮನೆಗೆ ಪರಿಚಯಸ್ಥರು ಕಾಣಲು ಬಂದಿದ್ದರಿಂದ ಆ ವಿಷಯ ಅಷ್ಟಕ್ಕೇ ನಿಂತಿತು.

ಹೋಯಿತು. ಅಂದು ರಾತ್ರಿ ಎಲ್ಲರೂ ಊಟಕ್ಕೆ ಕುಳಿತಾಗ ನನಗೆ ಇನ್ನೊಂದು ಆಶ್ಚರ್ಯ ಕಾದಿದ್ದಿತ್ತು. ನನ್ನ ತಾಯಿಯ ಅಣ್ಣ, ಬೇರೆ ಊರಿಗೆ ಹೋದವರು, ಆಗ ತಾನೆ ಬಂದು ನಮ್ಮೊಟ್ಟಿಗೇ ಊಟಕ್ಕೆ ಸೇರಿದರು. "ಹೋದ ವಿಷಯ ಏನಾಯಿತು?" ಎಂದು ನನ್ನ ಅಜ್ಜಿ ಕೇಳುತ್ತಲೂ "ಇಷ್ಟು ಸುಲಭವಾಗಿ ಹುಡುಗನ ಮನೆಯವರು ಒಪ್ಪುತ್ತಾರೆ ಎಂದು ನಾನು ಎಣಿಸಿರಲಿಲ್ಲ. ಹುಡುಗಿ ಮನೆಕೆಲಸದಲ್ಲೂ ಜಾಣೆ, ಬಹಳ ಸರಳಜೀವಿ, ಸಂಗೀತದಲ್ಲೂ ಸ್ವಲ್ಪ ಅಭಿರುಚಿ ಇದೆ ಎಂದು ನಾನು ಹೇಳಿದೊಡನೆ, ಅವರು ಬೇರೆ ಮಾತನಾಡಲಿಲ್ಲ. ಒಪ್ಪಿಯೇ ಬಿಟ್ಟರು" ಎಂದು ನನ್ನ ಮಾವ ಉತ್ತರಕೊಟ್ಟರು. ಈ ಎಲ್ಲಾ ವಿಷಯ ನನಗೆ ಬಂದ ಜಾತಕದ ಹುಡುಗಿಯ ವಿಷಯ ಎಂದು ತಿಳಿದುಕೊಳ್ಳುವುದರಲ್ಲಿ ನನಗೆ ಬಹಳ ಹೊತ್ತು ಬೇಕಾಗಲಿಲ್ಲ "ಹುಡುಗ ಏನಾಗಿದ್ದಾನೆ?" ಎಂದು ನನ್ನ ಅಜ್ಜ ಕೇಳುತ್ತಲೂ "ಹುಡುಗ ಇಂಜಿನಿಯರಿಂಗ್ ಓದಿ, ಈಗ ದೊಡ್ಡ ಕಂಪನಿಯೊಂದರಲ್ಲಿ ತಿಂಗಳಿಗೆ ಆರು ಸಾವಿರ ಬರುವಂಥ ಹುದ್ದೆಯಲ್ಲಿದ್ದಾನೆ. ಆಕಸ್ಮಾತ್ತಾಗಿ ಹುಡುಗನೂ ಬಂದಿದ್ದ, ನೋಡಿ ಮಾತನಾಡಿಸಿದೆ. ಬಹಳ ಸ್ಫುರದ್ರೂಪಿ. ಅವನ ನಯ ವಿನಯ ನೋಡಿದರೇ ಅವನು ಇಷ್ಟು ದೊಡ್ಡ ಇಂಜಿನಿಯರ್ ಎಂದು ಹೇಳುವುದೇ ಕಷ್ಟವಾಗುತ್ತದೆ. ಯಾವುದಕ್ಕೂ ಕುಲಕರ್ಣಿಯವರೊಡನೆ ಮಾತನಾಡಿ ಮುಂದಿನ ಕಾರ್ಯಕ್ರಮಗಳಿಗೆ ತಿಳಿಸುವೆ ಎಂದು ಹೇಳಿ ಬಂದಿದ್ದೇನೆ" ಎಂದರು ನನ್ನ ಮಾವ. ಅವರೆಲ್ಲರೂ ಆ ಹುಡುಗನ ಬಗ್ಗೆ ಮಾತನಾಡುತ್ತಿದ್ದುದನ್ನು ನೋಡಿದರೆ ಸ್ವತಃ ತ್ರೇತಾಯುಗದ ಶ್ರೀರಾಮಚಂದ್ರನೇ ಅವತಾರವೆತ್ತಿ ಇಲ್ಲಿ ಇಂಜಿನಿಯರ್ ಆಗಿ ಬಂದಿದ್ದಾನೇನೋ ಎನ್ನುವಂತಿತ್ತು. ನನ್ನನ್ನು ಹೊರತಾಗಿ ಎಲ್ಲರೂ ಖುಷಿಯಲ್ಲಿದ್ದರು.

ಈ ಪ್ರಸ್ತಾಪ ಇಷ್ಟಕ್ಕೆ ಬಗೆಹರಿಯಲಿಲ್ಲ "ಹುಡುಗಿಯನ್ನು ತೋರಿಸುವ ಕಾರ್ಯ ನಮ್ಮ ಮನೆಯಲ್ಲೇ ನಡೆಯಲಿ. ನಮಗಂತೂ ಇಬ್ಬರ ಕಡೆಯವರೂ ಬೇಕಾದವರು" ಅಜ್ಜ ಮಾತು ಮುಂದುವರಿಸಿದರು. ಅವರ ಮಾತಿಗೆ ಎಲ್ಲರ ಸಮ್ಮತಿಯೂ ದೊರಕಿತು. ಬರುವ ಗುರುವಾರದ ಸಂಜೆಗೆ ಈ ಕಾರ್ಯಕ್ರಮ ಎಂದು ನಿಶ್ಚಯವಾಯಿತು. "ಹುಡುಗಿಯನ್ನು ಎರಡು ದಿನ ಮುಂಚಿತವಾಗಿಯೇ ಕರೆಸು! ಅವಳು ಈ ನೆಪದಿಂದಲಾದರೂ ಕೆಲಸದಿಂದ ರಜೆ ಪಡೆದು ಬರಲಿ. ಅವಳಿಗೂ ಸ್ವಲ್ಪ ವಿರಾಮ ದೊರೆತಂತಾಗುತ್ತದೆ" ಎಂದು ನನ್ನ ಅಜ್ಜ ಅನ್ನುತ್ತಲೂ "ಹೌದು! ಹೌದು! ವಿರಾಮ ದೊರೆತಂತಾಗುತ್ತದೆ" ಎಂದು ಮಧ್ಯ ಬಾಯಿ ಹಾಕಿದೆ. ನನ್ನಲ್ಲಿ ಅಡಗಿದ್ದ ಕುತೂಹಲ ತಾನಾಗಿ ಹೊರಬಂದಿತ್ತು. ಇಷ್ಟೊತ್ತೂ ಇಲ್ಲದ, ತೋರದ ಕುತೂಹಲ ತಕ್ಷಣ ಹೊರಹೊಮ್ಮಿದ್ದನ್ನು ಎಲ್ಲರೂ ಪ್ರಶ್ನಾರ್ಥಕ ದೃಷ್ಟಿಯಿಂದ ನನ್ನನ್ನು ನೋಡಿದ್ದರಲ್ಲೇ ಹೊಳೆಯಿತು ನಾನು ತಪ್ಪು ಮಾಡಿದೆ ಎಂದು. ಕುತೂಹಲ ಇದ್ದರೂ ತೋರದೇ ಇದ್ದಿದ್ದರೇ ಅದೇ ಜಾಣತನ. ಇನ್ನೇನು ಮಾಡೋದು? ಮಾತನಾಡಿ ಆಗಿತ್ತು. "ಇಲ್ಲಾ! ಅದರಲ್ಲಿ ನನಗೇನೂ ಇಲ್ಲ, ನಾನಂತೂ ನಾಳೆ ಬೆಳಗ್ಗೆ ಬಸ್ಸಿಗೆ ಮೈಸೂರಿಗೆ ಹೊರಟಿದ್ದೇನೆ" ಎಂದು

ಸಾವರಿಸಿಕೊಂಡೆ. ನನಗಾದ ಆಶ್ಚರ್ಯ ಕೇಳಿ. ಯಾರೂ ನನ್ನನ್ನು ತಡೆಯುವಂತೆ ಕಾಣಲಿಲ್ಲ. ಎಲ್ಲರೂ ಹೋಗಲಿ, ಊರು ಬಿಟ್ಟು ಬಹಳ ದಿವಸಗಳಾಯಿತು ಎಂದು ಕನಿಕರ ತೋರುವವರೇ. ಮನಸ್ಸಿನಲ್ಲಿ, ಗುರುವಾರದವರೆಗೆ ಇರಬೇಕು, ಹುಡುಗಿಯನ್ನು ಒಮ್ಮೆಯಾದರೂ ನೋಡಬೇಕು ಎಂದು ಇದ್ದರೂ, ಇರು ಎಂದು ಹೇಳುವವರೇ ಇಲ್ಲದಾಗ ಇರುವುದಾದರೂ ಹೇಗೆ? ಸರಿ! ಮರಳಿ ಮೈಸೂರಿಗೆ ಹೊರಡಲು ಎಲ್ಲ ಸಿದ್ಧತೆಗಳನ್ನು ಮಾಡತೊಡಗಿದೆ. ನಮ್ಮ ಅಜ್ಜಿ, ತನ್ನ ಮಗಳು, ಅಂದರೆ ನನ್ನ ತಾಯಿಗೆಂದು ಸಿಹಿತಿನಿಸುಗಳನ್ನು ಮಾಡಿ ಕೊಟ್ಟರು. ಜಾತ್ರೆಯ ಕುರುಹಾಗಿ ಒಂದು ಸೀರೆಯನ್ನೂ ಸಹ ಕೊಡಿಸಿದರು. ಮನಸ್ಸಿಲ್ಲದ ಮನಸ್ಸಿನಿಂದ ಅಂದು ರಾತ್ರಿ ಕಳೆದೆ. ಬೆಳಗ್ಗೆ ಬೇಗನೆ ಎದ್ದು ಎಲ್ಲ ನಿತ್ಯಕರ್ಮಗಳನ್ನು ಮಾಡಿ ಮುಗಿಸಿ ಹೊರಡಲು ಅನುವಾದೆ. ಈಗಲಾದರೂ ಇರು ಎಂದು ಯಾರೂ ಹೇಳಬಾರದೇ? ನನ್ನ ಮನಸ್ಸು ಇನ್ನೂ ಹಾತೊರೆಯುತ್ತಿತ್ತು. ಅದೃಷ್ಟ ದೇವತೆ ನನ್ನ ಮೇಲೆ ಕೋಪಿಸಿಕೊಂಡತೆ ಕಾಣಿತು. ಯಾರೂ ಹೇಳಲಿಲ್ಲಾ! ದೇವರಿಂದ ಶುರುಮಾಡಿ, ಮನೆಯ ಹಿರಿಯರಿಗೆಲ್ಲಾ ವಂದಿಸಿ ಊರಿಗೆ ಹೊರಡುವ ರೂಢಿ ಇನ್ನೂ ಹಳ್ಳಿಯ ವಾತಾವರಣದಲ್ಲಿ ಪ್ರಚಲಿತದಲ್ಲಿದೆ. ಹಾಗೇ ನಮಸ್ಕರಿಸಿ, ಆಶೀರ್ವಾದ ಪಡೆದು ಹೊರಟೆ.

ಮೈಸೂರಿಗೆ ಹೋಗಬೇಕಾದರೆ ಮೊದಲು ನಮ್ಮ ಹಳ್ಳಿಯಿಂದ ಮೂವತ್ತು ಕಿ.ಮೀ. ದೂರದಲ್ಲಿರುವ ಒಂದು ಪಟ್ಟಣಕ್ಕೆ ಹೋಗಬೇಕು. ಅಲ್ಲಿಂದ ಸರ್ಕಾರಿ ಬಸ್ಸಿನ ವ್ಯವಸ್ಥೆ ಇದೆ. ನಮ್ಮೂರಿಂದ ಪಟ್ಟಣಕ್ಕೆ ನಮ್ಮೂರ ಗೌಡರದೇ ಬಸ್ಸುಗಳು. ಗೌಡರ ಬಸ್ಸು ನಿಲ್ದಾಣ, ನಮ್ಮೂರ ಕೆರೆದಂಡೆ. ಊರಿನಲ್ಲಿ ಇರುವ ಒಬ್ಬರೇ ಸರ್ಕಾರಿ ಡಾಕ್ಟರು ಏನಾದರೂ ಊರಿಗೆ ಹೊರಟರೇ ಗೌಡರ ಬಸ್ಸು ಅವರ ನಿವಾಸಕ್ಕೆ ಹೋಗಿ, ಅವರನ್ನು ಹತ್ತಿಸಿಕೊಂಡು ಬರುವುದು. ಸರ್ಕಾರೀ ಡಾಕ್ಟರು ಎಂದರೆ ಊರಿನವರಿಗೆಲ್ಲ ಅವರೊಬ್ಬ ಧನ್ವಂತರಿ ಇದ್ದ ಹಾಗೆ. ಗೌಡರಿಗೂ ಸಹ ಹಾಗೆಯೇ. ಇದು ಗೌಡರು, ಡಾಕ್ಟರ ಮೇಲೆ ಇಟ್ಟ ವಿಶೇಷ ಮರ್ಯಾದೆ ಮತ್ತು ಕಾಳಜೀ ಎಂದೇ ಹೇಳಬೇಕು. ಡಾಕ್ಟರಿಗೂ ಅಷ್ಟೇ. ಗೌಡರೆಂದರೇ ಅಚ್ಚುಮೆಚ್ಚು. ಅವರು ದೈನಂದಿನ ಸಂಜೆಯ ಒಂಟಿತನವನ್ನು ಗೌಡರೊಂದಿಗೇ ಕಳೆಯುತ್ತಾರೆ.

ನಾನು ಊರಿಗೆ ಹೊರಟ ದಿನವೂ, ಗೌಡರ ಬಸ್ಸು ಊರ ದವಾಖಾನೆಯ ಬಳಿ ಹೋಯಿತು. ಡಾಕ್ಟರನ್ನೂ ಹತ್ತಿಸಿಕೊಂಡು ಕೆರೆದಂಡೆಯ ಬಳಿ ಬರಲು ಸಿದ್ಧವಾಗಿತ್ತು. ಡ್ರೈವರ್ ಕಾಸೀಮ್ ಹಾರ್ನ್ ಬಾರಿಸುತ್ತಿದ್ದದ್ದು ಕೆರೆದಂಡೆಗೆ ಕೇಳಿಸುತ್ತಿತ್ತು. ಗೌಡರ ಗುಂಪಿನಲ್ಲಿ ನನ್ನನ್ನು ಚಿಕ್ಕವನಿಂದ ನೋಡಿದ್ದವನೆಂದರೆ ಕಾಸೀಮ್ ಒಬ್ಬನೆ. ಯಾವಾಗಲೂ ಬಾಯಲ್ಲಿ ಅಡಿಕೆ, ಕೈಯಲ್ಲಿ ಬೀಡಿ, ತಲೆಯ ಮೇಲೊಂದು ಟೋಪಿ. ಅವನು ಧರಿಸುತ್ತಿದ್ದ ಉದ್ದವಾದ ನಿಲುವಂಗಿ ಅವನನ್ನು ದೂರದಿಂದಲೇ ಗುರ್ತು ಹಿಡಿಯಲು ಅನುವುಮಾಡಿತ್ತು. ಡಾಕ್ಟರ್ ಮನೆ ಬಿಟ್ಟು ಬಸ್ಸು ಕೆರೆದಂಡೆಗೆ ಬಂದಿತು. ಜೊತೆಗೆ ಕಳಿಸಲು ಬಂದ ನನ್ನ ಮಾವ ಸೂಟ್‌ಕೇಸ್ ಬಸ್ಸಿನಲ್ಲಿಟ್ಟು ಕೆಳಗಿಳಿದರು. ಡ್ರೈವರ್ ಕಾಸೀಮ್ ನನ್ನನ್ನು ನೋಡಿ

ಸಲಾಮ್ ಸಾಬ್ ಎಂದ. ಸಲಾಮ್ ವಾಪಸ್ ಮಾಡಿ ನನ್ನ ಸೀಟಿನಲ್ಲಿ ಒರಗಿ ಕುಳಿತೆ. ಜಾತ್ರೆಗೆಂದು ಬಂದಿದ್ದ ಜನರ ಗದ್ದಲ ಇನ್ನೂ ಇದ್ದಿದ್ದರಿಂದ ಬಸ್ಸು ಹೊರಡಲು ಇನ್ನೂ ೫-೧೦ ನಿಮಿಷಗಳೇ ಬೇಕಾಗಿತ್ತು. ಕಿಟಕಿ ಆಚೆಯಿಂದ ಮಾತನಾಡುತ್ತಿದ್ದ ನನ್ನ ಮಾವ ಸಹಜವಾಗಿ "ನೀನೂ ಗುರುವಾರದವರೆಗೆ ಇದ್ದಿದ್ದರೆ ಚೆನ್ನಾಗಿತ್ತು. ಹುಡುಗ ಇಂಜಿನಿಯರ್. ನಾವೆಲ್ಲಾ ಹಳ್ಳಿಗರು. ಅವರೊಡನೆ ಮಾತನಾಡಲು ಹಿಂಜರಿಯುತ್ತೇವೆ. ನಿನಗೆ ಅನಾನುಕೂಲವಾದರೆ ಬೇಡ. ಯೋಚಿಸಿ ನೋಡು" ಎನ್ನಬೇಕೇ. ನನ್ನನ್ನು ನಾನೇ ನಂಬಲಾರದವನಾದೆ. ಹೆಚ್ಚು ಯೋಚಿಸಲು ಹೋಗಲಿಲ್ಲ. ಉತ್ತರ ರೂಪವಾಗಿ ನನ್ನ ಸೂಟಕೇಸು ಬಸ್ಸಿನಿಂದ ಕೆಳಗಿಳಿಯಿತು. ಇನ್ನೈದು ನಿಮಿಷದಲ್ಲಿ ನಾವಿಬ್ಬರೂ ತಿರುಗಿ ಮನೆ ಸೇರಿದ್ದೆವು.

ಮಾರನೇ ದಿನ ಮಂಗಳವಾರ ಸಂಜೆಗೆ, ಹೇಳಿಕಳಿಸಿದಂತೆ ೨ ದಿನ ಮುಂಚಿತವಾಗಿ, ಹುಡುಗಿ ಮನೆಗೆ ಬಂದಳು. ನನ್ನನ್ನೂ ಸೇರಿಸಿಕೊಂಡು ಎಲ್ಲರಿಗೂ ನಮಸ್ಕರಿಸಿ, ಅಜ್ಜಿಯೊಡನೆ ಮಾತನಾಡಲು ಕುಳಿತಳು. ನನ್ನ ಅಜ್ಜಿಯೊಡನೆ ನನಗಿಂತಲೂ ಅವಳಿಗೇ ಹೆಚ್ಚಿಗೆ ಸಲಿಗೆ ಮತ್ತು ಆತ್ಮೀಯತೆ ಇರುವಂತಿತ್ತು. ನೆಂಟಸ್ತಿಕೆಗಿಂತ ಇಲ್ಲಿ ಅವರಿಬ್ಬರ ಮನೆತನದ ಸ್ನೇಹ, ಭಾಂದವ್ಯಗಳನ್ನು ಕಲ್ಪಿಸಿತ್ತು. ಹುಡುಗಿ ಬಹಳ ಸರಳ ಸ್ವಭಾವದವಳೆಂದು ಅವಳು ಬಂದ ಒಂದು ಗಂಟೆಯೊಳಗೆ ಗೊತ್ತಾಯಿತು. ವಿಶೇಷವಾಗಿ ನನ್ನನೇನೂ ಅವಳು ಮಾತನಾಡಿಸದಿದ್ದರೂ, ಅವಳ ಕಣ್ಣುಗಳು ನನ್ನೊಡನೆ ಎಲ್ಲ ವಿಷಯಗಳನ್ನೂ ಚರ್ಚಿಸುವಂತಿದ್ದವು.

ಸಂಜೆ ಆರು ಗಂಟೆಯಾಗಿರಬಹುದು. ದಿನದಂತೆ ನಮ್ಮ ಅಜ್ಜಿಯನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಲು ಬಂದ ಹುಡುಗಿಯೇ ಎಲ್ಲ ಸಿದ್ಧತೆಗಳನ್ನು ಮಾಡಿದಳು. ಅಜ್ಜಿಯ ಕೈಹಿಡಿದು ತಾನೂ ದೇವಸ್ಥಾನಕ್ಕೆ ಹೊರಟಳು. ಊರಿನಲ್ಲಿರೋ ಮಂದಿರಗಳೆಂದರೇ ಒಂದು ಹನುಮಂತನದು ಮತ್ತೊಂದು ಊರ ದೇವತೆಯಾದ ಭದ್ರೆಯದು. ಊರ ಚಿಕ್ಕ ಹುಡುಗರಿಗೆಲ್ಲ ಆಂಜನೇಯನ ದೇವಸ್ಥಾನವೆಂದರೆ ಅಚುಮೆಚ್ಚು. ಕಾರಣ ಇಷ್ಟೇ. ಪ್ರತಿ ದಿನ ಸಂಜೆ ಹನುಮಂತನಿಗೆ ನೈವೇದ್ಯಕ್ಕೆಂದು ಬಂದ ಹಣ್ಣುಹಂಪಲುಗಳನ್ನು ಊರ ಹುಡುಗರಿಗೆಲ್ಲ ಹಂಚುವುದು. ಆ ದೇವಸ್ಥಾನದಲ್ಲಿರುವ ಒಂದು ವಾಡಿಕೆ. ಚಿಕ್ಕವರಿದ್ದಾಗಲಿಂದಲೇ ದೇವಸ್ಥಾನಕ್ಕೆ ಬರಲು ಹುಡುಗರಿಗೆ ಪ್ರಚೋದಿಸಲು ಸುಬ್ಬಾಭಟ್ಟರು ಹಾಕಿಕೊಂಡು, ನಡೆಸಿಕೊಂಡು ಬರುತ್ತಿರುವ ರೂಢಿ ಇದು. ಅವರು ಅಂದುಕೊಂಡಂತೆ, ಹುಡುಗರು ಮುಂಚೆ ಪ್ರಸಾದಕ್ಕೆಂದು ಬರಲು ಶುರುಮಾಡಿದವರು ಈಗ ದೇವಸ್ಥಾನಕ್ಕೆಂದೇ ಭಕ್ತಿಯಿಂದ ಬರುವವರಾಗಿದ್ದಾರೆ. ಇದು ಸುಬ್ಬಾಭಟ್ಟಂಗೆ ಸಂತೋಷವನ್ನು ತಂದಿದೆ. "ನೀನೂ ಜೊತೆಗೆ ಬಾರೋ. ಸುಬ್ಬಾಭಟ್ಟರೂ ನಿನ್ನನ್ನು ನೋಡಬೇಕು ಅನ್ನುತ್ತಿದ್ದರು" ಎಂದು ನನ್ನ ಅಜ್ಜಿ ಕರೆದೊಡನೆ, ಮನಸ್ಸಿನಲ್ಲಿ ಖುಷಿ ಆದರೂ ತೋರಗೊಡದೇ, "ಸರಿ, ಬರುತ್ತೇನೆ" ಎಂದು ಸುಮ್ಮನೇ ಅವರಿಬ್ಬರ ಜೊತೆ ಹೊರಟುಬಿಟ್ಟೆ. ದಾರಿ ಉದ್ದಕ್ಕೂ, ಬಂದ ಹುಡುಗಿ

ನನ್ನೊಡನೆ ಬಹಳ ಸಹಜವಾಗಿ, ಸರಳವಾಗಿ ಮಾತನಾಡಿಕೊಂಡು ಬಂದಳು. ಕ್ಷಣಕ್ಷಣಕ್ಕೂ ನನ್ನನ್ನು ಹೆಚ್ಚು ಗೆಲ್ಲುವಂತೆ ತೋರುತ್ತಿದ್ದಳು. ಮೈಸೂರನ್ನು ನೋಡಲು ತಾನು ತನ್ನ ಸಂಗಡಿಗರ ಜೊತೆಗೆ ಬಂದಾಗಿನ ವಿಷಯಗಳನ್ನೆಲ್ಲ ಹೇಳಿದಳು. ಅವಳು ಮಾತನಾಡುವುದರಲ್ಲಿಯೇ ಗೊತ್ತಾಗುತ್ತಿತ್ತು. ತನ್ನಲ್ಲಿರುವ ಹಳ್ಳಿಯ ಸಂಸ್ಕೃತಿಯೊಡನೆ ಪಟ್ಟಣದ ನಾಗರೀಕತೆಯನ್ನೂ ಮೈಗೂಡಿಸಿಕೊಂಡಿದ್ದಳು ಎಂದು. ಅಜ್ಜಿಯೊಡನೆ ನನ್ನನ್ನೂ ಮತ್ತು ಬಂದ ಹುಡುಗಿಯನ್ನು ನೋಡಿ ಸುಬ್ಬಾಭಟ್ಟರಿಗೆ ಆಶ್ಚರ್ಯ ತಡೆಯದಾಗದೇ "ಏನೋ ನನಗೆ ಹೇಳದೇನೆ ಮದುವೆ ಮಾಡಿಕೊಂಡೆಯಾ? ಪಟ್ಟಣದವರು. ನಿಮ್ಮ ರೀತಿ ನೀತಿಗಳು ನಮಗಂತೂ ಅರ್ಥವಾಗುವುದಿಲ್ಲ. ದೇವಸ್ಥಾನಕ್ಕಾದರೂ ಕರೆದುಕೊಂಡು ಬಂದೆಯಲ್ಲ. ಬನ್ನಿ! ಆಂಜನೇಯ ನಿಮ್ಮಿಬ್ಬರಿಗೂ ಒಳ್ಳೇದು ಮಾಡಲಿ" ಎಂದು ಒಂದೇ ಉಸಿರಿನಲ್ಲಿ ಸ್ವಾಗತಿಸಬೇಕೆ? ಹಿಂದೂ ಮುಂದೂ ನೋಡದೇ ಮನಸ್ಸಿನಲ್ಲಿ ಬಂದದ್ದನ್ನು ಇದ್ದಹಾಗೇ ಹೇಳುವಂಥ ಕೆಲವೇ ಜನರಲ್ಲಿ ಸುಬ್ಬಾಭಟ್ಟರೂ ಒಬ್ಬರು. ಪ್ರಾಯಶಃ ಅವರ ಈ ದುಡುಕು ಸ್ವಭಾವವೇ ಅವರು ತಮ್ಮ ಸರ್ಕಾರೀ ಕೆಲಸಕ್ಕೆ ತಿಲಾಂಜಲಿ ಹೇಳುವುದಕ್ಕೆ ಕಾರಣ ಹಾಗಿರಬೇಕು. ಅವರು ನಮ್ಮನ್ನು ಸ್ವಾಗತಿಸಿದ ಪರಿಯನ್ನು ನೋಡಿ, ಅವರ ಸ್ವಭಾವ ಗೊತ್ತಿದ್ದ ನನಗಂತೂ ಯಾವ ಕೋಪವೂ ಬರಲಿಲ್ಲ. ಜೊತೆಯಲ್ಲಿದ್ದ ನಮ್ಮಜ್ಜಿ ವಿಷಯ ಬಿಡಿಸಿ ಸುಬ್ಬಾಭಟ್ಟರಿಗೆ ಹೇಳುವಷ್ಟರಲ್ಲಿ, "ದೀರ್ಘ ಸುಮಂಗಲೀ ಭವ" ಎಂದು ಅವರು ಹುಡುಗಿಗೆ ಆಶೀರ್ವದಿಸಿಯೂ ಆಗಿತ್ತು. ಕ್ಷಣಮಾತ್ರಕ್ಕೆ ನಾವಿಬ್ಬರೂ ಒಬ್ಬರೊನ್ನೊಬ್ಬರು ನೋಡಿದೆವು. ನಗು ತಡೆಯದಾಯಿತು. ಜೋರಾಗಿ ನಕ್ಕುಬಿಟ್ಟೆವು. ಪೂಜೆ ಮುಗಿಸಿಕೊಂಡು ಎಲ್ಲರೂ ಮನೆಗೆ ಮರಳಿದೆವು. ರಾತ್ರಿ ಎಂದಿನಂತೆ ಊಟವಾಯಿತು. ಮನಸ್ಸೇಕೋ ಹೆಚ್ಚು ಸಂತೋಷವಲ್ಲಿದ್ದಂತೆ ತೋರುತ್ತಿತ್ತು. ದಿನನಿತ್ಯಕ್ಕಿಂತ ಬಹಳ ಬೇಗ ನಿದ್ರೆಯೂ ಆವರಿಸಿಕೊಂಡಿತು. ಹೀಗೇ ಇನ್ನೊಂದು ದಿವಸವೂ ಕಳೆದುಹೋಯಿತು. ನಂತರ ಗುರುವಾರ ಬಂದೇಬಿಟ್ಟಿತು. ಇಂದು ಆ ಇಂಜನಿಯರ್ ವರ ಈ ಹುಡುಗಿಯನ್ನು ನೋಡಲು ಬರುವವನಿದ್ದ. ಮನೆಯಲ್ಲಿ ಹಬ್ಬದ ಸಡಗರ, ಬೆಳಗ್ಗೆ ಎದ್ದೊಡನೆ ಹುಡುಗಿಗೆ ಎಣ್ಣೆ ಹಚ್ಚಿ ಎರೆಯೋದರೊಡನೆ ಪ್ರಾರಂಭವಾಯಿತು. ದಿನನಿತ್ಯದಲ್ಲೇ ನನಗೆ ಸುಂದರವಾಗಿ ಕಂಡ ಹುಡುಗಿ, ಇಂದಂತೂ ಹೇಳತೀರದು. ನನ್ನ ದೃಷ್ಟಿಯೇ ತಾಕೀತು ಎಂದು ನನಗೇ ಶಂಕೆ ಬರುವಂತೆ ಕಂಡಳು. ಅವಳ ಮೈಮನಸ್ಸುಗಳೆರಡೂ ಪರಿಶುದ್ಧವಾಗಿ ಕಂಡವು. ನನ್ನ ತಂದೆ ತಾಯಿಗಳಿದ್ದಿದ್ದರೇ ಹೇಳಿ ಒಪ್ಪಿಸಿಬಿಡಬಹುದಿತ್ತಲ್ಲ ಎಂದು ಪೇಚಾಡಿದೆ. ಆದರೆ ಈಗ ಅದಕ್ಕೆಲ್ಲ ವೇಳೆ ಮೀರಿಹೋಗಿತ್ತು. ಸಂಜೆ ಬರುವ ವರನ ಕಡೆಯವರನ್ನು ಕೆರೆದಂಡೆಯಿಂದಲೇ ಕರೆದುಕೊಂಡು ಬರುವುದೆಂದು ನಿಶ್ಚಯವಾಯಿತು. ಅವರೆಲ್ಲ ಮನೆಗೆ ಬಂದೊಡನೆ ಹುಡುಗನ ಬಗ್ಗೆ ವಿಶೇಷ ಕಾಳಜಿ ವಹಿಸುವುದು ನನ್ನ ಜವಾಬ್ದಾರಿಯಾಗಿತ್ತು. ಎಂತಹ ವಿಪರ್ಯಾಸ? ವಿಧಿಯಿಲ್ಲದೇ ಒಪ್ಪಿಕೊಂಡೆ.

ಸಂಜೆ ನಾಲ್ಕು ಗಂಟೆಗೆ ಕೆರೆದಂಡೆಯಿಂದ ಬಸ್ಸಿನ ಹಾರ್ನ್ ಕೇಳಿ ಬಂತು. ಸ್ವಾಗತಿಸಲೆಂದು ಹೋದವರೊಡನೆ ಬಂದವರಾರು? ಹುಡುಗನ ತಂಡದವರಾರೂ ಅಲ್ಲ ಹುಡುಗಿಯ ತಂದೆ ತಾಯಿ ಮಾತ್ರ. ವರನ ಕಡೆಯವರು ಈ ಬಸ್ಸಿನಲ್ಲಿ ಬಾರದೇ ಇದ್ದಿದ್ದರಿಂದ ಆರು ಗಂಟೆಗೆ ಬರುವ ಬಸ್ಸಿನಲ್ಲಿ ಬರಬಹುದು ಎಂದು ಅನುಮಾನ ವ್ಯಕ್ತಪಡಿಸಿದರು. ಸರಿ, ಮತ್ತೆ ಕಾಯ ತೊಡಗಿದೆವು. ನನ್ನ ತಂದೆ ಹೇಳುವ ಹಾಗೆ, ಹುಡುಗಿಯ ತಂದೆ ನಿಜವಾಗಲೂ ಸಜ್ಜನರಾಗಿದ್ದರು. ಮೃದು ಭಾಷಿ. ಅವರ ಹೆಂಡತಿ ಬಹಳ ಲಕ್ಷಣವಂತೆ. ನನ್ನನ್ನು ಮೊದಲ ಬಾರಿಗೆ ನೋಡುತ್ತಿದ್ದರೂ, ಬಹಳ ಸಲಿಗೆಯಿಂದ ನನ್ನ ಎಲ್ಲ ವಿಷಯಗಳನ್ನೂ ಕೇಳಿ ತಿಳಿದುಕೊಂಡರು. ನಾನು ಅವರ ಮಗಳ ಪ್ರಸ್ತಾಪವನ್ನು ಹಿಂತೆಗೆದಿದ್ದೆ ಎಂದು ಅವರಿಗೆ ಎಳ್ಳಷ್ಟೂ ಕೋಪವಿರಲಿಲ್ಲ. ಅದು ಅವರ ದೊಡ್ಡತನವನ್ನು ಎತ್ತಿತೋರಿಸುವಂತಿತ್ತು.

ಸಂಜೆ ಆರು ಗಂಟೆಗೆ ಬರಬೇಕಿದ್ದ ಬಸ್ಸು ಅಂದು ಹದಿನೈದು ನಿಮಿಷ ತಡವಾಗಿ ತನ್ನ ಆಗಮನವನ್ನು ಸೂಚಿಸಿತು. ಇನ್ನು ಹತ್ತು ನಿಮಿಷದಲ್ಲಿ ದೂರದಿಂದಲೇ ಕೆರೆದಂಡೆಗೆ ಹೋದವರು ಬರುವುದು ಕಾಣಿಸಿತು. ಅವರೆಲ್ಲರೂ ಹತ್ತಿರ ಬಂದಂತೆಲ್ಲ ನಿರಾಸೆ ಮತ್ತೇ ಕಾದಂತೆ ತೋರಿತು. ಹುಡುಗನ ಕಡೆಯವರಾರೂ ಇಲ್ಲ. ಬದಲಿಗೆ ಆಶ್ಚರ್ಯವೆಂದರೆ ಮೈಸೂರಿನಿಂದ ನನ್ನ ತಂದೆ ತಾಯಿ ಅದೇ ಬಸ್ಸಿಗೆ ಬಂದಿದ್ದರು. ಅವರಿಗೆ ಇಲ್ಲಿಯ ಯಾವ ವಿಷಯವೂ ಗೊತ್ತಿರಲಿಲ್ಲ. ಆದರೂ ಇಂದೇ ಅವರು ಬಂದದ್ದು ನನಗೆ ಒಂದು ರೀತಿಯ ಆಶ್ಚರ್ಯ ಹಾಗೂ ಸಂತೋಷ ಎರಡನ್ನೂ ತಂದಿತು. ಬಹಳ ವರ್ಷಗಳ ಮೇಲೆ ನನ್ನ ತಂದೆ ಅವರ ಮಿತ್ರರೊಡನೆ ಸೇರಿದ್ದರಿಂದ, ಹಳೆಯ ನೆನಪುಗಳು ಮತ್ತೇ ಅವರ ಮಾತಿನಲ್ಲಿ ಮರಕಳಿಸಿದವು. ಇನ್ನೊಂದು ಬಾರಿ ತಮ್ಮ ಬಾಲ್ಯವನ್ನೇ ಮತ್ತೇ ಜೀವಿಸಿದಂತೆ ಅವರಿಬ್ಬರಿಗೂ ಅನಿಸಿತು. ಇತ್ತ ವರನ ಕಡೆಯವರಿಂದ ಯಾವ ಪ್ರಸ್ತಾಪವೂ ಬಾರದೇ ಇದ್ದದ್ದರಿಂದ, ನನ್ನ ತಾಯಿಯನ್ನು ಒಂದೆಡೆ ಕರೆದೆ "ನೀನಂತೂ ನನಗೆ ಮದುವೆ ಆಗಲು ಬಹಳ ಒತ್ತಾಯಿಸುತ್ತಿದ್ದೆ. ನಿಮ್ಮಿಬ್ಬರಿಗೂ ಯಾವ ಅಭ್ಯಂತರವೂ ಇಲ್ಲದಿದ್ದರೆ ನಾನು ಈಗ ಬಂದ ಹುಡುಗಿಯನ್ನು ಮದುವೆ ಆಗಲು ಇಷ್ಟಪಡುತ್ತೇವೆ. ವಿಷಯ ಪ್ರಾಸ್ತಾಪಿಸಿ ನೋಡು" ಎಂದು ನನ್ನ ಮನಸ್ಸಿನಲ್ಲಿ ಹುದುಗಿದ್ದ ಆಸೆಯನ್ನು ಹೇಳಿಬಿಟ್ಟೆ. ನನ್ನ ತಾಯಿಗಂತೂ ಆದ ಸಂತೋಷ ಅಷ್ಟಿಷ್ಟಲ್ಲ. ಅವರೊಬ್ಬರಿಗೇ ಏನು? ವಿಷಯ ತಿಳಿದೊಡನೆ ಹುಡುಗಿಯ ತಂದೆತಾಯಿ ಸಹಿತವಾಗಿ ಮನೆಯವರೆಲ್ಲರೂ ಸಂತೋಷವನ್ನು ವ್ಯಕ್ತಪಡಿಸಿದರು. ಅಂತೇ ಹುಡುಗಿಯ ಅಭಿಪ್ರಾಯವನ್ನು ತಿಳಿದುಕೊಂಡು ನಿಶ್ಚಿತಕಾರ್ಯವೂ ಮುಗಿದು ಹೋಯಿತು. ಅಕಸ್ಮಾತ್ತಾಗಿ ನನ್ನೆಡೆಗೆ ಬಂದ ಭಾಗ್ಯವನ್ನು ನಾನೇ ನಂಬಲಾರದವನಾದೆ. ಮಾರನೇಯ ದಿನ ಊರಿನಲ್ಲಿ ಕೆಲಸವಿದ್ದಿದ್ದರಿಂದ ನನ್ನ ತಂದೆತಾಯಿಗಳು ಅಲ್ಲೇ ಇರಬೇಕಾಯಿತು. ನಾನು ಮಾತ್ರ ತಿರುಗಿ ಮೈಸೂರಿಗೆ ಹೊರಟೆ. ಕೆರೆದಂಡೆಗೆ ಬೇರೆಯಲ್ಲರೊಡನೆ ನನ್ನ ಹುಡುಗಿಯೂ ಬಂದಿದ್ದಳು. ಬಸ್ಸು ಹೊರಟೊಡನೆ, ನನ್ನ ಮಾವ, ನನಗೊಂದು ಲಕೋಟೆಯನ್ನು

ಕೊಟ್ಟು, "ನಿಧಾನವಾಗಿ ನಿನಗೆ ವೇಳೆ ದೊರೆತಾಗ ಇದನ್ನು ಓದು" ಎಂದು ಹೇಳಿದರು. ಊರು ದಾಟಿದೊಡನೆಯೇ ಪತ್ರವನ್ನು ಓದಲು ಪ್ರಾರಂಭಿಸಿದೆ. ಅದು, ನನ್ನ ತಂದೆ ಹುಡುಗಿಯ ತಂದೆಗೆ ಬರೆದ ಪತ್ರವಾಗಿತ್ತು.


"ಮಾನ್ಯ ಕುಲಕರ್ಣಿಯವರಲ್ಲಿ,

ಅನಂತ ವಂದನೆಗಳು

ನಮ್ಮಿರ್ವರ ಇಪ್ಪತ್ತು ವರ್ಷಗಳ ಸ್ನೇಹವನ್ನು ಬಂಧುತ್ವದಲ್ಲಿ ರೂಪಿಸುವುದಕ್ಕೆ ಬಂದ ನಿಮ್ಮ ಪ್ರಸ್ತಾಪಕ್ಕೆ ನಮ್ಮ ಕಡೆಯಿಂದ ಯಾವ ಅಭ್ಯಂತರವೂ ಇಲ್ಲ. ತಕ್ಷಣ ನನ್ನ ಮಗ ಒಪ್ಪುತ್ತಿಲ್ಲವಾದರೂ ನಿಮ್ಮ ಮನೆತನವನ್ನು ಹುಡುಗಿಯನ್ನೂ ನೋಡಿದ ಮೇಲೆ ಅವನು ಒಪ್ಪುತ್ತಾನೆ ಎನ್ನುವುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ನನ್ನ ಮಗನಿಗೆ ಯಾವುದೇ ಸಂಶಯ ಬಾರದೇ ಇರುವ ಹಾಗೆ ಹುಡುಗಿಯನ್ನು ತೋರಿಸುವ ಜವಾಬ್ದಾರಿ ನಿಮ್ಮದು ಈ ವರ್ಷ ಜಾತ್ರೆಗೆ ಅವನನ್ನೇ ಕಳಿಸಿ ಕೊಡುತ್ತೇವೆ. ಸಾಧ್ಯವಾದರೆ ಆಗಲೇ ತೋರಿಸಿ. ನಂತರ ನಾವೆಲ್ಲರೂ ಕಲೆತು ಒಂದು ದಿನ ಊರಿಗೆ ಹೋಗಿ ನಿಶ್ಚಿತಾರ್ಥ ಕಾರ್ಯವನ್ನು ಮಾಡಿ ಮುಗಿಸೋಣ. ನಿಮ್ಮ ಶ್ರೀಮತಿಯವರಿಗೆ ನನ್ನ ನೆನಹುಗಳನ್ನು ಹಾಗೂ ನನ್ನ ಭಾವಿ ಸೊಸೆಗೆ ನನ್ನ ಶುಭಹಾರೈಕೆಗಳನ್ನು ತಿಳಿಸಿ.

ಇಂತಿ ತಮ್ಮ ಆತ್ಮೀಯ ಬಂಧು"

ಪತ್ರವನ್ನು ಓದಿ ನಗು ತಡೆಯದಾಯಿತು. ಬಸ್ಸಿನಲ್ಲಿರುವ ಜನರ ಪರಿವೆಯೇ ಇಲ್ಲದೇ ನಕ್ಕುಬಿಟ್ಟೆ. ಶಾನುಭೋಗರ ಪಟ್ಟುಗಳ ಬಗ್ಗೆ ಕೇಳಿದ್ದೆನಾದರೂ ಅನುಭೋಗಿಸಿರಲಿಲ್ಲ ಇಂದು ಅದರ ಅನುಭವವೂ ನನಗಾಗಿತ್ತು.



ಶಕ್ತಿರಹಿತವಾದ ಜ್ಞಾನವೂ ಜ್ಞಾನದ ಸಂಪರ್ಕವಿಲ್ಲದ ಶಕ್ತಿಯೂ ಬಹಳ ಮಟ್ಟಿಗೆ ಸಮಾಜಕ್ಕೆ ಅಪಾಯಕಾರಿಯಾದದ್ದು.

—ಸ್ವಾಮಿ ಅಭಯಾನಂದ

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿತ್ರ ಅನು: ಡಿ. ಎನ್. ಶ್ರೀನಾಥ್

(ಮುಂದುವರಿದುದು)

"ನೌಕರಿ ಸಿಕ್ತಾ?" ರಾತ್ರಿ, ಅಟಲ್ ದಾ ಮನೆಗೆ ಬಂದೊಡನೆ ಕುಂತಿ ಪ್ರಶ್ನಿಸುತ್ತಿದ್ದಳು.

"ನೌಕರಿ? ನಾನು ನೌಕರಿ ಮಾಡುವುದೇ? ನೌಕರಿಯನ್ನೇ ಮಾಡಬೇಕೆಂದಿದ್ದರೆ, ಈ ಮೊದಲೇ ಮಾಡುತ್ತಿದ್ದೆ. ಒಬ್ಬ ಸಾಮಾನ್ಯ ಮನುಷ್ಯನಂತೆ ನೌಕರಿ ಮಾಡಲೋಸುಗವೇ ನಾನಿದ್ದೇನೆಂದು ತಿಳಿದುಕೊಂಡಿದ್ದೀಯಾ?"

"ನೀವು ನೌಕರಿ ಮಾಡದಿದ್ರೆ, ಜೀವನ ನಡೆಯುವುದು ಹೇಗೆ?"

"ನನ್ನ ಜೊತೆ ನಿನ್ನ ಜೀವನ ಸೇರಿರುವಾಗ, ನನ್ನ ಜೀವನ ಹೇಗೆ ನಡೆಯುವುದೋ ಹಾಗೆಯೇ ನಿನ್ನ ಜೀವನವೂ ನಡೆಯಬೇಕು!"

"....ನನ್ನ ವಿಷಯ ಬಿಡಿ. ಈಗ, ನಿಮ್ಮ ಜೀವನವೂ ನಡೀತಿಲ್ಲ."

"ನನ್ನ ಬಗ್ಗೆ ನೀನು ಯೋಚ್ನೆ ಮಾಡಬೇಕಾಗಿಲ್ಲ."

"ನನ್ನ ಬಗ್ಗೆ ನೀವು ಯೋಚನೆ ಮಾಡಲೇ ಬೇಕಾಗುತ್ತೆ. ಇಲ್ಲದಿದ್ದರೆ, ನೀವೇಕೆ ನನ್ನ ಮದುವೆಯಾದಿರಿ?"

ಈ ಪ್ರಶ್ನೆಗೆ ಉತ್ತರಿಸಲು ಅಟಲ್ ದಾ ಹೆದರುತ್ತಿದ್ದರು. ಕುಂತಿಗೆ ಎಲ್ಲಾ ವಿಷಯವನ್ನೂ ಹೇಳಿಬಿಡಲು ಮನಸ್ಸಾಗುತ್ತಿತ್ತು. ಕುಂತಿ ಯಾರು? ಅವಳ ಪರಿಚಯವೇನು? ಅವಳನ್ನು ತಾವೇಕೆ ಮದುವೆಯಾದದ್ದು– ಎಲ್ಲಾ ವಿಷಯಗಳನ್ನು ಕುಂತಿಗೆ ಹೇಳಿ ಸದಾಕಾಲಕ್ಕೂ ಈ ಸಂಬಂಧ ಕಡಿದುಕೊಂಡು ಬೇರೆಡೆಗೆ ಯಾಕೆ ಹೊರಟು ಹೋಗಬಾರದೆಂದೂ ಅಟಲ್ ದಾ ಯೋಚಿಸುತ್ತಿದ್ದರು.

ಆದರೆ, ಇದು ತಾತ್ಕಾಲಿಕ ಚಿಂತನೆ ಮಾತ್ರವಾಗಿತ್ತು. ಅಂಥಾ ಪ್ರಶ್ನೆಗಳು ಮನಸ್ಸಿನಲ್ಲೇ ಉಳಿದುಬಿಡುತ್ತಿದ್ದವು. ಕುಂತಿಯ ಮಾತುಗಳಿಗೆ ಮೌನ ತಾಳಿಬಿಡುತ್ತಿದ್ದರು. 'ತಾವು ಸಾಮಾನ್ಯ ಮನುಷ್ಯರಂತೆ ಕೇವಲ ಬದುಕುವುದಕ್ಕಾಗಿಯೇ ಈ ಜಗತ್ತಿಗೆ ಬಂದಿಲ್ಲ'ವೆಂದುಕೊಂಡು ಬದಾಮತಲ್ಲೆಯ ತಮ್ಮ ಮನೆಗೆ ಬಂದುಬಿಡುತ್ತಿದ್ದರು. ಶಾಂತವಾಗಿ ಕುಂತಿಯನ್ನು ಕ್ಷಮಿಸಿಬಿಡುತ್ತಿದ್ದರು.

ಸ್ವಾಮಿ ವಿವೇಕಾನಂದರಂತೆ ಅಟಲ್ ದಾರವರೂ ಗೃಹ-ತ್ಯಾಗಿಗಳಾಗಿದ್ದರು.

'ಗುರಿ–ಸಾಧನೆ' ಯಲ್ಲಿ ವಿಘ್ನಗಳು ಎದುರಾಗುವುದು ಸಹಜ. ಈ ವಿಘ್ನಗಳನ್ನೆದುರಿಸುವುದುರಲ್ಲೇ ಅವರ ಮಹತ್ವವಿತ್ತು.

"ಆಮೇಲೆ?" ನಾನು ಅಧೀರನನ್ನು ನೋಡಿದೆ.

"ಅಟಲ್ ದಾರವರನ್ನು ನಾವೆಲ್ಲಾ ಶ್ರದ್ಧೆಯಿಂದ ಕಾಣುತ್ತಿರುವಾಗಲೇ ಅವರು ಗೋಪ್ಯ-ವಿವಾಹ ಮಾಡಿಕೊಂಡಿದ್ದರು. ಈ ಬಗ್ಗೆ ಅವರ ಮನಸ್ಸಿನಲ್ಲಿ ವೇದನೆಯಿತ್ತು."

"ನನ್ನ ಭಾರ ಹೊರಲಾಗದಿದ್ದ ಮೇಲೆ ನಾನೆಲ್ಲಿಗೆ ಹೋಗಲಿ?" ಶಾಂತಿ ಸದಾ ಅಟಲ್ ದಾರವರನ್ನು ಪ್ರಶ್ನಿಸುತ್ತಿದ್ದಳು.

"ಯಾಕೆ? ನೀನಿದ್ದಲ್ಲೇ ಇರು"

"ಮತ್ತೆ ನೀವು?"

"ನಿನ್ನನ್ನು ಮದುವೆಯಾದ ಮಾತ್ರಕ್ಕೆ ನಾನು ನಿನ್ನ ಗುಲಾಮನಾದೆನೇ? ನನ್ನ ಸ್ವತಂತ್ರ ಅಸ್ತಿತ್ವವೇ ಇಲ್ಲವೇ?"

"ಇಲ್ಲ ಅಂತ ನಾನು ಹೇಳಲಿಲ್ಲ"

"ನಿನಗಾಗಿ ನನ್ನ ವಿದ್ಯಾಭ್ಯಾಸ-ಸಾಧನೆ -ಶ್ರಮ ಎಲ್ಲವೂ ವ್ಯರ್ಥವಾದವು. ಇನ್ನು ಕೆಲವು ದಿನಗಳಲ್ಲಿ ನನಗೆ ಹುಚ್ಚು ಹಿಡಿದು ಬಿಡುತ್ತೆ" ಅಟಲ್ ದಾ ರೇಗಿ ಬಿಡುತ್ತಿದ್ದರು.

"ನಿಮಗಿಂತ ಮೊದ್ಲು ನನಗೆ ಹುಚ್ಚು ಹಿಡಿಯುತ್ತೆ"

"ನೀನು ಹುಚ್ಚಿಯೇ ಆಗಿದ್ದರೆ, ನನ್ನ ತಲೆಯನ್ನು ಯಾಕೆ ಕೆಡಿಸ್ತೀಯಾ?"

"ನನ್ನ ಬಗ್ಗೆ ನೀವು ಸ್ವಲ್ಪವೂ ಯೋಚಿಸುವುದಿಲ್ಲವಲ್ಲ. ನಾನು ನಿಮಗೆ ಏನೂ ಅನ್ನಿಸುವುದಿಲ್ಲವೇ? ಅಗ್ನಿ ಸಾಕ್ಷಿಯಾಗಿ ನೀವು ನನ್ನನ್ನು ಮದುವೆಯಾಗಲಿಲ್ಲವೇ? ಮಾತಾಡಿ? ನನ್ನ ಮೇಲೆ ಆಣೆಯಿಟ್ಟು ಮಾತಾಡಿ?"

ಅಟಲ್ ದಾ ಕಲ್ಲಿನಂತೆ ನಿಂತುಬಿಡುತ್ತಿದ್ದರು. ಸಿಟ್ಟಿನ ಆವೇಶದಲ್ಲಿ ಏನೂ ಮಾಡಲೂ ಹಿಂಜರಿಯದವರಂತೆ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡುಬಿಡುತ್ತಿದ್ದರು. ಆದರೆ, ಮತ್ತೆ ಕೂಡಲೇ ತಮ್ಮನ್ನು ಸಾವರಿಸಿಕೊಂಡುಬಿಡುತ್ತಿದ್ದರು.

"ಶಾಂತಿ, ನೀನು ನನಗೆ ನೆಮ್ಮದಿಯಿಂದಿರಲು ಬಿಡುವುದಿಲ್ಲವೇ?"

"ನೆಮ್ಮದಿ? ನೀವು ನನಗೆ ಒಂದು ಕ್ಷಣವಾದರೂ ನೆಮ್ಮದಿಯನ್ನು ಕೊಟ್ಟಿದ್ದೀರ?"

"ನಿನಗಾಗಿ ನಾನೆಷ್ಟು ತ್ಯಾಗ ಮಾಡಿದ್ದೇನೆ, ಗೊತ್ತಾ?"

"ಹೇಳಿ, ನೀವೇನು ತ್ಯಾಗ ಮಾಡಿದ್ದೀರ?"

"ಅಂದರೆ? ನಿನ್ನನ್ನು ಮದುವೆಯಾಗುವುದಕ್ಕೂ ಮೊದಲು ನಾನೆಂಥಾ ವ್ಯಕ್ತಿಯಾಗಿದ್ದೆ; ನನ್ನಲ್ಲಿ ಅದೆಷ್ಟು ಸಾಮರ್ಥ್ಯವಿತ್ತು; ನನ್ನನ್ನು ಎಲ್ಲರೂ ಅದೆಷ್ಟು ಗೌರವದಿಂದ ಕಾಣುತ್ತಿದ್ದರು. ನನಗೆ ಎಷ್ಟೊಂದು ಕಾರ್ಯಭಾರಗಳಿರುತ್ತಿದ್ದವು. ಇದನ್ನೆಲ್ಲಾ ನೀನು ಯೋಚಿಸಲೂ ಸಾಧ್ಯವಿಲ್ಲ."

"ನನಗೆಲ್ಲಾ ಗೊತ್ತಿದೆ. ಒಂದು ಕಾಲದಲ್ಲಿ ನಾನೂ ನಿಮ್ಮನ್ನು ಗೌರವದಿಂದ ಕಾಣುತ್ತಿದ್ದೆ."

"ಈಗ, ಆ ಗೌರವ ಎಲ್ಲಿ ಹೋಯ್ತು; ಶಾಂತಿ? ನಾನೇಕೆ ತಲೆಯೆತ್ತಿ ನಡೆಯಲಾರೆ? ಮಾತಾಡಲಾರೆ? ಹೇಳು?"

"ಹೇಳ್ಲಾ? ನಿಜ ಹೇಳ್ಲಾ?"

"ಹೂಂ, ಹೇಳು ?"

"ನೀವು ನಿಮ್ಮನ್ನು ಭ್ರಮಾಲೋಕದಲ್ಲಿ ಇಟ್ಟುಕೊಂಡಿದ್ದೀರ? ನಿಜ ಹೇಳಬೇಕೆಂದರೆ, ನಿಮ್ಮಲ್ಲಿ ಯಾವುದೇ ಉತ್ತಮ ಗುಣವಿಲ್ಲ. ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವುದೊಂದನ್ನು ಬಿಟ್ಟರೆ, ಬೇರೆ ಗುಣಗಳು ನಿಮ್ಮಲ್ಲಿಲ್ಲವೇ ಇಲ್ಲ. ಎಲ್ಲರೂ ನಿಮ್ಮನ್ನು ಒಳ್ಳೆಯವರೆಂದು ಹೊಗಳಿ, ಹೊಗಳಿ, ದೊಡ್ಡವರನ್ನಾಗಿ ಮಾಡಿಬಿಟ್ಟಿದ್ದಾರೆ. ನಿಜ ಹೇಳಬೇಕೆಂದರೆ, ನೀವೆಂದೂ ದೊಡ್ಡವರಾಗಲಿಲ್ಲ. ಜನ, ವಿಶಿಷ್ಟ ಸಭೆ-ಸಮಾರಂಭಗಳಲ್ಲಿ ನಿಮ್ಮನ್ನು ಗೌರವಿಸಬೇಕೆಂದು ನೀವಿಷ್ಟ ಪಡ್ತೀರ. ಆದರೆ, ಇದೆಲ್ಲಾ ಸುಲಭವೇ? ನೀವು, ಏನನ್ನೂ ಸಾಧಿಸದೇ ಮೇಲೇರಲು ಬಯಸಿದ್ದಿರಿ."

"ನನ್ನ ಬಗ್ಗೆ ನಿನ್ನ ಅಭಿಪ್ರಾಯವೇ ಇದು?" ಕುಂತಿಯ ಮಾತುಗಳು ಅಟಲ್ ದಾರವರಿಗೆ ಹಿಡಿಸುತ್ತಿರಲಿಲ್ಲ.

"ನನ್ನ ಅಭಿಪ್ರಾಯ ಏನೆಂದು ನೀವೇ ಕೇಳಿದ್ದಕ್ಕೆ ಹೇಳಿದೆ, ಅಷ್ಟೆ."

"ಸರಿ! ನಿನಗೆ ನನ್ನಲ್ಲಿ ಗೌರವ-ಶ್ರದ್ಧೆ ಇಲ್ಲದಿದ್ದರೆ, ನೀನು ನನ್ನನ್ನು ಬಿಟ್ಟುಬಿಡು. ನನಗೆ ಮುಕ್ತಿಯನ್ನು ಕೊಟ್ಟುಬಿಡು. ಹೀಗೆ ಯಾಕೆ, ಹಿಂಸೆ ಮಾಡ್ತಿದ್ದೀಯಾ?" ಸಿಟ್ಟಿನ ಆವೇಶದಲ್ಲಿ ಅಟಲ್ ದಾ ಹೊರಡಲನುವಾಗುತ್ತಿದ್ದರು."

"ಎಲ್ಲಿಗೆ ಹೋಗ್ತಿದ್ದೀರಿ?" ಹಿಂದಿನಿಂದ ಬಂದು ಅಟಲ್ ದಾರವರ ಕೈಯನ್ನು ಕುಂತಿ ಹಿಡಿದುಕೊಳ್ಳುತ್ತಿದ್ದಳು.

"ನನಗಿಷ್ಟ ಬಂದಲ್ಲಿ!"

"ಅದೆಲ್ಲಾ ಸಾಧ್ಯವಿಲ್ಲ. ನೀವು ನನ್ನನ್ನು ಮದುವೆಯಾಗಿದ್ದೀರಿ ಎಂಬುದನ್ನು ಮರೆಯಬೇಡಿ."

"ಹಾಗಾದರೆ. ನನ್ನ ಅಸ್ತಿತ್ವ?"

"ಇಲ್ಲ!" ಕುಂತಿ ಗಟ್ಟಿಯಾಗಿ ಅವರ ಕೈಯನ್ನು ಹಿಡಿದುಕೊಳ್ಳುತ್ತಿದ್ದಳು.

"ಅಂದ್ರೆ?"

"ನಾನು ನಿಮ್ಮ ಸಹಧರ್ಮಿಣಿ. ನನ್ನಿಂದ ಬೇರೆಯಾಗಿ ನಿಮ್ಮ ಯಾವುದೇ ಅಸ್ತಿತ್ವವಿಲ್ಲ. ಕಾನೂನು...."

"ನೀನು ನನಗೆ ಕಾನೂನು ಹೇಳಿಕೊಡ್ತೀಯಾ!"

"ಜಗತ್ತಿನಲ್ಲಿ ನ್ಯಾಯಾಲಯದ ಕಾನೂನು ಮಾತ್ರವಲ್ಲ. ದೇವರ ಕಾನೂನೂ ಇದೆ. ಚಂದ್ರ, ಸೂರ್ಯ, ಗ್ರಹ-ನಕ್ಷತ್ರಗಳು ಯಾವ ನಿಯಮಗಳ ಬಲದ ಮೇಲೆ, ಚಲಿಸುತ್ತವೆಯೋ ಅದೂ ಒಂದು ಕಾನೂನೇ. ಆ ಕಾನೂನೇ ನಿಮ್ಮನ್ನೂ ತಡೆಯುತ್ತೆ."

"ನಾನು ಆ ಕಾನೂನನ್ನು ನಂಬಲ್ಲ."

"ಅದು ಯಾರ ಮಾತನ್ನೂ ಕೇಳಲ್ಲ, ನಾನೇಕೆ ಕೇಳ್ಲಿ?"

"ನೀನು ಕೇಳು-ಬಿಡು, ಅದನ್ನು ತಗೊಂಡು ನಾನೇಕೆ ತಲೆ ಕೆಡಿಸಿಕೊಳ್ಳಲಿ? ನಾನು ಹೊರಟೆ ಅಟಲ್ ದಾ ಕುಂತಿಯಿಂದ ಬಿಡಿಸಿಕೊಂಡು ಹೊರಡಲನುವಾದರು. ಆದರೆ, ಅದಕ್ಕೂ ಮೊದಲು ಕುಂತಿ ಅಟಲ್ ದಾರವರ ಶರ್ಟಿನ ತುದಿಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಈ ಎಳೆತದಿಂದಾಗಿ ಅವರ ಶರ್ಟಿನ ತುದಿ ಹರಿಯಿತು. ಅಟಲ್ ದಾ ಆಶ್ಚರ್ಯಗೊಂಡರು. ಹರಿದ ಆ ಭಾಗವನ್ನೇ ದೃಷ್ಟಿಸಿ, ಕಡೆಗೆ ಅಲ್ಲಿಂದ ಮೌನಿಯಾಗಿ ಹೊರಟು ಹೋದರು.

ಶರ್ಟ್ ಹರಿದಿದ್ದರಿಂದಾಗಿ ಕುಂತಿಯೂ ಸಂಕೋಚಗೊಂಡಳು? ಆದರೆ ಅವಳು

ಸಹಜಾವಸ್ಥೆಗೆ ಬಂದಾಗ ಅಟಲ್‌ದಾ ಎದುರಿಗಿರಲಿಲ್ಲ.

ಕುಂತಿಯ ವೈವಾಹಿಕ ಜೀವನದಲ್ಲಿ ಇಂಥಾ ಘಟನೆ ಮೊದಲ ಬಾರಿಗೆ ಘಟಿಸಿತ್ತು. ಅಟಲ್‌ದಾರವರಿಗೂ ಇದು ಹೊಸದಾಗಿತ್ತು. ಎಲ್ಲರ ಶ್ರದ್ಧೆ–ಪ್ರೀತಿಯನ್ನು ಪಡೆದು ಅವರು ಗರ್ವವನ್ನನುಭವಿಸಿದ್ದರು. ತಾವು ಇನ್ನೊಬ್ಬರೆದುರು ಚಿಕ್ಕವರಲ್ಲ ಎಂಬ ಭಾವನೆ ಅವರಲ್ಲಿ ಬೇರೂರಿತ್ತು. ತಮ್ಮಿಂದ ಯಾವ ತಪ್ಪೂ ಸಾಧ್ಯವಿಲ್ಲ; ಒಂದು ವೇಳೆ ತಪ್ಪಾದರೂ ಜನ ಅವನ್ನು ತಪ್ಪಾಗಿ ಭಾವಿಸಬಾರದೆಂಬುದು ಅವರ ವಿಚಾರವಾಗಿತ್ತು....

ಕಡೆಗೆ ನಿಶ್ಚಿತ ವಿವಾಹದ ಸಮಯವೂ ಬಂದಿತು. ಅಟಲ್‌ದಾರವರ ವಿವಾಹದ ಆಮಂತ್ರಣ–ಪತ್ರಗಳನ್ನು ಆಶುಬಾಬು ಹಂಚಿಬಿಟ್ಟಿದ್ದರು. ಆ ದಿನಗಳಲ್ಲಿ ಅಟಲ್‌ದಾ ತಮ್ಮ ಕೋಣೆಯ ದೀಪವಾರಿಸಿ, ರಾತ್ರಿಯೆಲ್ಲಾ ಎಚ್ಚರದಿಂದಿರುತ್ತಿದ್ದರು. ಎಲ್ಲವನ್ನು ತ್ಯಜಿಸಿ, ಅಂತಿಮ ಮುಹೂರ್ತದಲ್ಲಿ ಎಲ್ಲಿಗಾದರೂ ಓಡಿ ಹೋಗಬೇಕು—ಅದೂ, ಯಾರೂ ತಮ್ಮನ್ನು ಗುರುತಿಸದಂತಹ ಜಾಗಕ್ಕೆ ಹೋಗಬೇಕೆಂಬುದು ಮನಸ್ಸು ಬಯಸುತ್ತಿತ್ತು.

ಆದೆಷ್ಟೋ ದಿನಗಳಿಂದ ಅಟಲ್‌ದಾ ಮನೆಯಿಂದ ಹೊರಗೆ ಹೊರಡಲೇ ಇಲ್ಲ. ಸದಾ ಹೊರಗೇ ಅಲೆದಾಡುತ್ತಿದ್ದ ಯುವಕ ಒಮ್ಮೆಲೆ ಮನೆಯಲ್ಲೇ ಮುಂಕುಕವಿದಂತೆ ಕೂರಲಾರಂಭಿಸಿದರೆ ಏನೆಂದು ತಿಳಿಯುವುದು? ನಮ್ಮನ್ನು ಕಂಡಾಗ, ಹಿಂದಿನಂತೆ ಮಾತನಾಡದೆ ಮೌನ ತಾಳಿಬಿಡುತ್ತಿದ್ದರು.

"ಅಟಲ್‌ದಾ ನೀನು ಇಷ್ಟೊಂದು ಗಂಭೀರವಾಗಿದ್ದೀಯಲ್ಲ, ಯಾಕೆ?"

ನನ್ನ ಈ ಪ್ರಶ್ನೆಗೆ ಅವರು ಒಣನಗೆ ನಕ್ಕರು.

"ಯಾಕೆ? ನಿನಗೆ ಅಂಥಾದ್ದೇನು ಸಮಸ್ಯೆ?"

"ಸಮಸ್ಯೆ ಒಂದೇ? ನಾನು ಮಾಡುವಂಥಾ ಕೆಲಸ ಎಷ್ಟೊಂದಿದೆ. ಆದರೆ, ನನ್ನಿಂದೇನೂ ಆಗುತ್ತಿಲ್ಲ."

ಅಟಲ್‌ದಾರವರ ಮನಸ್ಸಿನಲ್ಲಿರುವ ವಿಷಯಗಳು ನಮಗೆ ಹೇಗೆ ಗೊತ್ತಾಗಬೇಕು? ಕುಂತಿದೇವಿಗೂ ಏನೂ ತಿಳಿದಿಲ್ಲವೆಂದು ಅಟಲ್‌ದಾ ಯೋಚಿಸಿರಬಹುದು. ಯಾರಿಗೂ ತಿಳಿಯದಂತೆ ಮತ್ತೆ ಮದುವೆ ಮಾಡಿಕೊಂಡು, ಎಲ್ಲಾದರೂ ದೂರ—ಅಪರಿಚಿತ ಸ್ಥಳಕ್ಕೆ ಹೋಗಿ ಒಂದು ನೌಕರಿ ಹಿಡಿದು ಹೊಸ ಹೆಂಡತಿಯೊಂದಿಗೆ ಸಂಸಾರ ಹೂಡಬಹುದಲ್ಲ....

ತಪ್ಪು ಮನುಷ್ಯನಿಂದ ಮಾತ್ರ ಸಾಧ್ಯ. ಆದರೆ ಅದು ಅಟಲ್‌ದಾರವರ ತಪ್ಪಾಗಿರದೆ, ಅವರ ಮೂರ್ಖತನವಾಗಿತ್ತು ಎಂದು ನನಗನ್ನಿಸುತ್ತದೆ. ತಾನು ಎಲ್ಲರಿಗಿಂತ ಹೆಚ್ಚು ಎಂಬ ಭಾವನೆ ಮೂರ್ಖತನವಲ್ಲದೆ ಮತ್ತೇನು?

ಒಂದೊಂದು ಬಾರಿ, ಅಟಲ್‌ದಾರವರನ್ನು ಅಷ್ಟು ಎತ್ತರಕ್ಕೆ ಏರಿಸಿದವರು ನಾವೇ ಎಂಬ ಯೋಚನೆಯೂ ಬರುತ್ತಿತ್ತು. ಅವರ ಬಗ್ಗೆ ಈಗ ಯೋಚಿಸಿದಾಗ ಅವಹೇಳನ ಮತ್ತು ಅನಾದರ ಜೀವನಕ್ಕೆ ಆರೋಗ್ಯಕರವೆಂದು ಅನ್ನಿಸುತ್ತದೆ. ಎಲ್ಲರ ದೃಷ್ಟಿಯಲ್ಲಿ ತಾವು ತಮ್ಮ ಬೆಲೆಯನ್ನು ಕಳೆದುಕೊಂಡು ಬಿಡುತ್ತೇವೆ ಎಂಬ ಭಯ

ದಿಂದಲೇ ಅಟಲ್‌ದಾ ಇಂಥಾ ಮೂರ್ಖತನವನ್ನು ಕೈಗೊಂಡಿದ್ದರು.

ಯಾವ ಪರಿವೆಯೂ ಇಲ್ಲದ ನಾವು ಅವರ ವಿವಾಹದಂದು ಬೀಗರಾಗಿ ಹೊರಟಿದ್ದೆವು.

ಅಧೀರ್‌ಬೋಸ್ ಮುಂದುವರೆಸಿದ—

"ಆಮೇಲಿನ ವಿಷಯ ನಿನಗೆ ತಿಳಿದೇ ಇದೆ. ಮಗ, ಇಷ್ಟು ಸುಲಭವಾಗಿ ಮದುವೆಗೆ ಒಪ್ಪಿಕೊಳ್ಳುತ್ತಾನೆಂದು ಅಶುಬಾಬುಗಳು ನಿರೀಕ್ಷಿಸಿರಲಿಲ್ಲ. ಸದಾ ಖಾದಿ ಧರಿಸುತ್ತಿದ್ದ ಅಟಲ್‌ದಾ ಅಂದು ರೇಶ್ಮೆ ಜುಬ್ಬ, ಜರಿ ಪಂಚೆ ಉಟ್ಟು ವರನಾಗಿ ಕಾರಿನಲ್ಲಿ ಕೂತು ವಿವಾಹ ಮಂಟಪಕ್ಕೆ ಹೊರಟರು.

ಅದುವರೆಗೆ ನಮ್ಮಲ್ಲಿ ಯಾರಿಗೂ ಯಾವುದೇ ರೀತಿಯ ಸಂದೇಹವುಂಟಾಗಿರಲಿಲ್ಲ. ಮದುವೆ ಮಾಡಿಕೊಳ್ಳುವಾಗ ಪ್ರತಿಯೊಬ್ಬ ಯುವಕನೂ ಇಷ್ಟೇ ವಿನಯಿಯಾಗುತ್ತಾನೆಂದು ನಾನು ತಿಳಿದಿದ್ದೆ.

ವಿವಾಹ, ಜೀವನದ ಒಂದು ಅವಿಸ್ಮರಣೆಯ ಅಧ್ಯಾಯ. ಬಹುಶಃ ಈ ಕಾರಣದಿಂದಲೇ ಲಜ್ಜೆ, ಸಂಕೋಚ ವರನನ್ನು ಸಹಿಷ್ಣು ವ್ಯಕ್ತಿಯನ್ನಾಗಿ ಮಾಡುತ್ತದೆಂದು ಯೋಚಿಸಿದ್ದೆ. ವರ, ವಿವಾಹದ ದಿನದಂದು ಯಾರು, ಏನು ಹೇಳಿದರೂ ಕೇಳುತ್ತಾನೆ. ನಂಬುತ್ತಾನೆ. ಸ್ವಾಮಿ ವಿವೇಕಾನಂದರ ಬ್ರಹ್ಮಚರ್ಯೆಯ ಬಗ್ಗೆ ಸದಾ ನಮಗೆಲ್ಲಾ ಉಪದೇಶ ಹೇಳುತ್ತಿದ್ದ ಇದೇ ಅಟಲ್ ದಾರವರನ್ನು ಅಂದು ನೋಡಿ ನಮ್ಮ ಬಾಯಿ ಕಟ್ಟಿಹೋಗಿತ್ತು. ಅಟಲ್ ದಾರವರೂ ಸಮಾಜದ ಓರ್ವ ವ್ಯಕ್ತಿ; ಮಹಾತ್ಮ ಗಾಂಧಿ, ಸಿ. ಆರ್. ದಾಸ್, ವಿದ್ಯಾಸಾಗರ್, ರಾಮಕೃಷ್ಣ ಪರಮಹಂಸರು – ಇವರೆಲ್ಲಾ ಗೃಹಸ್ಥಾಶ್ರಮಕ್ಕೆ ಕಾಲಿಟ್ಟವರು. ಹೀಗಿರುವಾಗ ಅಟಲ್ ದಾರವರು ಮದುವೆ ಮಾಡಿಕೊಂಡರೆ ನಾವೇಕೆ ನಿರಾಶರಾಗಬೇಕು? ಎಂದು ಯೋಚಿಸಿ ನಾನೂ ಸಂತೋಷಪಟ್ಟೆ.

ವರನ ವೇಷದಲ್ಲಿ ಕೂತಿದ್ದ ಅಟಲ್ ದಾರವರ ಮುಖದಲ್ಲಿ ನಿರಾಶೆ ಕವಿದಿತ್ತು. ಅವರ ಆ ಆತ್ಮವಿಶ್ವಾಸ ಎಲ್ಲಿ ಹೋಯಿತು?

ಅಟಲ್ ದಾರವರಿಗೆ ಈ ಮೊದಲೇ ಓರ್ವ ಹೆಂಡತಿ ಇರುವ ವಿಷಯ ನಮ್ಮ ಕಲ್ಪನೆಗೂ ಮೀರಿತ್ತು.

ಆದರೆ, ಇದೂ ಅವರ ಮೂರ್ಖತನವಾಗಿತ್ತೆ?

ಅಥವಾ ಅವರ ಬುದ್ಧಿ ವಿಕಲ್ಪಗೊಂಡಿತ್ತೆ?

ವಿವಾಹ ಮಂಟಪದ ಬಳಿಯೇ ನಾನೂ ನಿಂತಿದ್ದೆ. ಅಟಲ್ ದಾ ಬೆವರಿನಿಂದ ಒದ್ದೆಯಾಗಿದ್ದರು.

"ನೋಡು, ನನಗೊಂದು ಲೋಟ ನೀರು ಬೇಕು."

"ಅಟಲ್ ದಾ, ನಿನ್ನ ವಿವಾಹ, ಕಾರ್ಯಗಳು ಮುಗಿಯುವವರೆಗೂ ನೀನೇನೂ ತಿನ್ನಬಾರದು, ಕುಡಿಯಬಾರದು" ಎಂದಿದ್ದೆ.

"ತುಂಬಾ ಬಾಯಾರಿಕೆಯಾಗುತ್ತಿದೆ."

ನೀರು ತರಲು ಯಾರಿಗೆ ಹೇಳುವುದು? ಸುತ್ತ-ಮುತ್ತ ವಧುವಿನ ಕಡೆಯವರು ನಿಂತಿದ್ದರು. ಅವರಲ್ಲೇ ಒಬ್ಬರಿಗೆ ನೀರು ತರಲು ಹೇಳಿದೆ. ಅವರು ನೀರು ತಂದು ಕೊಟ್ಟರೋ, ಇಲ್ಲವೋ, ನನಗೆ ತಿಳಿಯಲಿಲ್ಲ. ಕಾರಣ, ಆಗಲೇ ನಮಗೆಲ್ಲಾ ಭೋಜನಕ್ಕೆ ಕರೆ ಬಂದಿತ್ತು. ನಾವು ಹೊರಟು ಹೋಗಿದ್ದೆವು.

ಈ ಕಡೆ ವಿವಾಹದ ವಿಧಿಗಳು ನಡೆಯುತ್ತಿತ್ತು; ಆ ಕಡೆ ನಾವು ಬಿಸಿ ಬಿಸಿ ಪೂರಿ,

ಲಾಡು-ಪೇಡಾ, ಪಲಾವ್ ಸವಿಯುವುದರಲ್ಲಿ ಮಗ್ನರಾಗಿದ್ದೆವು. ಅಕಸ್ಮಾತ್, ವಿವಾಹ ಮಂಟಪದ ಬಳಿಯಿಂದ ಗದ್ದಲ ಕೇಳಿಸಿತು. ನಾನೂ ತಡಬಡಿಸಿ, ಇತರರೊಂದಿಗೆ ಅಲ್ಲಿಗೆ ಓಡಿ ಹೋಗಿದ್ದೆ. ಅಲ್ಲಿಯ ದೃಶ್ಯ ಕಂಡು ಬೆರಗಾಗಿದ್ದೆ.

"ಆಮೇಲೆ?" ನಾನು ಅಧೀರನನ್ನು ಕುತೂಹಲದಿಂದ ಗಮನಿಸಿದೆ. "ನಂತರದ ಘಟನೆಗಳೆಲ್ಲಾ ನಿಮಗೆ ತಿಳಿದಿರಲೇ ಬೇಕು. ಎಷ್ಟೋ ದಿನಗಳ ನಂತರ ವಿಷಯ ಸ್ಪಷ್ಟ ವಾಯ್ತು."

ವಾಸ್ತವವಾಗಿ, ಆ ಘಟನೆಯ ನಂತರವೇ ಅಟಲ್ ದಾ ಈ ಹಿಂದಿನ ಅಟಲ್ ದಾರವರಾಗಿ ಉಳಿದಿರಲಿಲ್ಲ. ಅವರ ಜೀವನ ಸೂರ್ಯಾಸ್ತದೆಡೆಗೆ ಸಾಗಿ ಬಿಟ್ಟಿತ್ತು. ಇಂದು–ಇಷ್ಟು ದಿನಗಳ ನಂತರ ಅವರ ಅಧಃಪತನಕ್ಕೆ ಕಾರಣ ತಿಳಿಯಿತು.

ವಿವಾಹದ ಆ ರಾತ್ರಿ ಅಟಲ್ ದಾರವರಿಗೆ ಯಾವ ಭಯವಿತ್ತೋ ಅದೇ ಸಂಭವಿಸಿತು. ಅಟಲ್ ದಾರವರ ವಿವಾಹವಂತೂ ಮುಗಿದಿತ್ತು. ಅನಂತರದ ವಿಷಯಗಳು ನನಗೆ ತಿಳಿಯಲಿಲ್ಲ. ಅವರು ರಾಂಚಿಗೆ ಹೊರಟು ಹೋಗಿದ್ದಾರೆಂದುಕೊಂಡಿದ್ದೆ. ಆದರೆ ಆಗ ಅವರು ಭವಾನೀಪುರದಲ್ಲಿ ಕುಂತಿಯ ಮನೆಯಲ್ಲಿದ್ದ ವಿಷಯ ನಮ್ಮಿಂದ ಯೋಚಿಸಲೂ ಸಾಧ್ಯವಿರಲಿಲ್ಲ.

ಹಿಂದೊಮ್ಮೆ ಅಟಲ್ ದಾರವರು ರಾಂಚಿಯಿಂದ ಹೀಗೆ, ನನಗೆ ಪತ್ರ ಬರೆದಿದ್ದರು – 'ನಮ್ಮ ರೀತಿ-ರಿವಾಜುಗಳು ಓರೆಕೋರೆಯಾಗಿ ಬಿಟ್ಟಿವೆ. ಅದನ್ನು ಸರಿಪಡಿಸಬೇಕು. ನೀನು ಮನುಷ್ಯನಾಗಲು ಪ್ರಯತ್ನಿಸು. ನಮ್ಮ ಮಾತು ಮತ್ತು ಕೃತಿಯಲ್ಲಿ ಒಮ್ಮತವಿರಬೇಕು. ಜನತೆಯಲ್ಲಿ ನಾವು ಏಕತೆಯನ್ನು ಬೆಳೆಸಬೇಕು. ಒಗ್ಗಟ್ಟಿನಲ್ಲಿ ಬಲವಿದೆ. ನಾನು ಮರಳಿ ಬಂದಾಗ ಕ್ಲಬ್‌ನ ಹುಡುಗರಿಗೆ ಈ ಬಗ್ಗೆ ತಿಳುವಳಿಕೆ ಹೇಳುವೆ. ಶಿಕ್ಷಣ, ಸಾರ್ಥಕವಾಗದಿದ್ದರೆ, ಬದುಕು ವ್ಯರ್ಥ.

ಈಗ ಅನ್ನಿಸುತ್ತಿದೆ....ಈ ಪತ್ರ ಬರೆದವರು ಯಾರು? ಕುಂತಿಯನ್ನು ಮದುವೆಯಾಗಿ ಮಾನಸಿಕ ತೊಳಲಾಟದಿಂದ ವಿಕ್ಷುಪ್ತಗೊಂಡು ಸ್ವರ್ಗ, ನರಕ ಮತ್ತು ಪಾತಾಳ ಲೋಕವನ್ನು ಸುತ್ತುತ್ತಿದ್ದ ಅಟಲ್ ದಾರವರೇ? ಅಥವಾ ಬದಾಮತಲ್ಲೆಯ ಆದರ್ಶ ವಿದ್ಯಾರ್ಥಿಯಾಗಿದ್ದ ಅಟಲ್ ದಾರವರೇ?....ಒಬ್ಬ ವ್ಯಕ್ತಿಯಲ್ಲೇ ಪರಸ್ಪರ ವಿರೋಧ ಗುಣಗಳ ಸಮಾವೇಶ ಹೇಗೆ?

ಆದರೆ, ಈ ಹಿಂದೆ ಅಟಲ್ ದಾರವರಿಂದ ಆದ ತಪ್ಪಿಗೆ ಇಷ್ಟು ದಿನಗಳ ನಂತರವೂ ಪ್ರಾಯಶ್ಚಿತ್ತವಾಗಿರಲಿಲ್ಲವೇ? ಇದನ್ನು ತಪ್ಪೆಂದು ಹೇಳುವುದಾದರೂ ಯಾಕೆ? ಮಂಗಳ್ ಸರ್ಕಾರ್ ಉರುಫ್ ಬ್ರೋಜೆಸ್ ರವರ ಆದರ್ಶಗಳು ಎಲ್ಲಿ ಹೋದವು? ಬಾರಿಸಾಲ್‌ನ ಬ್ರಿಟಿಷ್ ಅಧಿಕಾರಿಯ ಮೇಲೆ ಯಾರು ಬಾಂಬ್ ಎಸೆದಿದ್ದರೋ, ಯಾರನ್ನು ಹಿಡಿಯಲೋಸುಗ ಪೋಲೀಸ್ ಇಲಾಖೆಯು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಘೋಷಿಸಿತ್ತೋ, ಅವರ ಸಂಪೂರ್ಣ ಜವಾಬ್ದಾರಿಯನ್ನು ಅಟಲ್ ದಾ ತಮ್ಮ ಹೆಗಲ ಮೇಲೆ ಹೊತ್ತುಕೊಂಡಿದ್ದು ಯಾಕೆ? ಅದನ್ನು ಒಪ್ಪಿಕೊಂಡಮೇಲೆ ಅದನ್ನೇಕೆ ಅವರು ನಿರ್ವಹಿಸಲಿಲ್ಲ? ಅಟಲ್ ದಾ ಮಹಾನ್ ವ್ಯಕ್ತಿ

ಯಾಗಲು ಯಾಕೆ ಬಯಸಿದ್ದು? ಎಲ್ಲರ ಶ್ರದ್ಧಾ-ಭಕ್ತಿಗೆ ಪಾತ್ರರಾಗಲು ಅವರು ಅಷ್ಟು ಆತುರವನ್ನು ತೋರಿಸಿದ್ದು ಯಾಕೆ? ಮಾನವರ ಸೇವೆಯಲ್ಲಿ ಅವರು ತಮ್ಮ ಅಹಂಕಾರವನ್ನು ಯಾಕೆ ಮರೆಯದಾದರು?

ಅಧೀರ ಬೋಸ್‌ನ ಬಾಯಿಂದ ಅಟಲ್ ದಾರವರ ಕಥೆಯನ್ನು ಕೇಳಿ ನಾನು ದಿಗ್‌ಭ್ರಾಂತನಾಗಿದ್ದೆ. ಇದುವರೆಗೆ ನಾನು ತಿಳಿದುಕೊಂಡಿದ್ದೆಲ್ಲವೂ ವ್ಯರ್ಥವಾಗಿತ್ತು.

ಅಂದೇ ಸಂಜೆ ನಾನು ಇಂದುಲೇಖಾ ದೇವಿಯ ಮನೆಗೆ ಹೋದೆ. ಏನಾದ ರಾಗಲಿ! ಅವಳನ್ನು ವಿಚಾರಿಸಲೇಬೇಕೆಂದು ಕೊಂಡೆ.

ಇಂದು ಲೇಖಾದೇವಿ ತನ್ನ ಬಾಡಿಗೆ ಮನೆಯ ಪಡಸಾಲೆಯಲ್ಲಿ ಅನೇಕ ವಿದ್ಯಾರ್ಥಿ ಗಳಿಗೆ ಪಾಠ ಬೋಧಿಸುತ್ತಿದ್ದಳು. ನನ್ನನ್ನು ಕಂಡೊಡನೆಯೇ ಎದ್ದು ಬಂದು ನಮ್ರತೆ ಯಿಂದ ಕೈ ಜೋಡಿಸಿದಳು.

"ನೀವು? ನನ್ನಿಂದ ಏನಾದರೂ ಕೆಲಸ ವಾಗಬೇಕಿತ್ತೆ?"

"ಹೌದು. ನಿಮ್ಮ ಹತ್ರ ಸ್ವಲ್ಪ ಮಾತಾಡಬೇಕಿತ್ತು."

"ಆಗಲಿ. ನೀವು ಪಕ್ಕದ ಕೋಣೆಯಲ್ಲಿ ಕೂರಿ."

ಇಂದು ಲೇಖಾದೇವಿ ನನ್ನನ್ನು ಕೋಣೆಗೆ ಕರೆತಂದಳು. ಮನೆಯ ಓರಣ ಕಂಡು ಅವಳ ಆಸಕ್ತಿಯನ್ನು ಮನಸ್ಸಿನಲ್ಲೇ ಪ್ರಶಂಸಿಸಿದೆ. ನನಗೆ ಒಂದು ಕುರ್ಚಿಯನ್ನು ತೋರಿಸಿ, ಅವಳು ನಿಂತುಕೊಂಡಳು.

ಮಾತನ್ನು ಹೇಗೆ ಪ್ರಾರಂಭಿಸುವುದು? ನನಗೆ ಹೊಳೆಯಲೇ ಇಲ್ಲ. ಜನರು, ಇವಳಲ್ಲಿ ಎಷ್ಟೊಂದು ಶ್ರದ್ಧೆ ಇಟ್ಟಿದ್ದಾರೆ! ಭುವನ್ ಬಾಬುಗಳಂತೂ ಇವಳನ್ನು ದೇವತೆಯೆಂದೇ ತಿಳಿದಿದ್ದಾರಲ್ಲ!

"ನಾನು ಬಹೂ-ಬಜಾರಿಗೆ ಅಟಲ್ ದಾ ರವರನ್ನು ಭೇಟಿಯಾಗಲು ಹೋಗಿದ್ದೆ" ಅಕಸ್ಮಾತ್ ಹೇಳಿಬಿಟ್ಟೆ.

"ಅವರು ಹೇಗಿದ್ದಾರೆ?" ಇಂದುಲೇಖಾ ದೇವಿ ಶಾಂತಳಾಗಿಯೇ ಪ್ರಶ್ನಿಸಿದಳು. ಅವಳ ಮುಖದಲ್ಲಿ ಗಾಬರಿಯ ಭಾವನೆಗಳು ಕಾಣಿಸಲಿಲ್ಲ.

"ಅವರ ಆರೋಗ್ಯ ಸರಿಯಿಲ್ಲ."

"ಆದರೆ, ಈಚಿಗೆ ಅವರು ಚೆನ್ನಾಗಿದ್ದಾರೆ ಅಂತ ಕೇಳಿದೆ."

"ಅವರನ್ನು ಬದುಕಿಸಲು ನೀವೇಕೆ ಇಷ್ಟ ಪಡ್ತಿಲ್ಲ" ನಾನು ನೇರವಾಗಿಯೇ ಪ್ರಶ್ನಿಸಿದೆ.

"ಅಂದ್ರೆ?" ಈಗ ಇಂದುಲೇಖಾದೇವಿಗೆ ಆಶ್ಚರ್ಯವಾಯಿತು.

"ನೀವು ಅಟಲ್ ದಾರವರನ್ನು ಜೀವಂತ ವಾಗಿಡಲು ಬಯಸ್ತೀರೋ ಅಥವಾ ಮುಗಿಸಿ ಬಿಡಲು ಬಯಸ್ತಿದ್ದೀರೋ?"

"ನಿಮ್ಮ ಮಾತು ನನಗರ್ಥವಾಗಲಿಲ್ಲ." ಸ್ವಲ್ಪ ತಡೆದು ಇಂದುಲೇಖಾದೇವಿ ನನ್ನನ್ನೇ ನೋಡಿದಳು.

"ಪೆಂಡ್ರಾ ರೋಡಿನ ಸ್ಯಾನಿಟೋರಿಯಂ ನಲ್ಲಿ ಅಟಲ್ ದಾರವರು ಗುಣಮುಖವಾಗು ತ್ತಿದ್ದ ಸಮಾಚಾರ ಕೇಳಿದೊಡನೆಯೇ ನೀವು ಆ ಕೂಡಲೇ ಅಲ್ಲಿಗೆ ಹಣ ಕಳಿಸುವು ದನ್ನು ನಿಲ್ಲಿಸಿದ್ದು ಯಾಕೆ? ಅವರನ್ನು ಮತ್ತೆ ಕಲ್ಕತ್ತೆಗೆ ಕರೆಸಿದ್ದು ಯಾಕೆ? ಕಲ್ಕತ್ತೆಯಲ್ಲಿ ಎಷ್ಟೊಂದು ಉತ್ತಮ ಬಡಾವಣೆಗಳಿರುವಾಗ ನೀವು ಅವರನ್ನು ಬಹು-ಬಜಾರಿನ ಆ ಉಸಿರುಕಟ್ಟಿಸುವ ಮನೆಯಲ್ಲಿಟ್ಟಿದ್ದು ಯಾಕೆ?"

ಬಹುಶಃ ಇಂದುಲೇಖಾದೇವಿ ನನ್ನಿಂದ ಇಷ್ಟೆಲ್ಲಾ ಪ್ರಶ್ನೆಗಳನ್ನು ನಿರೀಕ್ಷಿಸಿರಲಿಲ್ಲ.

"ಹೇಳಿ, ನನ್ನ ಪ್ರಶ್ನೆಗಳಿಗೆ ಉತ್ತರಿಸಿ!" ಇಂದುಲೇಖಾದೇವಿ ಕಲ್ಲಿನ ವಿಗ್ರಹದಂತೆ ನಿಂತಿದ್ದಳು.

"ಈ ವಿಷಯಗಳನ್ನೆಲ್ಲಾ ನಿಮಗ್ಯಾರು ಹೇಳಿದ್ದು?" ಸ್ವಲ್ಪ ತಡೆದು ಅವಳು ನನ್ನನ್ನೇ ಪ್ರಶ್ನಿಸಿದಳು.

"ಯಾರಾದರೂ ಹೇಳಲಿ. ನಾನು ಹೇಳಿದ್ದು ಸುಳ್ಳೋ ಅಥವಾ ನಿಜವೋ ಎಂಬುದನ್ನು ನೀವು ಹೇಳಲೇಬೇಕು. ನನ್ನ ಪತಿಗಾಗಿ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇನೆ–ರೋಗಿ ಪತಿಗಾಗಿ ಹಗಲಿಡೀ ದುಡಿಯುತ್ತಿದ್ದೇನೆ ಎಂದು ನೀವು ಜನರಿಗೆ ಮನವರಿಕೆ ಮಾಡುತ್ತಿದ್ದೀರಿ. ಆದರೆ ನೀವು ಕಪಟವನ್ನು ಮಾಡುತ್ತಿದ್ದೀರ, ಯಾಕೆ? ಹೀಗೆ ಮಾಡುವುದರಿಂದ ಯಾರಿಗೆ ಒಳ್ಳೆಯದಾಗುವುದು? ನಿಮಗೋ ಅಥವಾ ಅಟಲ್‌ದಾರವರಿಗೋ....?"

ಇಂದುಲೇಖಾದೇವಿ ಉತ್ತರಿಸಲಿಲ್ಲ.

"ನೀವು ಮಾತಾಡಿ, ಉತ್ತರ ಕೊಡಿ. ನಿಮ್ಮಿಂದ ಉತ್ತರ ಸಿಗದಿದ್ದರೆ, ನಾನಿಲ್ಲಿಂದ ಹೋಗುವುದಿಲ್ಲ. ಎಲ್ಲರ ಕಣ್ಣಿಗೆ ನೀವು ದೇವರಾಗಿದ್ದೀರ, ಇದರ ನಿಜವಾದ ಉದ್ದೇಶವೇನು, ಹೇಳಿ!"

"ನಿಮಗೆ ಎಲ್ಲಾ ಸಮಾಚಾರವೂ ಗೊತ್ತಾ?" ಇಂದುಲೇಖಾದೇವಿ ತನ್ನ ಕಣ್ಣುಗಳನ್ನು ತಗ್ಗಿಸಿದಳು.

"ಹೂಂ, ಗೊತ್ತಿದೆ. ಅದನ್ನೆಲ್ಲಾ ನಂಬಿಯೂ ಇದ್ದೇನೆ. ಈಗ ಅವನ್ನೆಲ್ಲಾ ದೃಢಪಡಿಸಿಕೊಳ್ಳುವುದಕ್ಕಾಗಿಯೇ ನಾನಿಲ್ಲಿಗೆ ಬರಬೇಕಾಯಿತು. ಕಾರಣ, ಅಟಲ್‌ದಾ ನನ್ನ ಗುರುಗಳ ಸಮಾನ."

"ಗುರು?"

"ಹೌದು! ನಿಮಗೆ ಈ ಬಗ್ಗೆ ಹೇಳಿರಲಿಲ್ಲ. ನೀವು ಇಷ್ಟು ನಿಷ್ಠುರರಾಗಲು ಕಾರಣವೇನು, ಹೇಳಿ? ನೀವು ಅಟಲ್‌ದಾರವರನ್ನು ತಮಾಷೆಯ ವಸ್ತುವನ್ನಾಗಿ ಮಾಡಿದ್ದು ಯಾಕೆ?"

"ಇದನ್ನು ಹೇಳೋದಕ್ಕೇ ನೀವು ಇಲ್ಲಿಗೆ ಬಂದಿದ್ದಾ?" ಇಂದುಲೇಖಾದೇವಿ ಉಕ್ಕಿ ಬರುತ್ತಿದ್ದ ತನ್ನ ಕಣ್ಣೀರನ್ನು ಸೀರೆಯ ಸೆರಗಿನಿಂದ ಒರೆಸಿಕೊಂಡಳು.

"ಹೌದು!"

"ಹಾಗಾದರೆ ಕೇಳಿ—ನನ್ನ ಗಂಡನ ಒಳಿತು-ಕೆಡಕುಗಳ ವಿಚಾರ ನನಗೆ ಸೇರಿದ್ದು ನಾನು ಬೇಕಾದುದನ್ನು ಮಾಡ್ತೀನಿ. ಈ ಬಗ್ಗೆ ಹೇಳಲು ಯಾರಿಗೂ ಹಕ್ಕಿಲ್ಲ ನನ್ನ ಗಂಡನ ಒಳಿತು-ಕೆಡಕು ಎರಡೂ ನನ್ನ ಕೈಯಲ್ಲಿದೆ. ಇದರಿಂದ ನಿಮಗೇನಾಗಬೇಕು?"

ಇಂದುಲೇಖಾದೇವಿಯಂಥಾ ಶಾಂತ ಸ್ವಭಾವದ ಹೆಣ್ಣಿನ ಬಾಯಿಂದ ಈ ಮಾತು ಕೇಳಿದಂಗಾದೆ.

"ನನ್ನ ತಂದೆಗೆ ದ್ರೋಹ ಬಗೆದು ನನ್ನ ಮದುವೆಯಾಗಿ ನನ್ನ ಸರ್ವನಾಶಗೈದ ನನ್ನ ಪತಿಯನ್ನು ಅಂದು, ನೀವು ಹೀಗೆ ಪ್ರಶ್ನಿಸಿದ್ದಿರಾ? ನನ್ನ ವಿರುದ್ಧ ಸಂಚು ಹೂಡಿದ ಅವರ ಮನೆಗೆ ಹೋಗಿ ನೀವು ಅವರನ್ನು ಧಿಕ್ಕರಿಸಲಿಲ್ಲ! ಈಗ, ನೀವು ನನ್ನಿಂದ ಯಾಕೆ ಉತ್ತರ ಕೇಳುತ್ತಿದ್ದೀರ! ಹೋಗಿ! ನೀವಿಲ್ಲಿಂದ ಹೊರಟು ಹೋಗಿ...."

ಇಂದುಲೇಖಾದೇವಿಯ ಮಾತುಗಳಿಂದ ನಾನು ಆಶ್ಚರ್ಯಗೊಂಡೆ.

"ನನ್ನ ತಂದೆಯ ಐಶ್ವರ್ಯಕ್ಕೆ ನಾನು ಉತ್ತರಾಧಿಕಾರಿಯಾಗಿದ್ದೆ. ಸಂಬಂಧಿಕರು ದೋಚಿಕೊಂಡು ಹೋದ ಮೇಲೆ ಅಳಿದುಳಿದ ಹಣದಿಂದ ನನ್ನ ಗಂಡನ ಚಿಕಿತ್ಸೆ ಮಾಡಿಸಿದೆ —ಅವರು ಗುಣಮುಖರಾಗಲೆಂದೇ? ನನ್ನನ್ನು ಸಂಪೂರ್ಣವಾಗಿ ನಾಶಮಾಡಿದವರ ಹಿತವನ್ನು ನಾನು ಇಷ್ಟಪಡ್ತೀನಿ ಅಂತ ನೀವು ಯೋಚಿಸಿದ್ದಾದರೂ ಹೇಗೆ?"

"ಇದಕ್ಕಿಂತ, ನೀವು ಅವರನ್ನು ಕೊಂದಿದ್ದರೇ ಚೆನ್ನಾಗಿತ್ತು" ಅಕಸ್ಮಾತ್ ಹೇಳಿಬಿಟ್ಟೆ.

"ಹೀಗೆ ಮಾಡಿದ್ದರೆ ಸೇಡು ತೀರಿಸಿಕೊಂಡಾಂತಾಗುತ್ತಿರಲಿಲ್ಲ. ಅವರೇನಾದರೂ ಸತ್ತುಬಿಟ್ಟರೆ ಅವರು ಮಾಡಿದ ಅಪರಾಧಕ್ಕೆ ಶಿಕ್ಷೆ ಹೇಗೆ ಸಿಗುತ್ತಿತ್ತು?"

"ಹಾಗಾದ್ರೆ, ಅವರನ್ನು ಉಳಿಸಿಕೊಳ್ಳಿ" ಇಂದುಲೇಖಾದೇವಿಯ ಮಾತುಗಳು ನನಗೆ ಅರ್ಥವಾಗಲಿಲ್ಲ.

"ಎಲ್ಲಾ ಒಂದೇ ಆಯ್ತಲ್ಲ!....ಅವರು ಹೀಗೇ ಸಾಯದ, ಬದುಕದ ಸ್ಥಿತಿಯಲ್ಲಿರಬೇಕೆಂಬುದೇ ನನ್ನಾಸೆ. ಒಂದು ಹೆಣ್ಣಿನ ಸರ್ವನಾಶ ಮಾಡಿದರೆ ಅಷ್ಟು ಸುಲಭವಾಗಿ ಬಿಡುಗಡೆ ಸಾಧ್ಯವಿಲ್ಲವೆಂಬ ವಿಷಯ ಆ ವ್ಯಕ್ತಿಗೆ ಮನದಟ್ಟಾಗಬೇಕು. ಜಗತ್ತಿನಲ್ಲಿರುವ ಹೆಣ್ಣುಗಳೆಲ್ಲರೂ ನಿಸ್ಸಹಾಯಕರಲ್ಲ, ಮೂರ್ಖರಲ್ಲ ಎಂಬ ವಿಷಯ ಅವರಿಗೆ ತಿಳಿಯಬೇಕು. ಹೆಣ್ಣಿಗೂ ಆತ್ಮಾಭಿಮಾನ, ಸ್ವಾಭಿಮಾನವಿರುತ್ತೆ, ಅವಳಿಗೂ ಜೀವವಿದೆ ಎಂಬುದು ನಿಮ್ಮ ಗುರುಗಳಿಗೆ ಅರ್ಥವಾಗಬೇಕು..." ಇಂದುಲೇಖಾದೇವಿ ಸ್ವಲ್ಪ ಸುಧಾರಿಸಿಕೊಂಡು ಮತ್ತೆ ಹೇಳಿದಳು, "ಈಗ ತುಂಬಾ ರಾತ್ರಿಯಾಯ್ತು. ನೀವು ಮನೆಗೆ ಹೋಗಿ. ಈ ಪಾಪಕಾರ್ಯಕ್ಕೆ ಯಾವುದೇ 'ವಿವರಣೆ' ಇಲ್ಲ, ಯಾವುದೇ 'ಪ್ರಾಯಶ್ಚಿತ್ತ'ವೂ ಇಲ್ಲ."

ಇನ್ನೂ ಕೂರಲು ನನ್ನಿಂದ ಸಾಧ್ಯವಾಗಲಿಲ್ಲ. ಕಿಂಕರ್ತವ್ಯವಿಮೂಢನಾಗಿ ಇಂದುಲೇಖಾದೇವಿಯ ಮನೆಯಿಂದ ಹೊರಟು ಬಂದಿದ್ದೆ. ಅವಳ ವಂಚನೆಯನ್ನು ಬಹಿರಂಗಗೊಳಿಸಬೇಕೆಂದು ಯೋಚಿಸಿದ್ದೆ. ಆದರೆ, ಆ ಕೂಡಲೇ ನಾನು ಮೂರು ವರ್ಷಗಳ ಕಾಲ ಕಲ್ಕತ್ತೆಯಿಂದ ಹೊರ ಹೋಗಬೇಕಾಯಿತು. ಭುವನ್‌ಬಾಬುಗಳಿಗೆ ಹೇಳಿ ಹೋಗುವಷ್ಟು ಸಮಯಕಾಶ ನನಗೆ ಸಿಕ್ಕಿರಲಿಲ್ಲ. ಇಡೀ ರಾಜಸ್ಥಾನವನ್ನು ಸುತ್ತುಹಾಕುವಂಥಾ ನೌಕರಿ ನನ್ನದಾಗಿತ್ತು. ಈ ಪ್ರಸಂಗ ಇಲ್ಲಿ ಅನಗತ್ಯ.

ಹೀಗೇ ಅದೊಂದು ದಿನ ಭುವನ್‌ಬಾಬುಗಳಿಗೆ ಪತ್ರ ಬರೆದು ಒಂದು ಆಶ್ಚರ್ಯಕರವಾದ, ವಿಚಿತ್ರ ಉತ್ತರವನ್ನು ಪಡೆದೆ.

'ಭುವನ್‌ಬಾಬುಗಳು ಪತ್ರದಲ್ಲಿ ಬರೆದಿದ್ದರು—ನಮ್ಮ ಶಾಲೆಯ ಉಪಾಧ್ಯಾಯನಿಯಾಗಿದ್ದ ಇಂದುಲೇಖಾದೇವಿ ಅಕಸ್ಮಾತ್ ಆತ್ಮಹತ್ಯೆ ಮಾಡಿಕೊಂಡು ನಮ್ಮನ್ನೆಲ್ಲಾ ದುಃಖಾಂಬುಧಿಯಲ್ಲಿ ಬಿಟ್ಟುಹೋಗಿದ್ದಾಳೆ. ಈ ವಿಷಯ ತಿಳಿದು ನಿಮಗೂ ದುಃಖವಾಗಬಹುದು. ಅವಳು ಯಾಕೆ ಆತ್ಮಹತ್ಯೆಮಾಡಿಕೊಂಡರೋ, ತಿಳಿಯದು. ಅಷ್ಟು ಉತ್ತಮ ಉಪಾಧ್ಯಾಯನಿ ಸಿಗುವುದು ದುರ್ಲಭವೇ ಸರಿ. ಪೋಲೀಸರಿಗೆ ಆತ್ಮಹತ್ಯೆಯ ಕಾರಣ ತಿಳಿಯಲು ಸಾಧ್ಯವಾಗಲಿಲ್ಲ. ಅವಳ ಸಾವಿಗೆ ಶಾಲೆಯಲ್ಲಿ ಅತೀವ ಸಂತಾಪವನ್ನು ಆಚರಿಸ

ಲಾಯಿತು. ಅವಳಷ್ಟು ಪತಿವ್ರತೆ ಇಂದು ಅಪರೂಪವೆಂಬುದು ಎಲ್ಲರ ಅನಿಸಿಕೆ ಯಾಗಿತ್ತು. ಶಾಲೆಯಲ್ಲಿ ಅವಳ ತೈಲ ಚಿತ್ರ ವನ್ನು ಹಾಕಬೇಕೆಂಬ ಪ್ರಸ್ತಾಪವನ್ನು ನಾನು ಶಾಲೆಯ ಸಮಿತಿ ಸಭೆಯಲ್ಲಿಟ್ಟು ಪಾಸು ಮಾಡಿಸಿದ್ದೇನೆ. ಈ ವಿಷಯ ಕೇಳಿ ನಿಮಗೂ ಸಂತೋಷವಾಗುತ್ತದೆಂದು ಆಶಿಸುವೆ.'

ನಂತರ ನಾನು, ಭುವನಬಾಬುಗಳಿಗೆ ಮತ್ತು ಅಧೀರ ಬೋಸನಿಗೆ ಪ್ರತ್ಯೇಕ ಪತ್ರಗಳನ್ನು ಬರೆದು 'ಅಟಲ್‌ದಾರವರ ಸುದ್ದಿ ತಿಳಿದು ಬರೆಯಿರಿ' ಎಂದು ವಿನಂತಿಸಿಕೊಂಡಿದ್ದೆ. ಆದರೆ ಅನೇಕ ದಿನಗಳೇ ಕಳೆದವು, ಯಾರಿಂದಲೂ ಪತ್ರ ಬರಲಿಲ್ಲ.

ಅಟಲ್‌ದಾರವರು ಈಗ ಈ ಪ್ರಪಂಚ ದಲ್ಲಿ ಇರಲಿಕ್ಕಿಲ್ಲ. ಕುಂತಿದೇವಿಯೂ ಇರಲಿ ಕ್ಕಿಲ್ಲ. ಆದರೆ, ಇಂದು, ಜಗತ್ತಿನ ಯಾವ ಮೂಲೆಯಲ್ಲಾದರೂ ಅವರ ಅಸ್ತಿತ್ವ ವಿದ್ದರೆ, ಒಂದು ಕ್ಷಣಕ್ಕಾದರೂ ಅಟಲ್ ದಾರವರಿಗೆ ಶಾಂತಿ ಸಿಗಲೆಂದು ಪ್ರಾರ್ಥಿಸು ತ್ತೇನೆ.

ಯಶಸ್ಸು, ಕೀರ್ತಿ ಎಲ್ಲರಿಗೂ ದುರ್ಲಭ. 'ಅರ್ಥ'ವೂ ದುರ್ಲಭ. ಸಿಕ್ಕರೂ, ಎಲ್ಲರೂ ಜೀವನದಲ್ಲಿ ಅದರ ಉಪಯೋಗ ಪಡೆಯು ಲಾರರು; ಆದರೆ ಎಲ್ಲಕ್ಕಿಂತ 'ಶಾಂತಿ, ಎಂಬುದು ಜೀವನದಲ್ಲಿ ಅತ್ಯಮೂಲ್ಯ ವಾದದ್ದು. ಅಟಲ್‌ದಾ ಈ ಶಾಂತಿಯನ್ನು ಬಯಸಿರಲಿಲ್ಲವೆಂಬುದು ನನಗೆ ಗೊತ್ತಿದೆ.

ಅಟಲ್‌ದಾ ಮತ್ತು ಇಂದುಲೇಖಾ ದೇವಿಯ ಈ ಕಥೆ ಪ್ರೇಮದ ಕಥೆಯೋ ಅಥವಾ ಸೇಡಿನ ಕಥೆಯೋ ಅಥವಾ ವಿಧಿಯ ನಿಷ್ಠುರ ವ್ಯಂಗ್ಯವೋ, ಇಂದಿಗೂ ನನಗೆ ಅರ್ಥವಾಗುತ್ತಿಲ್ಲ, ಕಥೆ ಘಟಿಸಿದಂತೆಯೇ ಬರೆದುಬಿಟ್ಟೆ. ಈ ಕಥೆ ಓದಿದ ಮೇಲೆ, ಈ ಕಥೆಯೊಳಗಡಗಿರುವ ತಥ್ಯವನ್ನು ಹುಡುಕಿ. ನಿಮಗೆ ಸಂತೋಷ ಅಥವಾ ದುಃಖ– ದುಮ್ಮಾನ ಏನಾದರೂ ಆಗಲಿ—ನಾನು ಇದಕ್ಕೆ ನನ್ನನ್ನು ಕೃತಾರ್ಥನೆಂದು ತಿಳಿಯುವೆ.

—ಮುಗಿಯಿತು

ಮಳೆಯ ನೀರು ಮೊದಲು ಪರ್ವತದ ಶಿಖರಗಳ ಮೇಲೆ ಬೀಳುತ್ತದೆ. ಅಲ್ಲಿಂದ ಬೆಟ್ಟ, ಬಯಲು, ಊರು, ಕೇರಿಗಳಲ್ಲಿ ಹರಿದು ಬಂದು ನದಿಯಾಗಿ ಸಮುದ್ರ ಸೇರುತ್ತದೆ. ಅದರಂತೆಯೇ ಉತ್ತಮ ಯೋಚನೆಗಳು ವಿಚಾರಶೀಲರ ತಲೆಯಲ್ಲಿ ಮೊದಲು ಹೊಳೆಯುತ್ತವೆ. ನಂತರ ಅವರಿವರ ವಿಚಾರದಲ್ಲಿ ಹರಿದು ಕೊನೆಗೆ ಗುಂ ಪುಮುಟ್ಟುತ್ತವೆ.

—ಎಮರ್ಸನ್

ಪುಸ್ತಕ ಪರಿಚಯ

ಶ್ರೀನಿವಾಸ ರಾಮಾನುಜನ್—ಮೂಲ : ಸುರೇಶ್‌ರಾಮ್; ಅನುವಾದ : ಟಿ. ಶ್ರೀವೆಂಕಟರಮಣ, ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ, ಪುಟ: ೮೬, ಬೆಲೆ : ೨೧ ರೂ.

"ಮನಸ್ಪರ್ಶಿಯಾಗದ 'ಶ್ರೀನಿವಾಸ ರಾಮಾನುಜನ್'"

'ಯಾವುದಾದರೂ ಕೃತಿಯನ್ನು ಓದಿದಾಗ ಅದು ನಮ್ಮನ್ನು ಭೌತಿಕವಾಗಿ ಪ್ರಭಾವಿಸಿದರೆ, ಅದು ಒಳ್ಳೆಯ ಕಾವ್ಯ' ಎಂಬ ಅಭಿಪ್ರಾಯವನ್ನು ಎ. ಇ. ಹೌಸ್‌ಮನ್ ಮತ್ತು ಎಮಿಲಿಡಿಕಿನ್‌ಸನ್ ವ್ಯಕ್ತಪಡಿಸಿದ್ದಾರೆ. ಇದು ಸಾಹಿತ್ಯದ ಇತರೆ ಪ್ರಕಾರಗಳಿಗೂ ಅನ್ವಯಿಸುತ್ತದೆ. ಹೌದು, ಒಂದು ಕೃತಿಯನ್ನು ಓದಿದಾಗ ಅದು ಒಂದು ಉದ್ಗಾರವನ್ನೋ ಅಥವಾ ಒಂದೆರಡು ತೊಟ್ಟು ಕಣ್ಣೀರನ್ನೋ ಸಹೃದಯ ಓದುಗರಲ್ಲಿ ಹೊರಡಿಸಿದರೆ, ಅದು ಅಷ್ಟರಮಟ್ಟಿಗೆ ಯಶಸ್ವಿ ಕೃತಿ. ಅದರಲ್ಲೂ ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯನ್ನು ಓದಿದಾಗ ಇದು ಅಪೇಕ್ಷಣೀಯ. ಇಷ್ಟಕ್ಕೂ ಒಬ್ಬ ವ್ಯಕ್ತಿಯ ಜೀವನ ಚರಿತ್ರೆ ರಚನೆಯಾಗುತ್ತದೆ ಏಕೆ? ಆತನಲ್ಲಿ ಬೇರೆಯವರಲ್ಲಿ ಇಲ್ಲದ್ದು ಏನೋ ವಿಶೇಷವಿದೆ ಎಂದು ತಾನೆ. ಅದು ಸಾಧನೆಯ ರೂಪದಲ್ಲಿರಬಹುದು ಅಥವಾ ಬದುಕಿನ ರೀತಿಯಲ್ಲಿರಬಹುದು. ಆ 'ವಿಶೇಷ'ವನ್ನ ಹೊರಗೆಡಹಿ ನಮ್ಮನ್ನು ಭೌತಿಕವಾಗಿ ಪ್ರಭಾವಿಸುವ ಕೆಲಸವನ್ನು ಜೀವನ ಚರಿತ್ರೆ ಮಾಡಬೇಕು. ಇದನ್ನು ಉತ್ಪ್ರೇಕ್ಷೆಯಿಂದ ಮಾಡುವುದಲ್ಲ. ವ್ಯಕ್ತಿಯ ಬದುಕಿನಲ್ಲೆ ಸಹಜವಾಗಿ ಅಂತರ್ಗತವಾಗಿರುವ ವಿವರಗಳಿಂದ ಕೃತಪಡಿಸಬೇಕು. 'ಶತಮಾನದ ಗಣಿತಜ್ಞ' ಶ್ರೀನಿವಾಸ ರಾಮಾನುಜನ್ನರ ಬದುಕಲ್ಲಿ ಇದಕ್ಕೆ ಯಥೇಚ್ಛ ಅವಕಾಶವಿದೆ. ಈ ದೃಷ್ಟಿಯಿಂದ ನೋಡಿದಾಗ, ಟಿ. ಶ್ರೀವೆಂಕಟರಮಣ ಅವರು ಅನುವಾದಿಸಿರುವ ಸುರೇಶ್‌ರಾಮ್ ಅವರ 'ಶ್ರೀನಿವಾಸ ರಾಮಾನುಜನ್' ಒಂದು ಪೇಲವ ಪುಸ್ತಕ.

ಶ್ರೀನಿವಾಸ ರಾಮಾನುಜನ್‌ರ ಬದುಕಿನ ಸ್ಥಾಯಿ ಭಾವಗಳೆರಡು. ಒಂದು ಬೆರಗುಗೊಳಿಸುವ ಅವರ ಅದ್ಭುತ ಮೇಧಾಶಕ್ತಿ, ಮತ್ತೊಂದು, ನಮ್ಮನ್ನು ಅಲ್ಲಾಡಿಸುವ ಅವರ ಬದುಕಿನ ದುರಂತ. ಒಂದೆಡೆ ರಿಚರ್ಡ್ ಅಸ್ಕೆ ಹೇಳಿದ್ದಾರೆ: 'ರಾಮಾನುಜನ್ನರ ಹೆಚ್ಚುಗಾರಿಕೆ ಇರುವುದು ಆತ ಗಣ್ಯ ಗಣಿತಜ್ಞ ಎನ್ನುವುದು ಮಾತ್ರದಿಂದಲ್ಲ.

ಮನುಷ್ಯನಾದವನ ಬುದ್ಧಿ ಏನೇನನ್ನು ಸಾಧಿಸಬಲ್ಲದು ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ.... ರಾಮಾನುಜನ್ ಮರಣೋನ್ಮುಖರಾಗಿದ್ದ ಒಂದು ವರ್ಷದಲ್ಲಿ ಪ್ರಕಟಿಸಿದ ಕೃತಿ ಪರಮಶ್ರೇಷ್ಠ ಗಣಿತ ವಿದನೊಬ್ಬ ತನ್ನ ಜೀವನವಿಡೀ ಮಾಡುವ ಕೆಲಸಕ್ಕೆ ಸಮಾನವಾದದ್ದು.' ಇನ್ನೊಂದೆಡೆ ರಾಮಶೇಷನ್ ಹೇಳಿದ್ದಾರೆ. 'ರಾಮಾನುಜನ್ನರ ಬದುಕು ಒಂದು ದುರಂತನಾಟಕದಂತಿತ್ತು — ಕಣ್ಣೀರಿಡಲು ಸಾಧ್ಯವಾಗದ ಅತಿ ದುಃಖದ ಬದುಕು.' ಈ ಎರಡೂ ಅಂಶಗಳನ್ನು ಓದುಗರಿಗೆ ಸಮರ್ಥವಾಗಿ ಮುಟ್ಟಿಸುವಲ್ಲಿ ಪ್ರಸಕ್ತ ಪುಸ್ತಕ ಅಷ್ಟೇನು ಯಶಸ್ವಿಯಾಗಿಲ್ಲ. ರಾಮಾನುಜನ್ನರ ಬದುಕಿನ, ಹೆಚ್ಚು ಪ್ರಚಲಿತವಿರುವ, ಎಲ್ಲ ಪ್ರಮುಖ ಘಟನೆಗಳನ್ನ ಸಪ್ಪೆಯಾಗಿ ಪೋಣಿಸಿರುವಂತಿದೆ. ೮೭ ಪುಟಗಳ ಪುಸ್ತಕದಲ್ಲಿ ಸುಮಾರು ೪೦ ಪುಟಗಳಷ್ಟು ಆವರಿವರು ರಾಮಾನುಜನ್ನರ ಬಗ್ಗೆ ಹೇಳಿರುವ ಮಾತುಗಳೇ ಇವೆ. ಇವುಗಳನ್ನು ಓದುವಾಗ ಕೃತಿಗೆ ಲೇಖಕನ ಒರಿಜಿನಲ್ ಕಾಂಟ್ರಿಬ್ಯುಷನ್ ಏನು, ಓದುಗರಿಗೆ ನೀಡಿದ ಒಳನೋಟವೆಷ್ಟು ಎಂಬ ಪ್ರಶ್ನೆ ಏಳುತ್ತದೆ. ಒಬ್ಬ ವ್ಯಕ್ತಿಯ ಜೀವನ ಚರಿತ್ರೆ ಆ ಕಾಲದ ಇತಿಹಾಸದ ಇಣುಕು ನೋಟವೂ ಆಗಿರಬೇಕಾಗುತ್ತದೆ. ಏಕೆಂದರೆ ಅದರ ಪ್ರಭಾವದಲ್ಲಿ ಮನುಷ್ಯ ರೂಪುಗೊಂಡಿರುತ್ತಾನೆ. ಅಂಥ ಹೊಳಹುಗಳೇನು ಈ ಪುಸ್ತಕದಲ್ಲಿ ಕಾಣುವುದಿಲ್ಲ.

ಮಹಾನ್ ವ್ಯಕ್ತಿಯೊಬ್ಬನ ಬಗ್ಗೆ ತಿಳಿದುಕೊಳ್ಳುವಾಗ ಆತನಿಗೆ ಜನ್ಮವಿತ್ತ ತಂದೆ ತಾಯಿಗಳ ಬಗ್ಗೆಯೂ ನಾವು ಅಭಿಮಾನ ಪಡುವುದು ಮತ್ತು ಅವರು ಯಾರೆಂದು ತಿಳಿದುಕೊಳ್ಳುವ ಕುತೂಹಲ ಇಟ್ಟುಕೊಳ್ಳುವುದು ಸಹಜ. ಆದರೆ ಈ ಪುಸ್ತಕದಲ್ಲೆಲ್ಲೂ ರಾಮಾನುಜನ್ನರ ತಂದೆ ಕುಪ್ಪುಸ್ವಾಮಿ ಶ್ರೀನಿವಾಸ ಅಯ್ಯಂಗಾರ್ ಎಂದೂ ಮತ್ತು ತಾಯಿ ಕೋಮಲತಮ್ಮಾಳ್ ಎಂದೂ ಪ್ರಸ್ತಾಪವಾಗಿಲ್ಲದಿರುವುದು ಆಶ್ಚರ್ಯ, ಅದರಲ್ಲೂ ರಾಮಾನುಜನ್ ತಾಯಿಯಿಂದ ತುಂಬಾ ಪ್ರಭಾವಿತರಾಗಿದ್ದವರು. ಸಂದರ್ಭ ಬಂದಾಗಲೆಲ್ಲ ಅವರನ್ನು ತಂದೆ, ತಾಯಿ, ಹೆತ್ತವರು ಎಂದೇ ಸಂಬೋಧಿಸಲಾಗಿದೆ.

ಬಹುಶಃ ಪುಸ್ತಕದ ಪೇಲವತೆಗೆ ಅನುವಾದವೂ ಬಹುಮಟ್ಟಿಗೆ ಕಾರಣವಾಗಿದೆ. ಅನೇಕ ಕಡೆಗಳಲ್ಲಿ ವಾಕ್ಯರಚನೆಯಲ್ಲಿ ಮನವೊಪ್ಪುವ ಬಿಗಿಯಿಲ್ಲ; ಲಾಲಿತ್ಯವಿಲ್ಲ. ವಿಶೇಷತಃ ಪಾಶ್ಚಾತ್ಯರ ಉದ್ಧೃತಭಾಗಗಳು ಇಂಗ್ಲಿಷ್ ಜಾಡಿನ ಕನ್ನಡದ ಹಲವಾರು ವಾಕ್ಯಗಳು ಓದಲು ಹಿತವಾಗಿಲ್ಲ.

ರಾಮಾನುಜನ್ ಬಗ್ಗೆ ಕನ್ನಡದಲ್ಲೆ ನೇರವಾಗಿ ರಚಿತವಾಗಿರುವ ಎರಡು ಪುಸ್ತಕಗಳೊಂದಿಗೆ ಈ ಪುಸ್ತಕವನ್ನು ಹೋಲಿಸುವುದು ಇಲ್ಲಿ ಅಪ್ರಸ್ತುತವಾಗಲಾರದು. ಇವು ಬಿ. ಪಿ. ರಾಧಾಕೃಷ್ಣ ಮತ್ತು ಜಿ. ಟಿ. ನಾರಾಯಣರಾವ್ ಅವರು ಬರೆದಿರುವ 'ಶ್ರೀನಿವಾಸ ರಾಮಾನುಜನ್' ಎಂಬ ಒಂದೇ ಹೆಸರಿನ ಪುಸ್ತಕಗಳು. ಬಿ. ಪಿ. ರಾಧಾಕೃಷ್ಣ ಅವರ ಪುಸ್ತಕ ಸರಳ ಸೌಂದರ್ಯಕ್ಕೆ ಹಾಗೂ ವಿಷಯ ಸಮೃದ್ಧಿಗೆ, ಜಿ. ಟಿ. ನಾರಾಯಣರಾಯರ ಪುಸ್ತಕ 'ಸಾಂದ್ರ ಸೌಂದರ್ಯ'ಕ್ಕೆ ಹಾಗೂ ಗಣಿತ ಸಮೃದ್ಧಿಗೆ ಸಮಗೆ ಮುಖ್ಯವೆನಿಸುತ್ತವೆ. ಅಷ್ಟೆ ಅಲ್ಲದೆ ಇವು ನಮ್ಮನ್ನು

ಭೌತಿಕವಾಗಿ ಪ್ರಭಾವಿಸುವ ಗುಣವನ್ನು ಹೊಂದಿವೆ. ಪ್ರಸ್ತುತ ಪುಸ್ತಕ ಈ ಯಾವ ಕಾರಣಕ್ಕೂ ನಮ್ಮನ್ನು ತಟ್ಟುವುದಿಲ್ಲ. ಒಂದಂತು ನಿಜ. ಪುಸ್ತಕದಲ್ಲಿ ಸುಂದರವಾದ ಮುದ್ರಣವಿದೆ. ಆಕರ್ಷಕ ಹೊರನೋಟ ವಿದೆ. ರಾಮಾನುಜನ್‌ರ ಬಗೆಗಿನ ಮೇಲ್ಮೈ ಮಾಹಿತಿಗಾಗಿ ಈ ಪುಸ್ತಕವನ್ನು ಓದ ಬಹುದು.

ಲೈಂಗಿಕ ಸಮಸ್ಯೆಗಳು ಮತ್ತು ಪರಿಹಾರಗಳು—ಡಾ|| ಬಿ. ಡಿ. ಸತ್ಯ ನಾರಾಯಣ. ನವಕರ್ನಾಟಕ ಪ್ರಕಾಶನ, ಬೆಂಗಳೂರು; ಪುಟ: ೮೦; ಬೆಲೆ: ರೂ. ೨೦.

"ಉಪಯುಕ್ತ ಮಾಹಿತಿಯ 'ಲೈಂಗಿಕ ಸಮಸ್ಯೆಗಳು'"

ಏಡ್ಸ್‌ನ ಅಸ್ತಿತ್ವ ಮನುಷ್ಯನ ಅರಿವಿಗೆ ಬಂದ ಮೇಲೆ ಲೈಂಗಿಕ ಶಿಕ್ಷಣದ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಮಾಧ್ಯ ಮಿಕ ಶಾಲೆಯಿಂದಲೇ ಲೈಂಗಿಕ ಶಿಕ್ಷಣ ನೀಡ ಬೇಕು ಎಂಬ ಅಭಿಪ್ರಾಯಗಳು ಕೇಳಿ ಬರುತ್ತಿವೆ. ಲೈಂಗಿಕ ವಿಷಯಗಳ ಬಗ್ಗೆ ನಮ್ಮಲ್ಲಿರುವ ಮಡಿಯ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಶಿಕ್ಷಣ ನೀಡುವ ಕಾಲ ಇನ್ನು ಎಷ್ಟು ದೂರವಿದೆಯೋ ಅಲ್ಲಿಯ ವರೆಗೆ ಲೈಂಗಿಕ ಸಮಸ್ಯೆಗಳ ಬಗ್ಗೆ ತಜ್ಞರು ಬರೆದ ಪುಸ್ತಕಗಳೇ ಎಲ್ಲ ಅಕ್ಷರಸ್ಥರಿಗೆ ದಾರಿ ತೋರಬೇಕಾಗಿದೆ. ಈ ದೃಷ್ಟಿಯಿಂದ ಡಾ|| ಬಿ. ಡಿ. ಸತ್ಯನಾರಾಯಣ ಅವರ 'ಲೈಂಗಿಕ ಸಮಸ್ಯೆಗಳು ಮತ್ತು ಪರಿಹಾರ ಗಳು' ಒಂದು ಸ್ವಾಗತಾರ್ಹ ಪ್ರಕಟಣೆ.

'ಲೈಂಗಿಕ ವಿಷಯಗಳ ಬಗ್ಗೆ ಹೊಂದಿರುವ ಸಾಮಾನ್ಯ ತಿಳುವಳಿಕೆ ಸಹ ಹಲವು ಮಾನಸಿಕ ಮತ್ತು ಸಾಮಾಜಿಕ ವಿಪತ್ತು ಗಳನ್ನು ತಡೆಯಲು ಸಹಾಯವಾಗುತ್ತದೆ' ಎಂಬ ಆಶಯದೊಂದಿಗೆ ಬರೆಯಲಾಗಿರುವ ಈ ಪುಸ್ತಕದಲ್ಲಿ ಲೈಂಗಿಕ ರೋಗಗಳು ಹುಟ್ಟುವ ಮತ್ತು ಹಬ್ಬುವ ರೀತಿ, ಅವುಗಳ ಲಕ್ಷಣಗಳು ಮತ್ತು ಅವಗಳಿಗೆ ಪರಿಹಾರ ಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಲ್ಲದೆ ವೈದ್ಯರ ಆಯ್ಕೆ, ಸೂಜಿಮದ್ದಿನ ಸಾಂದರ್ಭಿಕ ಉಪಯೋಗ, ಸಂಚಾರಿ ವೈದ್ಯರ ಅವಾಂತರ, ವಿಕೃತ ಲೈಂಗಿಕತೆಯ ಅಪಾಯ ಇತ್ಯಾದಿಗಳ ಬಗ್ಗೆ ಎಚ್ಚರಿಕೆ ಹಾಗು ಆರೋಗ್ಯ ಪೂರ್ಣ ಲೈಂಗಿಕ ಚಟು ವಟಿಕೆಗೆ ಅನುಸರಿಸಬೇಕಾದ ಜೀವನ ಕ್ರಮದ ಬಗ್ಗೆ ಉಪಯುಕ್ತ ಮಾಹಿತಿ ಯನ್ನು ಒದಗಿಸಲಾಗಿದೆ.

ಪ್ರಾರಂಭದ ಕೆಲವು ಪುಟಗಳನ್ನು ಓದು ತ್ತಿರುವಂತೆ 'ಚಿಕ್ಕ ಚಿಕ್ಕ ವಾಕ್ಯಗಳು ಪುಟ್ಟ ಪುಟ್ಟ ಅಧ್ಯಾಯಗಳು; ಚೊಕ್ಕ ನಿರೂಪಣೆ. ಬೇಕೆಂದಷ್ಟೆ ವಿವರ' ಎಂದೆನಿಸಿ ಖುಷಿಯಾಗು ತ್ತದೆ. ಮುಂದೆ ಹದಿನಾಲ್ಕನೆ ಪುಟದಿಂದಾ ಚೆಗೆ, ರೋಗಗಳ ವಿವರಣೆ ಬಂದ ಕೂಡಲೆ, ವಾಕ್ಯಗಳ ಬಂಧ ಸಡಿಲಾಗಿ ತುಂಬಾ ಉದ್ದದ ವಾಕ್ಯಗಳು ಎದುರಾಗುತ್ತವೆ. ಕೆಲವೆಡೆ ಇವು ಅನಿವಾರ್ಯವಿರಬಹುದು. ಆದರೆ ಎಲ್ಲೆಡೆಯೂ ಅಲ್ಲ. ಉದಾಹರಣೆಗೆ ೧೪-೧೫ನೆ ಪುಟದಲ್ಲಿ ೭ ಸಾಲಿನ ಒಂದು ವಾಕ್ಯವಿದೆ. 'ಅನೇಕ ಸ್ಪರ್ಧೆಯಲ್ಲಿ.... ಬೇರೊಬ್ಬರಿಗೆ

ಅಂಟುತ್ತದೆ.' ಈ ವಾಕ್ಯವನ್ನು ಕನಿಷ್ಠ ನಾಲ್ಕು ಪುಟ್ಟ ಮತ್ತು ಹೆಚ್ಚು ಪರಿಣಾಮಕಾರಿಯಾದ, ವಾಕ್ಯಗಳನ್ನಾಗಿ ಮಾಡುವುದು ಸಾಧ್ಯವಿದೆ. ಇಂಥ ಅನೇಕ ವಾಕ್ಯಗಳು ಪುಸ್ತಕವನ್ನು ತುಂಬಿವೆ. ಪೂರ್ಣ ವಿರಾಮವನ್ನು ಸ್ವಲ್ಪ ಧಾರಾಳವಾಗಿ ಮತ್ತು ಅರ್ಥಪೂರ್ಣವಾಗಿ ಬಳಸುವುದರ ಮೂಲಕ ವಾಕ್ಯಗಳನ್ನು 'ಶುದ್ಧೀಕರಿಸಿ'ದ್ದರೆ ಪುಸ್ತಕ ಇನ್ನು ಹೆಚ್ಚು ಆಪ್ಯಾಯಮಾನವಾಗಿರುತ್ತಿತ್ತು.

'ಪತಿವ್ರತ ಮತ್ತು ಪತ್ನಿವ್ರತ ಜೀವನ ಆರೋಗ್ಯಕ್ಕೆ ಮೂಲ' ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಈ ಪುಸ್ತಕದಲ್ಲಿದೆ. ಲೈಂಗಿಕ ರೋಗಗಳನ್ನು ತಡೆಯುವೋಸುಗವೇ ನಮ್ಮ ಪೂರ್ವಿಕರು 'ಮದುವೆ' ಎಂಬ ಶಾಸ್ತ್ರಗಳನ್ನು ಜಾರಿಗೆ ತಂದಿರಬಹುದು ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯವನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿತ್ತು ಎನಿಸುತ್ತದೆ. ಏಕೆಂದರೆ ಇಂಥ ಸಮಸ್ಯೆಗಳಿಗೆ ಪರಿಹಾರ, ಮೂಲದಲ್ಲಿ, ಮನಃಪರಿವರ್ತನೆಯೆ ಆಗಿದೆ. ಆದ್ದರಿಂದ, ಲಭ್ಯವಿರುವ ಬೆಂಬಲ ಮಾಹಿತಿಯನ್ನು ಬಳಸಿಕೊಂಡು 'ಏಕಪತ್ನಿ ವ್ರತ....' ಅಂಶವನ್ನು ಮತ್ತಷ್ಟು ಗಟ್ಟಿಯಾಗಿ ಜನಮನದಲ್ಲಿ ಬೇರೂರುವಂತೆ ಮಾಡಲು ಪ್ರಯತ್ನಿಸಿದ್ದರೆ ಪುಸ್ತಕ ಹೆಚ್ಚು ಫಲಕಾರಿಯಾಗುತ್ತಿತ್ತು. ಉದಾ: ಸಮಾಜ ಶಾಸ್ತ್ರಜ್ಞರ ಪ್ರಕಾರ ವಿವಾಹ ಮತ್ತು ಕುಟುಂಬ ಅತ್ಯಂತ ಪುರಾತನವಾದ ಸಾಮಾಜಿಕ ಸಂಸ್ಥೆಗಳು ಪ್ರಪಂಚದಾದ್ಯಂತ ವಿವಾಹ ನಾಲ್ಕು ಬಗೆಗಳಲ್ಲಿ, ಸಮಾಜದ ವಿಕಾಸದ ಎಲ್ಲ ಹಂತಗಳಲ್ಲೂ, ಕಂಡು ಬಂದಿದೆ: ಏಕಪತ್ನಿತ್ವ, ಬಹುಪತ್ನಿತ್ವ ಹಾಗು ಸಾಮೂಹಿಕ ವಿವಾಹ. ಆದರೂ ಏಕಪತ್ನಿತ್ವವೇ ಕಾಲ ಪರೀಕ್ಷೆಯಲ್ಲಿ ಗೆದ್ದು ವ್ಯಾಪಕ ಮನ್ನಣೆಯನ್ನು ಗಳಿಸಿದೆ. ವಿವಾಹ ವೈಯಕ್ತಿಕವಾದುದಾದರೂ ಅದರ ಪ್ರಭಾವ ಇಡೀ ಸಮಾಜದ ಮೇಲೆ ಆಗುವುದರಿಂದ ಸಮಾಜವು ಇದಕ್ಕೆ ಅನೇಕ ಕಟ್ಟುಪಾಡುಗಳನ್ನು ವಿಧಿಸಿದೆ. ಈ ಕಟ್ಟುಪಾಡುಗಳನ್ನು ಮೀರಿದ ವರ್ತನೆಯೆ ಏಡ್ಸ್, ಸೂಳೆಗಾರಿಕೆ, ವಿಕೃತ ಲೈಂಗಿಕತೆ ಇತ್ಯಾದಿ ಲೈಂಗಿಕ ಸಮಸ್ಯೆಗಳಿಗೆ ಕಾರಣವಾಗಿದೆ. ಸ್ವೇಚ್ಛೆಯ 'ಅಪವರ್ತನೆ'ಯಿಂದ ಅಮೆರಿಕಾದಲ್ಲಿ ಇಂದು ಉದ್ಭವವಾಗಿರುವ ಅನೇಕ ಸಂಕೀರ್ಣ ಸಮಸ್ಯೆಗಳು ನಮ್ಮನ್ನು ದಂಗುಬಡಿಸುತ್ತವೆ. ಇದರಿಂದ ನಾವು ಕಲಿಯಬೇಕಾದ ಪಾಠ ಬಹಳಷ್ಟಿದೆ. ಅಮೆರಿಕದಲ್ಲಿ ಹಿಂದೆ ಕನ್ಯೆಯಾಗಿರುವುದೇ ಒಂದು ಲೇವಡಿಯ ವಿಷಯವಾಗಿತ್ತು. ೧೯೬೦ ರಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು 'ಕನ್ಯಾಮಾತೆ'ಯರಿದ್ದರು. ಏಡ್ಸ್‌ನ ದಾಳಿಯಿಂದಾಗಿ ದಿಗಿಲುಗೊಂಡಿರುವ ಆ ಸಮಾಜದಲ್ಲಿ ಇಂದು 'ಕನ್ಯೆಯರ ಸಂಘ'ಗಳು ತಲೆ ಎತ್ತುತ್ತಿವೆ. ಏಕಪತ್ನಿವ್ರತ ಮತ್ತು ಏಕಪತಿವ್ರತದ ಮಹತ್ವವನ್ನು ಅಲ್ಲಿನ ಜನ ನಿಧಾನವಾಗಿಯಾದರೂ ಅರ್ಥಮಾಡಿಕೊಳ್ಳುತ್ತಿದ್ದಾರೆ. ಹಲವು ಶತಮಾನಗಳ ಹಿಂದೆಯೆ ವಾತ್ಸ್ಯಾಯನ ಮನುಷ್ಯ ತನ್ನೆಲ್ಲ ಲೈಂಗಿಕ ಬಯಕೆಗಳನ್ನು ಸಮರ್ಥವಾಗಿ ಮತ್ತು ಸಂತೋಷವಾಗಿ ಒಬ್ಬರಲ್ಲಿ ಪೂರೈಸಿಕೊಳ್ಳುವುದು ಸಾಧ್ಯ ಮತ್ತು ಅಪೇಕ್ಷಣೀಯ ಎಂದು ಹೇಳಿದ್ದ. ಪೂರ್ವಿಕರ ಈ ಮಾತನ್ನು ನಾವು ಮರೆತರೆ ಅನಾಹುತ ಖಂಡಿತ.

ಸಸ್ತನಿಗಳ ಹೋರಾಟದ ಬದುಕು—ಸಾತನೂರು ದೇವರಾಜ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ; ಪುಟ: XX+೧೦೮, ಬೆಲೆ: ೨೩ ರೂ.

"ಸ್ವಾರಸ್ಯಕರ ಬದುಕಿನ ಸಸ್ತನಿಗಳು"

ಸೃಷ್ಟಿಯೆ ಒಂದು ಅದ್ಭುತ. ಈ ಅದ್ಭುತ ಸೃಷ್ಟಿಯಲ್ಲಿ ಸಸ್ತನಿಗಳ ಪಾಲು ಗಣನೀಯವಾದದ್ದು. ಎಲ್ಲ ಜೀವಿಗಳಿಗೂ ಬದುಕೇ ಒಂದು ಹೋರಾಟ ಬದುಕುಳಿಯಲು ಅವು ಅನೇಕ ತಂತ್ರಗಳನ್ನು ಬಳಸುತ್ತವೆ. ಸಸ್ತನಿಗಳು ತಮ್ಮ ಉಳಿವಿಗಾಗಿ ನಡೆಸುವ ಹೋರಾಟದ ಒಂದು ಪರಿಚಯ ಸಾತನೂರು ದೇವರಾಜ್ ಅವರ 'ಸಸ್ತನಿಗಳ ಹೋರಾಟದ ಬದುಕು' ಪುಸ್ತಕದಲ್ಲಿ ಸಿಗುತ್ತದೆ.

ಪರಿಸರದೊಂದಿಗೆ ಹೊಂದಾಣಿಕೆ, ಆಹಾರ ವೈವಿಧ್ಯತೆ, ಸಂತಾನಾಭಿವೃದ್ಧಿ ಮತ್ತು ಕೌಟುಂಬಿಕ ಜೀವನ ಇತ್ಯಾದಿ ಎಂಟು ಅಧ್ಯಾಯಗಳ ಅಡಿಯಲ್ಲಿ ಸಸ್ತನಿಗಳ ಬದುಕಿನ ಅನೇಕ ಸ್ವಾರಸ್ಯಕರ ಹಾಗು ವಿಸ್ಮಯಕರ ಸಂಗತಿಗಳನ್ನು ಲೇಖಕರು ಕಲೆ ಹಾಕಿದ್ದಾರೆ. ಇಡೀ ಪುಸ್ತಕದಲ್ಲಿ ಹಲವಾರು ಸಸ್ತನಿಗಳ ಉಲ್ಲೇಖ ಕ್ಷಿಪ್ರವಾಗಿ ಬಂದು ಹೋಗುತ್ತದೆ. ನೇರ ನಿರೂಪಣೆ, ನಿರಾಡಂಬರ ಭಾಷೆ ಇದಕ್ಕೆ ಹೊಂದಿಕೆಯಾದ ವಿಷಯವೇ ಕುತೂಹಲಕಾರಿಯಾದದ್ದರಿಂದ ಓದಿಸಿಕೊಂಡು ಹೋಗುತ್ತದೆ.

ಕಷ್ಟವೆಂದರೆ, ಎಲ್ಲ ಅಧ್ಯಾಯಗಳಲ್ಲೂ ವಿಷಯ ಓತಪ್ರೋತವಾಗಿ ಹರಿದಿದೆ. ಒಂದು ಶಿಸ್ತಿಲ್ಲ, ಕ್ರಮವಿಲ್ಲ. ಪ್ರಾರಂಭದಲ್ಲಿ ಸಸ್ತನಿಗಳೆಂದರೇನು? ಅವುಗಳಲ್ಲಿ ಎಷ್ಟು ವಿಧ? ಇತ್ಯಾದಿ ಸಿದ್ಧತಾ ವಿವರಗಳನ್ನು ನೀಡಿ ಮುಂದೆ ಹೋಗಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಈ ಪುಸ್ತಕವನ್ನು ಓದುವವರೆಲ್ಲ ಪ್ರಾಣಿ ಶಾಸ್ತ್ರದಲ್ಲಿ ಶಿಷ್ಟ ಶಿಕ್ಷಣ ಪಡೆದವರಾಗಿರುವುದಿಲ್ಲ. ಆಯಾ ಅಧ್ಯಾಯಗಳಲ್ಲಿ ಸಸ್ತನಿಗಳ ಯುಕ್ತ ವರ್ಗೀಕರಣದೊಂದಿಗೆ (ಉದಾ: 'ಪರಿಸರದೊಂದಿಗೆ ಹೊಂದಾಣಿಕೆ.' ಅಧ್ಯಾಯದಲ್ಲಿ ಮರಳುಗಾಡಿನ ಸಸ್ತನಿಗಳು, ಶೀತ ಪ್ರದೇಶದ ಸಸ್ತನಿಗಳು ಮುಂತಾಗಿ) ಉಪಶೀರ್ಷಿಕೆಗಳ ಅಡಿಯಲ್ಲಿ, ವಿಷಯಗಳನ್ನು ನಿರೂಪಿಸಿದ್ದರೆ ಓದುಗರು ಪುಸ್ತಕದ ಹೂರಣವನ್ನು ಗರ್ಭೀಕರಿಸಿಕೊಳ್ಳುವುದು ಸುಲಭವಾಗುತ್ತಿತ್ತು.

ಸಸ್ತನಿಗಳ ಸಂತೆಯಂತೆ ಕಲಸುಮೇಲೋಗರವಾಗಿರುವ ಇದರಲ್ಲಿ ನಮಗೆ ಯಾವುದೇ ಒಂದು ಸಸ್ತನಿಯ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಹುಡುಕುವುದು ಕಷ್ಟ. ಕೊನೆಯಲ್ಲಿ ವಿಷಯ ಸೂಚಿ ಇದ್ದಿದ್ದರೆ ಅನುಕೂಲವಾಗುತ್ತಿತ್ತು.

ಇಡೀ ಪುಸ್ತಕವನ್ನು ಓದಿದ ಮೇಲೆ, 'ಸಸ್ತನಿಗಳ ಹೋರಾಟದ ಬದುಕು' ಎಂಬ ಹೆಸರಿರುವ ಈ ಪುಸ್ತಕದಲ್ಲಿ ಸಸ್ತನಿಗಳ ಹೋರಾಟದ ಕೆಚ್ಚನ್ನು ಓದುಗರಿಗೆ ವೇದ್ಯಗೊಳಿಸುವಂತಹದ್ದು ಏನಿದೆ ಎಂಬ ಪ್ರಶ್ನೆ ಉಳಿದುಬಿಡುತ್ತದೆ. ಇದರಲ್ಲಿ ಪ್ರಸ್ತಾಪವಾಗಿರುವುದೆಲ್ಲ ಸಸ್ತನಿಗಳ ಸ್ವಾಭಾವಿಕ ಬದುಕಿನ ಶೈಲಿಯ ವಿವರವಷ್ಟೆ ಅಲ್ಲವೆ ಅನಿಸುತ್ತದೆ.

ಎ. ಓ. ಆವಲಮೂರ್ತಿ

ಈ ಸಂಚಿಕೆಯ ಲೇಖಕರು—

ಸರ್ಗತ್ರೀಗಳಾದ—

೧. ಡಾ|| ದೇ. ಜವರೇಗೌಡ
ವಿಶ್ರಾಂತ–ಕುಲಪತಿಗಳು
'ಕಲಾ ನಿಲಯ', ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–೫೭೦೦೧೨

೨. ಡಾ|| ಹಾ. ತಿ. ಕೃಷ್ಣೇಗೌಡ
'ಚೈತ್ರ ಪಲ್ಲವಿ'
ಎಂ. ೨೬, ಸಿ.ಐ.ಟಿ.ಬಿ. ೨ನೇ ಹಂತ
ಕುವೆಂಪುನಗರ, ಮೈಸೂರು–೫೭೦ ೦೨೩

೩. ಡಾ|| ಮ. ಸು. ಕೃಷ್ಣಮೂರ್ತಿ
೭೧೮, ೧೬ನೇ ಮುಖ್ಯ ರಸ್ತೆ
ಸರಸ್ವತೀಪುರಂ, ಮೈಸೂರು–೫೭೦ ೦೦೯

೪. ಗೋಪಾಲ ಆಶ್ರಿತ
"ರಮಾ ನಿಲಯ", ಜವಾಹರ ನಗರ
ರಾಯಚೂರು-೫೮೪ ೧೦೧

೫. ಹಂಸ ಬಿತಾಳ
ನಂ. ೬೧೧, 'ಚಂದನ'
೭ನೇ ಕ್ರಾಸ್, ಅನಿಕೇತನ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೬. ಕೆ. ಶಾಂತಾಮಣಿ
ನಂ. ೧೦೦೯, 'ಕಲ್ಪದ್ರುಮ'
ಇ ಮತ್ತು ಎಫ್ ಬ್ಲಾಕ್
ಉದಯರವಿ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩

೭. ಟಿ. ವೆಂಕಟೇಶ
ರಾಜ್ಯ ಸಂಪನ್ಮೂಲ ಕೇಂದ್ರ
ನಂ. ೫೦೧, ಎ–ಬಿ ಬ್ಲಾಕ್
ಕುವೆಂಪುನಗರ, ಮೈಸೂರು–೫೭೦೦೨೩

೮. ಪರಮಶಿವ ನಡುಬೆಟ್ಟ
ನಂ. ೧೩, ಸಾರ್ವಜನಿಕ ಹಾಸ್ಟೆಲ್ ರಸ್ತೆ
ವಿದ್ಯಾರಣ್ಯಪುರಂ
ಮೈಸೂರು–೫೭೦ ೦೦೮

೯. ಅರುಣ್ ಚಂದ್ರ ಮುಧೋಳ್
"ರಜಾಶ್ರೀ"
೧೧೬೭–ಬಿ ೧, ಹೆಚ್.ಐ.ಜಿ., ೧ನೇ ಕ್ರಾಸ್
ಶ್ರೀರಾಮಪುರ, ಎರಡನೇ ಹಂತ
ಮೈಸೂರು–೫೭೦೦೨೩

೧೦. ಡಿ. ಎಸ್. ಶ್ರೀನಾಥ್
ಅಧ್ಯಾಪಕರು
ಕಸ್ತೂರ್‌ಬಾ ವಿದ್ಯಾರ್ಥಿನಿಯರ ಪದವಿಪೂರ್ವ ಕಾಲೇಜು
(ಹೈಸ್ಕೂಲ್ ವಿಭಾಗ) ಅಂಚೆ ಪೆಟ್ಟಿಗೆ ನಂ. ೧೫,
ಶಿವಮೊಗ್ಗ–೫೭೭ ೨೦೧

೧೧: ಎ. ಓ. ಆವಲಮೂರ್ತಿ
೩೭೫೫, 'ಸಂಪ್ರತಿ', ದೇಶದ ಪೇಟೆ,
ದೊಡ್ಡಬಳ್ಳಾಪುರ–೫೬೧೨೦೩

Reg. No. KRNN. 29 / WPP 6

LICENCE No. 21
LICENCED TO POST WITH PAYMENT

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone : 512485